ವಾಲ್ಮೀಕಿ ಹೃದಯ

ಬರೆದವರು :
ರಾಮಾಯಣದ ರಾಮಚಂದ್ರರಾವ್

★

ಬೆಲೆ : ೧-೦-೦

॥ ಶ್ರೀ ॥

ವಾಲ್ಮೀಕಿ ಹೃದಯ

ಬರೆದವರು :

ರಾಮಾಯಣದ ರಾಮಚಂದ್ರರಾವ್

೧೯೫೫]

[ಬೆಲೆ: 1—0—0

ಮೊದಲನೆಯ ಮುದ್ರಣ : 1955

ಪ್ರಕಾಶಕರು :

ರಾಮಾಯಣದ ರಾಮಚಂದ್ರರಾವ್

ರಿ॥ ಶಾ॥ ಹೆಮ್ಮನಿಷಿ, ರಾಮಕೃಷ್ಣಪುರ, ಆನೇಕಲ್ ತಾ॥

ಮುದ್ರಕರು :

ಸುಬೋಧ ಮುದ್ರಣಾಲಯ

ಬೆಂಗಳೂರು ೨.

ಮುನ್ನುಡಿ

ನನ್ನ ಪೂಜ್ಯ ಮಿತ್ರರಾದ ಶ್ರೀಮಾನ್ ರಾಮಾಯಣಂ ರಾಮಚಂದ್ರರಾಯರವರು, ಬಹು ದಿನಗಳಿಂದ ಅಪೇಕ್ಷಿತ ವಾಗಿದ್ದ ಈ ಗ್ರಂಥವನ್ನು ಶ್ರೀರಾಮಾನುಗ್ರಹದಿಂದ ಬರೆದು, ಪ್ರಕಟಿಸಲು ಸಾಧ್ಯವಾದುದು ನನಗೆ ಅಮಿತಾನಂದ ವನ್ನುಂಟುಮಾಡಿದೆ. ಅವರು ತಮ್ಮ ಪೀಠಿಕೆಯಲ್ಲಿ ಹೇಳಿರು ವಂತೆ ಶ್ರೀಮಾನ್ ಬಿ. ರಾಮಯ್ಯನವರು, ಆಂಗ್ಲಭಾಷೆಯಲ್ಲಿ 'The heart of Shakspear', ಎಂಬ ಗ್ರಂಥವಿರು ವಂತೆ, ನಮ್ಮಲ್ಲೂ '**ವಾಲ್ಮೀಕಿ ಹೃದಯ**'ವೆಂಬ ಇಂತಹ ಒಂದು ಗ್ರಂಥವಿರುವುದು ಬಹು ಪ್ರಯೋಜನಕಾರಿ ಎಂದು ಒಮ್ಮೆ ಅಭಿಪ್ರಾಯಪಟ್ಟದ್ದನ್ನು ಮನಸ್ಸಿಗೆತಂದು ಶ್ರೀಮಾನ್ ರಾಮಚಂದ್ರರಾಯರು ಈ ರೀತಿ ಸಾರ್ಥಕಗೊಳಿಸಿರುವುದು ಶ್ಲಾಘನೀಯವಾದ ಸೇವೆ ಎನ್ನಲು ಏನೂ ಸಂದೇಹವಿಲ್ಲ. ಶ್ರೀಮದ್ರಾಮಾಯಣ-ಮಹಾಭಾರತಗಳು ಭಾರತೀಯರ ಜೀವನ ಸರ್ವಸ್ವ-ಭಾರತೀಯ ಸಂಸ್ಕೃತಿಯ ತಾಯ್ಬೇರು ಎಂಬುದು ಸರ್ವಮಾನ್ಯ ವಿಚಾರವಲ್ಲವೆ ? ಇಂತಹ ಅಮೂಲ್ಯವೂ ಅಪೂರ್ವವೂ ಆದ ವಿಚಾರವನ್ನು ಎತ್ತಿ ಕೊಂಡು ಈ ಸಾರ್ಥಕವಾದ ಸೇವೆ ಸಲ್ಲಿಸಿರುವ ಶ್ರೀ ರಾಮ ಚಂದ್ರರಾಯರು ಆಬಾಲವೃದ್ಧರಾದ ಸರ್ವರ ಕೃತಜ್ಞತೆಗೂ ಪಾತ್ರರಾಗಿದ್ದಾರೆ. ಕನ್ನಡಿಗರಾದ ಆಸ್ತಿಕ ಬಾಂಧವರು ಈ ಗ್ರಂಥವನ್ನು ಪುರಸ್ಕರಿಸಿ, ಪಠಿಸಿ ಆನಂದಿಸುವ ಮೂಲಕ ಇವರ ಈ ಪರಿಶ್ರಮವನ್ನು-ಸಾರ್ಥಕಪಡಿಸಬೇಕೆಂದು ಸವಿನಯ ಪ್ರಾರ್ಥನೆ.

ಬೆಂಗಳೂರು
8-12-55

ಸುಬೋಧ ಎಂ. ರಾಮರಾವ್.

ಪೀಠಿಕೆ

ಶ್ರೀರಾಮ ಶ್ರೀರಾಮ ಶ್ರೀರಾಮರಾಮ ।
ಶ್ರೀರಾಮ ಶ್ರೀರಾಮರಾಮ ಶ್ರೀರಾಮ ॥
ಶ್ರೀರಾಮ ರಾಮ ರಘುನಂದನ ರಾಮರಾಮ ।
ಶ್ರೀರಾಮರಾಮ ಭರತಾಗ್ರಜ ರಾಮರಾಮ ॥
ಶ್ರೀರಾಮರಾಮ ರಣಕರ್ಕಶ ರಾಮರಾಮ ।
ಶ್ರೀರಾಮರಾಮ ಶರಣಂ ಭವ ರಾಮರಾಮ ॥

ನಾನು ಈಗಿನ ಬಂಗಾರುಪೇಟೆಯ ತಾಲ್ಲೂಕು ಕಛೇರಿಯಲ್ಲಿ ಉದ್ಯೋಗದಲ್ಲಿದ್ದಾಗ, ಒಬ್ಬ ಮಹನೀಯರ ಸತ್ಸಹವಾಸದಿಂದ, ಶ್ರೀಮದ್ರಾಮಾಯಣ ಪಾರಾಯಣ ಮೂಲ ಮಂತ್ರವು ನನಗೆ ಉಪದೇಶವಾಗಿ, ನಾನು ನಿತ್ಯವೂ ಆದಿ ಕಾವ್ಯವನ್ನು ವಾಚೋವಿಧೇಯವಾಗಿ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ, ಪ್ರತಿನಿತ್ಯವೂ ಸಾಧ್ಯವಾದಷ್ಟು ಕೈಯಿಂದ ಬರೆಯಲು ಪ್ರಾರಂಭಮಾಡಿ, ಎರಡು ವರ್ಷಗಳಲ್ಲಿ ಪೂರ್ತಿ ಮಾಡಿ, ಅಂದಿನಿಂದ ಈವರೆವಿಗೂ ಮನನ ಮಾಡುತ್ತಲೇ ಇದ್ದೇನೆ. ಇದರಲ್ಲಿ ಹಿರಿಯರಿಗೂ, ಕಿರಿಯರಿಗೂ ಸ್ತ್ರೀಯರೇ ಮುಂತಾಗಿ ಸರ್ವರಿಗೂ ಆಚರಿಸಲು ಅರ್ಹವಾದ, ಸತ್ಯ, ಧರ್ಮ, ಅಹಿಂಸೆ, ಪಿತೃಭಕ್ತಿ, ಮಾತೃಭಕ್ತಿ, ಪತಿವ್ರತಾ ಧರ್ಮ ಮುಂತಾದ ಜ್ಞಾನಸಾಧನೆಗೆ ಅವಶ್ಯವಾದ ಅನೇಕ ವಿಷಯಗಳು ಅಡಗಿರುತ್ತವೆ.

ಶ್ರೀಮದ್ರಾಮಾಯಣದಲ್ಲಿ, ಶ್ರೀರಾಮನು ಲೋಕಕ್ಕೆ ಚೆನ್ನಾಗಿ ಬೋಧೆಯಾಗುವ ಹಾಗೆ ತಾನೇ ಮೇಲ್ಕಂಡ ಧರ್ಮಗಳನ್ನು ತನ್ನ ಅವತಾರ ಲೀಲೆಗಳಲ್ಲಿ ಆಚರಿಸಿ, ಕಥೆಯಲ್ಲಿ ತೋರಿಸಿರುತ್ತಾನೆ. ನಾನು ಸಣ್ಣ ನೌಕರಿಯಲ್ಲಿದ್ದು, ಸಾಧ್ಯವಾದಮಟ್ಟಿಗೆ, ರಾಮಾಯಣದಲ್ಲಿ ಹೇಳಿರುವ ನೀತಿಯನ್ನು ಅನುಸರಿಸಿಕೊಂಡು ಕರ್ತವ್ಯ ಮಾಡುತ್ತಿದ್ದುದರಿಂದ,

ನನ್ನ ಮೇಲ್ಪಟ್ಟ ಅಧಿಕಾರಿಗಳಲ್ಲಿ, ವಿನಯ, ಸತ್ಯ, ದಕ್ಷತೆ, ಶಾಂತತೆ ಇವುಗಳಿಂದ ಅವರ ಪ್ರೀತಿಗೆ ಅರ್ಹನಾಗಿ, ಒಳ್ಳೆಯ ಕೀರ್ತಿಯಿಂದ, ನಿವೃತ್ತನಾಗಿ ಇಂಥಾ ನನ್ನ ವೃದ್ಧಾಪ್ಯದಲ್ಲಿ, ಶಾಂತ ಮನಸ್ಕನಾಗಿ ಕಾಲಕಳೆಯಲು ಸಾಧ್ಯವಾಗಿದೆ.

ಆಯಾಯ ಸಂದರ್ಭಕ್ಕೆ ಅನುಗುಣವಾದ, ಶ್ಲೋಕಗಳಲ್ಲಿ ಕೆಲವನ್ನು ಆಗಾಗ ನಮ್ಮ ಸ್ನೇಹಿತರಲ್ಲಿಯೂ, ಅಧಿಕಾರಿ ಗಳಲ್ಲಿಯೂ ಹೇಳುವದು ನನ್ನ ವಾಡಿಕೆ. ಅಂಥ ಒಂದು ಸಂದರ್ಭದಲ್ಲಿ, ಬೆಂಗಳೂರು ಬಸವನಗುಡಿಯಲ್ಲಿರುವ, ನನ್ನ ಪೂಜ್ಯ ಬಂಧುಗಳಾದ, ಮುಜರಾಯಿ ಸೂಪರಿಂಟೆಂಡೆಂಟ ರಾಗಿದ್ದು, ಹಾಲಿ ವಿಶ್ರಾಂತಿ ಸುಖವನ್ನನುಭವಿಸುತ್ತಿರುವ, ಶ್ರೀ ಬಿ. ರಾಮಯ್ಯನವರು, ನನ್ನನ್ನು ಪ್ರೋತ್ಸಾಹಿಸಿ, ಸದರಿ ಶ್ಲೋಕಗಳನ್ನೂ, ಆಯಾಯಾ ಶ್ರೇಷ್ಠ ಗುಣಗಳನ್ನೂ ಬೇರೆ ಬೇರೆಯಾಗಿ ವಿಂಗಡಿಸಿ, ಶ್ಲೋಕ ಮತ್ತು ಅರ್ಥ ಇರುವಂತೆ, ಆರಿಸಿ, ಬರೆಯುವಂತೆ ಸಲಹೆ ಕೊಟ್ಟಮೇಲೆ, ಯಥಾಮತಿ ಯಾಗಿ, ಈ ಗ್ರಂಥವನ್ನು ರಚಿಸಿ ಇದಕ್ಕೆ '**ವಾಲ್ಮೀಕಿ ಹೃದಯ**'ವೆಂದು ಹೆಸರಿಟ್ಟಿದ್ದೇನೆ. ಪ್ರಾಜ್ಞರು ಇದನ್ನು ಹಂಸಕ್ಷೀರ ನ್ಯಾಯದಿಂದ ಓದಿ ಕೃತಾರ್ಥರಾಗಿ, ಶ್ರೀರಾಮರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ನನ್ನ ವಿಜ್ಞಾಪನೆ. ಮಹನೀಯರು, ಈ ಗ್ರಂಥದಲ್ಲಿ ಸೇರಿಸಬೇಕಾದುದು ಇನ್ನೇ ನಾದರೂ ಇದ್ದರೆ, ನನಗೆ ತಿಳಿಸಿದಲ್ಲಿ ಮುಂದಿನ ಮುದ್ರಣದಲ್ಲಿ ಸರಿಪಡಿಸುತ್ತೇನೆ.

ಈ ಪುಸ್ತಕದ ಹಸ್ತಪತ್ರಿಯೊಡನೆ ಮುದ್ರಣದ ಪ್ರತಿ ಗಳನ್ನು ತಿದ್ದಿ, ಚಿಕ್ಕ ಸೈಜಿನಲ್ಲಿ ಅಂದವಾಗಿ ಮುದ್ರಿಸಿ ಕೊಟ್ಟು, ನನಗೆ ಸಹಾಯಮಾಡಿದ ಸುಬೋಧ ಮುದ್ರಣಾಲ

ಯದ ಮಾಲೀಕರಾದ ಶ್ರೀಮಾನ್ ಎಂ. ರಾಮರಾಯರಿಗೂ, ಈ ಗ್ರಂಥ ರಚನೆಯಲ್ಲಿ ನನ್ನನ್ನು ಹುರಿದುಂಬಿಸಿದ ಇತರ ಹಿತೈಷಿಗಳಿಗೂ ಚಿರಋಣಿಯಾಗಿದ್ದೇನೆ.

ದಯವಿಟ್ಟು ಸಕಲರೂ ಈ ಪುಸ್ತಕವನ್ನು ಸ್ವೀಕರಿಸಿ, ಇದರಲ್ಲಿರುವ ದಿವ್ಯಾಂಶಗಳನ್ನು ಪಠಿಸಿ, ಶ್ರೀರಾಮರ ಕೃಪೆಗೆ ಪಾತ್ರರಾಗಬೇಕೆಂದು ನನ್ನ ವಿನಯ ಪೂರ್ವಕವಾದ ಬಿನ್ನಹ.

ಮನ್ಮಥ ಸಂವತ್ಸರ
ಕಾರ್ತೀಕ ಬಹುಳ ದ॥
ತಾ॥ 8-12-1955

ಇತಿ ಸಜ್ಜನ ವಿಧೇಯ,
ರಾಮಾಯಣದ
ರಾಮಚಂದ್ರರಾವ್.

ವಿಷಯ ಸೂಚಿ

ಶ್ರೀರಾಮ ಪ್ರಸನ್ನ.

ವಾಲ್ಮೀಕಿ ಹೃದಯ

ಸತ್ಯ

ಸರಾಜ ರಾಜೋಭವ ಸತ್ಯಸಂಗರಃ
ಕುಲಂಚ ಶೀಲಂಚ ಹಿ ರಕ್ಷ ಜನ್ಮಚ
ಪರತ್ರವಾಸೇಹಿ ವದಂತ್ಯನುತ್ತಮಂ
ತಪೋಧನಾ ಸ್ಸತ್ಯವಚೋಹಿತಂ ನೃಣಾಂ

ಅಯೋಧ್ಯಾಕಾಂಡ, ಸರ್ಗ ೧೧, ಶ್ಲೋಕ ೨೯

ಕೈಕೇಯಿಯು ದಶರಥನನ್ನು ಕುರಿತು,-ಎಲೈ ರಾಜನೆ, ನೀನು ರಾಜಾಧಿರಾಜನೆಂದೂ, ಸತ್ಯಸಂಧನೆಂದೂ ಲೋಕದಲ್ಲಿ ಪ್ರಸಿದ್ಧನಾಗು. ಇದಕ್ಕೆ ಕುಂದಕವಾಗದಂತೆ ನಿನ್ನ ಕುಲ ನಡತೆ ಮತ್ತು ನಿನ್ನ ಜನ್ಮವನ್ನು ಕಾಪಾಡಿಕೊ. ಪುಣ್ಯಲೋಕ ಪ್ರಾಪ್ತಿಗೆ ಮನುಷ್ಯರಲ್ಲಿ ಸತ್ಯ ವಚನವೇ ಹಿತವೆಂತಲೂ ಶ್ರೇಷ್ಠವಾದ್ದೆಂತಲೂ ತಪಸ್ವಿಗಳು ಹೇಳುತ್ತಾರೆ.

ಆಹುಸ್ಸತ್ಯಂಹಿ ಪರಮಂ ಧರ್ಮಂ
ಧರ್ಮವಿದೋಜನಾಃ ।
ಸತ್ಯಮಾಶ್ರಿತ್ಯಹಿ ಮಯಾತ್ವಂಚಧರ್ಮಂ
ಪ್ರಚೋದಿತಃ ॥

ಅಯೋಧ್ಯಾಕಾಂಡ, ಸರ್ಗ ೧೪, ಶ್ಲೋಕ ೩

ಧರ್ಮಜ್ಞರಾದವರು ಸತ್ಯವೇ ಶ್ರೇಷ್ಠವಾದ ಧರ್ಮವೆಂದು ಹೇಳುವರು. ಆ ಸತ್ಯವನ್ನೇ ನಾನು ಅವಲಂಬಿಸಿ ಅದರಂತೆ ನಡೆಯಲು ನಿನ್ನನ್ನು ಪ್ರೇರೇಪಿಸುವೆನು.

ಸತ್ಯಮೇಕ ಪದಂಬ್ರಹ್ಮ ಸತ್ಯೆ ಧರ್ಮಃ ಪ್ರತಿಷ್ಠಿತಃ ।
ಸತ್ಯ ಮೇವಾಕ್ಷಯಾ ವೇದಾ ಸತ್ಯೇನಾವಾಪ್ಯತೇ
ಪರಂ ॥

ಅಯೋಧ್ಯಾಕಾಂಡ, ಸರ್ಗ ೧೪, ಶ್ಲೋಕ ೭

ಸತ್ಯವೇ ಏಕಮಾತ್ರ ಬ್ರಹ್ಮವೆಂತಲೂ, ಸತ್ಯದಲ್ಲಿಯೇ ಧರ್ಮವು ನೆಲಸಿರುತ್ತೆಂತಲೂ, ನಾಶರಹಿತವಾದ ವೇದಗಳೂ ಸತ್ಯವೇ ಎಂತಲೂ ಸತ್ಯದಿಂದಲೇ ಪುಣ್ಯಲೋಕ ಪ್ರಾಪ್ತಿ ಹೊಂದಲ್ಪಡುತ್ತೆಂತಲೂ ಹೇಳುತ್ತಾರೆ.

ಸತ್ಯಂ ಸಮನುವರ್ತಸ್ವಯದಿಧರ್ಮೇ ಧೃತಾಮತಿಃ ॥

ಅಯೋಧ್ಯಾಕಾಂಡ, ಸರ್ಗ ೧೪, ಶ್ಲೋಕ ೮

ನಿನಗೆ ಧರ್ಮದಲ್ಲಿ ಬುದ್ಧಿಯು ಸ್ಥಿರವಾಗಿದ್ದರೆ ಆ ಸತ್ಯವನ್ನೇ ಅನುಸರಿಸಿ ನಡೆ ಎಂಬುದಾಗಿ ಕೈಕೇಯಿಯು ಭರ್ತೃವಾದ ದಶರಥನಿಗೆ ಹೇಳಿದಳು.

ಋಷಯಶ್ಚೈವ ದೇವಾಶ್ಚ ಸತ್ಯಮೇವಹಿಮೇನಿರೆ ।
ಸತ್ಯವಾದೀಹಿ ಲೋಕೇಸ್ಮಿ ಪರಮಂ ಗಚ್ಛತಿಕ್ಷಯಂ ॥

ಅಯೋಧ್ಯಾಕಾಂಡ, ಸರ್ಗ ೧೦೯, ಶ್ಲೋಕ ೧೧

ಶ್ರೀರಾಮನು ಜಾಬಾಲಿಯನ್ನು ಕುರಿತು, ಋಷಿಗಳೂ ದೇವತೆಗಳೂ ಸಹ ಸತ್ಯವೇ ಮೇಲಾದ ಧರ್ಮವೆಂದು ಎಣಿ

ಸಿರುವರು. ಈ ಲೋಕದಲ್ಲಿ ಸತ್ಯವಂತನೇ ಶ್ರೇಷ್ಠವಾದ ಸ್ಥಾನವನ್ನು ಹೊಂದುವನು.

ಉದ್ವಿಜಂತೇ ಯಥಾ ಸರ್ಪಾನ್ನರಾದನೃತವಾದಿನಃ ।
ಧರ್ಮಸ್ಸತ್ಯಂ ಪರೋಲೋಕೇ ಮೂಲಂ ಸ್ವರ್ಗಸ್ಯ ಚೋಚ್ಯತೇ ॥

ಅಯೋಧ್ಯಾಕಾಂಡ, ಸರ್ಗ ೧೦೯, ಶ್ಲೋಕ ೧೨

ಸುಳ್ಳಾಡುವವರನ್ನು ಕಂಡಾಗ ಸರ್ಪವನ್ನು ಕಂಡಂತೆ ನಡುಗುವರು. ಸತ್ಯವೇ ಲೋಕದಲ್ಲಿ ಶ್ರೇಷ್ಠವಾದ ಧರ್ಮವು ಮತ್ತು ಸತ್ಯವೆಂಬುವುದೇ ಸ್ವರ್ಗಕ್ಕೆ ಮೂಲಾಧಾರವಾದದ್ದು.

ಸತ್ಯಮೇವೇಶ್ವರೋ ಲೋಕೇ ಸತ್ಯಂ ಪದ್ಮಾಂಶ್ರಿತಾ ಸದಾ ।
ಸತ್ಯ ಮೂಲಾನಿ ಸರ್ವಾಣಿ ಸತ್ಯಾನ್ನಾಸ್ತಿ ಪರಂ ಪದಂ॥

ಅಯೋಧ್ಯಾಕಾಂಡ, ಸರ್ಗ ೧೦೯, ಶ್ಲೋಕ ೧೩

ಲೋಕದಲ್ಲಿ ಸತ್ಯವೇ ಪರದೈವವು. ಸತ್ಯವನ್ನೇ ಲಕ್ಷ್ಮಿಯು ಆಶ್ರಯಿಸಿರುವಳು. ಸತ್ಯವೇ ಸಮಸ್ತಕ್ಕೂ ಆಧಾರಭೂತವಾದದ್ದು. ಸತ್ಯಕ್ಕಿಂತಲೂ ಬೇರೆ ಸ್ಥಾನ ಯಾವದೂ ಇಲ್ಲ.

ದತ್ತಮಿಷ್ಟಂ ಹುತಂ ಚೈವ ತಪ್ತಾನಿ ಚ ತಪಸಾಂಸಿ ಚ।
ವೇದಾಸ್ಸತ್ಯ ಪ್ರತಿಷ್ಠಾನಾಸ್ತಸ್ಮಾತ್ಸತ್ಯ ಪರೋಭವೇತ್॥

ಅಯೋಧ್ಯಾಕಾಂಡ, ಸರ್ಗ ೧೦೯, ಶ್ಲೋಕ ೧೪

ದಾನವಾಗಲೀ ಯಜ್ಞಯಾಗಾದಿಗಳಾಗಲೀ ತಪಸ್ಸಾಗಲೀ ವೇದಗಳಾಗಲೀ ಸಮಸ್ತವೂ ಸತ್ಯವೇ ಆಧಾರವಾಗುಳ್ಳವುಗಳು. ಆದುದರಿಂದ ಎಲ್ಲರೂ ಸತ್ಯಸಂಧರಾಗಿರತಕ್ಕದ್ದು.

ಅಸತ್ಯ ಸಂಧಶ್ಯ ಸತಸ್ಚಲಸ್ಯಾ ಸ್ಥಿರಚೇತಸಃ ।
ನೈವ ದೇವಾ ನ ಪಿತರಃ ಪ್ರತೀಚ್ಛಂತೀತಿ ನಶ್ಶ್ರುತಂ

ಅಯೋಧ್ಯಾಕಾಂಡ, ಸರ್ಗ ೧೦೯ ಶ್ಲೋಕ ೧೪

ಅಸತ್ಯಸಂಧನಾಗಿ ಸ್ಥಿರಮನಸ್ಸಿಲ್ಲದೆ ಚಪಲ ಬುದ್ಧಿಯುಳ್ಳವನನ್ನು ದೇವತೆಗಳಾಗಲೀ ಪಿತೃಗಳಾಗಲೀ ಪುರಸ್ಕರಿಸುವದಿಲ್ಲವೆಂದು ನಾನು ಕೇಳಿರುವೆನು.

ಪ್ರತ್ಯಗಾತ್ಮ ಮಿಮಂಧರ್ಮಂ ಸತ್ಯಂ ಪಶ್ಯಾಮ್ಯಹಂ ಧೃವಂ ।

ಅಯೋಧ್ಯಾಕಾಂಡ, ಸರ್ಗ ೧೦೯ ಶ್ಲೋಕ ೧೯

ಸತ್ಯರೂಪವಾದ ಧರ್ಮವೇ ಆತ್ಮನನ್ನು ಎಡೆಬಿಡದೆ ಅನುವರ್ತಿಸುತ್ತಿರುವುದೆಂದು ನನಗೆ ಖಂಡಿತವಾಗಿ ತೋರಿರುವುದು.

ಭೂಮಿಃ ಕೀರ್ತಿರ್ಯಶೋ ಲಕ್ಷ್ಮೀಃ ಪುರುಷಂ ಪ್ರಾರ್ಥಯಂತಿಹಿ ।
ಸತ್ಯಂ ಸ ಮನುವರ್ತಂತೇ ಸತ್ಯಮೇವ ಭಜೇತ್ತತಃ

ಅಯೋಧ್ಯಾಕಾಂಡ, ಸರ್ಗ ೧೦೯ ಶ್ಲೋಕ ೨೨

ಭೂಮಿಯು ಕೀರ್ತಿಯು ಯಶಸ್ಸು ಮತ್ತು ಲಕ್ಷ್ಮಿಯು ಸಹಾ ಸತ್ಯವನ್ನು ಬಿಡದಿರುವ ಪುರುಷನಲ್ಲಿ ಸೇರುವುದರಿಂದ

ಸತ್ಯವನ್ನೇ ಅವಲಂಬಿಸಬೇಕಾದ್ದು ಎಂಬುದಾಗಿ ಶ್ರೀರಾಮನು ಜಾಬಾಲಿಗೆ ಹೇಳಿದನು.

ಸರ್ವಮೇವಾತ್ರ ಕಲ್ಯಾಣಂ ಸತ್ಯಸಂಧೇ ಮಹಾತ್ಮನಿ ||

ಅಯೋಧ್ಯಾಕಾಂಡ, ಸರ್ಗ ೧೧೧, ಶ್ಲೋಕ ೩೦

ಶ್ರೀರಾಮನು ಭರತನನ್ನು ಕುರಿತು ಸತ್ಯಸಂಧನಾಗಿರುವ ಮಹಾತ್ಮನಲ್ಲಿ ಎಲ್ಲಾ ವಿಧವಾದ ಒಳ್ಳೆಯಗುಣಗಳು ಸಹಜವಾಗಿರುವವು ಎಂಬುದಾಗಿ ಹೇಳಿದನು.

ಸತ್ಯಸ್ಸತ್ಯಾಭಿಸಂಧಶ್ಚ ನಿತ್ಯಂ ಸತ್ಯ ಪರಾಕ್ರಮಃ |
ಪರಲೋಕ ಭಯಾದ್ಭೀತೋ ನಿರ್ಭಯೋಸ್ತು ಪಿತಾಮಮ ||

ಅಯೋಧ್ಯಾಕಾಂಡ, ಸರ್ಗ ೨೨ ಶ್ಲೋಕ ೯

ಯಾವಾಗಲೂ ಸುಳ್ಳಾಡದೆ ಆಡಿದ ಮಾತಿಗೆ ಎಂದಿಗೂ ತಪ್ಪದೆ ಇರುವ ಸತ್ಯಪರಾಕ್ರಮನಾಗಿರುವ ನಮ್ಮ ತಂದೆ ದಶರಥನು ಪರಲೋಕದ ಭಯವಿಲ್ಲದೆ ನಿರ್ಭಯವಾಗಿರಲಿ.

ತಸ್ಯಾಪಿಹಿ ಭವೇದಸ್ಮಿನ್ ಕರ್ಮಣ್ಯಪ್ರತಿ ಸಂಹೃತೆ |
ಸತ್ಯಂನೇತಿ ಮನಸ್ತಾಪ ಸ್ತಸ್ಯತಾಪ ಸ್ತಪೇಚ್ಚಮಾಂ ||

ಅಯೋಧ್ಯಾಕಾಂಡ, ಸರ್ಗ ೨೨ ಶ್ಲೋಕ ೧೦

ನನ್ನ ಪಟ್ಟಾಭಿಷೇಕ ಪ್ರಯತ್ನವನ್ನು ಇಷ್ಟಕ್ಕೇ ನಿಲ್ಲಿಸದಿದ್ದರೆ ತಾನು ಕೈಕೇಯಿಗೆ ಪ್ರತಿಜ್ಞೆ ಮಾಡಿಕೊಟ್ಟ ವಾಕ್ಯವು ತಪ್ಪಿ ಹೋಗುವುದೆಂದು ನನ್ನ ತಂದೆ ದಶರಥನು ಸಂಕಟಪಡುವನು. ಆತನ ಸಂಕಟವನ್ನು ನೋಡಿ ನಾನು ಸಹಿಸಲಾ

ರದೆ ಪರಿತಪಿಸಬೇಕಾಗುವುದು ಎಂಬುದಾಗಿ ಶ್ರೀರಾಮನು ಹೇಳಿದನು.

ತ್ವಾಮಹಂ ಸತ್ಯಮಿಚ್ಛಾಮಿ ನಾನೃತಂ ಪುರುಷರ್ಷಭ।

ಅಯೋಧ್ಯಾಕಾಂಡ, ಸರ್ಗ ೩೪, ಶ್ಲೋಕ ೪೮

ಶ್ರೀರಾಮನು ದಶರಥನನ್ನು ಕುರಿತು:—ಎಲೈ ಪುರುಷ ಶ್ರೇಷ್ಠನೆ! ನಿನ್ನನ್ನು ಅಸತ್ಯವಂತನನ್ನಾಗಿ ಮಾಡದೆ ಸತ್ಯವಂತನನ್ನಾಗಿ ಮಾಡಲು ಅಪೇಕ್ಷಿಸುತ್ತೇನೆ ಎಂಬುದಾಗಿ ಹೇಳಿದನು.

ಶುಭಂವಾ ಯದಿವಾ ಪಾಪಂ ಯೋಹಿ ವಾಕ್ಯ ಮುದೀರಿತಂ ।
ಸತ್ಯೇನ ಪ್ರತಿಗೃಹ್ಣಾತಿ ಸವೀರಃ ಪುರುಷೋತ್ತಮಃ ।

ಕಿಷ್ಕಿಂಧಾಕಾಂಡ, ಸರ್ಗ ೩೦, ಶ್ಲೋಕ ೭೨

ತನಗೆ ಒಳ್ಳೇದೊ ಒಳ್ಳೇದಲ್ಲವೋ, ಎಂದು ಚಿಂತಿಸದೆ ಆಡಿದ ಮಾತನ್ನು ಯಾವನು ತಪ್ಪದೆ ನಡೆಸುವನೋ ಅಂಥವನೇ ಪುರುಷೋತ್ತಮನು, ಎಂಬುದಾಗಿ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು.

——

ಅನೃತ ದೋಷ

ಶತಮಶ್ವಾನೃತೆ ಹಂತಿ ಸಹಸ್ರಂತು ಗವಾನೃತೆ ।
ಆತ್ಮಾನಂ ಸ್ವಜನಂ ಹಂತಿ ಪುರುಷಃ ಪುರುಷಾನೃತೆ ॥

ಕಿಷ್ಕಿಂಧಾಕಾಂಡ, ಸರ್ಗ ೩೪, ಶ್ಲೋಕ ೯

ಒಂದು ಕುದುರೆಯ ವಿಷಯವಾಗಿ ಸುಳ್ಳಾಡಿದರೆ ಒಂದು ನೂರು ಕುದುರೆಗಳನ್ನು ಕೊಂದ ಪಾಪವು ಬರುವುದು. ಒಂದು ಗೋವಿನ ವಿಷಯವಾಗಿ ಸುಳ್ಳಾಡಿದರೆ ಸಾವಿರ ಗೋವುಗಳನ್ನು ಕೊಂದ ಪಾಪವು ಬರುವುದು. ಒಬ್ಬ ಮನುಷ್ಯನ ವಿಷಯವಾಗಿ ಸುಳ್ಳಾಡಿದರೆ ಆತ್ಮಹತ್ಯಾ ದೋಷವೂ, ಸ್ವಜನರನ್ನು ಕೊಂದ ಪಾಪವೂ ಬರುವುದು ಎಂಬುದಾಗಿ ಲಕ್ಷ್ಮಣನು ಸುಗ್ರೀವನಿಗೆ ಹೇಳಿದನು.

ಧರ್ಮ

ಇಕ್ಷ್ವಾಕೂಣಾಂ ಕುಲೇಜಾತ ಸ್ಸಾಕ್ಷಾ ಧರ್ಮ ಇವಾಪರಃ ।
ಧೃತಿಮಾ ಸುವ್ರತಶ್ರೀಮಾ ಅಧರ್ಮಂ ಹಾತುಮರ್ಹಸಿ ॥

ಬಾಲಕಾಂಡ, ಸರ್ಗ ೨೧, ಶ್ಲೋಕ ೬

ಇಕ್ಷ್ವಾಕು ವಂಶದಲ್ಲಿ ಜನಿಸಿ ಎರಡನೇ ಧರ್ಮದೇವನಂತಿರುವೆ. ಧೈರ್ಯವಂತನಾಗಿಯೂ ವ್ರತನಿಷ್ಠನಾಗಿಯೂ ಭಾಗ್ಯಶಾಲಿಯಾಗಿಯೂ ಇರುವ ನೀನು ಧರ್ಮವನ್ನು ಮೀರಬಾರದು.

ತ್ರಿಷು ಲೋಕೇಷು ವಿಖ್ಯಾತೋ ಧರ್ಮಾತ್ಮಾಚೇತಿ ರಾಘವ।
ಸ್ವಧರ್ಮಂ ಪ್ರತಿಪದ್ಯಸ್ವ ನಾಧರ್ಮಂ ವೋಢುಮರ್ಹಸಿ॥

ಬಾಲಕಾಂಡ, ಸರ್ಗ ೨೧ ಶ್ಲೋಕ ೭

ಎಲೈ ರಘುವಂಶೋತ್ಪನ್ನನಾದ ದಶರಥನೇ, ಮೂರು ಲೋಕಗಳಲ್ಲಿಯೂ ನೀನು ಧರ್ಮಾತ್ಮನೆಂದು ಹೆಸರುವಾಸಿಯಾಗಿರುವೆ. ಆದ್ದರಿಂದ ನಿನ್ನ ಸ್ವಧರ್ಮವನ್ನು ಆಚರಿಸು, ಅಧರ್ಮವನ್ನು ಮೇಲೆಹೊತ್ತುಕೊಳ್ಳಲು ನೀನು ಅರ್ಹನಲ್ಲ.

ಸಂಶ್ರುತ್ಯೈವಂ ಕರಿಷ್ಯಾಮೀತ್ಯ ಕುರ್ವಾಣಸ್ಯ ರಾಘವ।
ಇಷ್ಟಾಪೂರ್ತ ವಧೋಭೂಯಾತ್ತಸ್ಮಾದ್ರಾಮಂ ವಿಸರ್ಜಯ॥

ಬಾಲಕಾಂಡ, ಸರ್ಗ ೨೧, ಶ್ಲೋಕ ೮

ಏನು ಕೇಳಿದರೂ ಕೊಡುತ್ತೇನೆಂಬುದಾಗಿ ನೀನೇ ಪ್ರತಿಜ್ಞೆಮಾಡಿ ಅದರಂತೆ ಶ್ರೀರಾಮನನ್ನು ವಿಶ್ವಾಮಿತ್ರನ ಹಿಂದೆ ಕಳುಹಿಸದಿದ್ದರೆ ನೀನು ಮೊದಲು ಮಾಡಿದ ಅಶ್ವಮೇಧಾದಿ ಯಾಗಗಳೂ ವಾಪೀ ಕೂಪ ತಟಾಕಾದಿ ಧರ್ಮಕಾರ್ಯಗಳೂ ನಿಷ್ಫಲಗಳಾಗುವವು. ಆದ್ದರಿಂದ ಶ್ರೀರಾಮನನ್ನು ವಿಶ್ವಾಮಿತ್ರನ ಸಂಗಡ ಕಳುಹಿಸು ಎಂಬುದಾಗಿ ವಸಿಷ್ಠರು ದಶರಥನಿಗೆ ನಿರೂಪಿಸಿದರು.

ಪಿತೃರ್ವಚನ ನಿರ್ದೇಶಾತ್ಪಿತುರ್ವಚನ ಗೌರವಾತ್ ।
ವಚನಂ ಕೌಶಿಕಸ್ಯೇತಿ ಕರ್ತವ್ಯಮವಿಶಂಕಯಾ॥

ಬಾಲಕಾಂಡ, ಸರ್ಗ ೨೬, ಶ್ಲೋಕ ೨

ತಂದೆಯ ಆಜ್ಞೆ ಎಂಬ ಕಾರಣದಿಂದಲೂ, ತಂದೆಯ ಮಾತಿನ ಗೌರವದಿಂದಲೂ, ಪೂಜ್ಯರಾದ ವಿಶ್ವಾಮಿತ್ರರ ಆಜ್ಞೆಯನ್ನು ನಿಸ್ಸಂದೇಹವಾಗಿ ನಾನು ಪಾಲಿಸಲೇಬೇಕು.

ಅನುಶಿಷ್ಟೋಽಸ್ಮ್ಯಯೋಧ್ಯಾಯಾಂ ಗುರುಮಧ್ಯೇ ಮಹಾತ್ಮನಾ ।
ಪಿತ್ರಾದಶರಥೇನಾಹಂ ನಾವಜ್ಞೇಯಂಹಿ ತದ್ವಚಃ ॥

ಬಾಲಕಾಂಡ, ಸರ್ಗ ೨೬, ಶ್ಲೋಕ ೩

ಅಯೋಧ್ಯೆಯಲ್ಲಿ ಗುರುಜನಗಳ ಮಧ್ಯೆ ನಮ್ಮ ತಂದೆ ದಶರಥನಿಂದ ವಿಶ್ವಾಮಿತ್ರರಿಗೆ ವಿಧೇಯನಾಗಿರಬೇಕೆಂದು ನಾನು ಆಜ್ಞಾಪಿಸಲ್ಪಟ್ಟಿರುವುದರಿಂದ ಅವರ ಮಾತನ್ನು ಅಗೌರವಿಸಬಾರದು.

ಸೋಽಹಂ ಪಿತುರ್ವಚಃ ಶ್ರುತ್ವಾಶಾಸನಾದ್ಬ್ರಹ್ಮ ವಾದಿನಃ ।
ಕರಿಷ್ಯಾಮಿ ನ ಸಂದೇಹಸ್ತಾಟಕಾ ವಧಮುತ್ತಮಂ ॥

ಬಾಲಕಾಂಡ, ಸರ್ಗ ೨೬, ಶ್ಲೋಕ ೪

ಅಂಥಾ ನಾನು ತಂದೆಯ ಮಾತಿನ ಪ್ರಕಾರ ಬ್ರಹ್ಮವಾದಿಗಳಾದ ವಿಶ್ವಾಮಿತ್ರರ ಅಪ್ಪಣೆಯಂತೆ ತಾಟಕಿಯ ವಧೆಯೆಂಬ ಉತ್ತಮವಾದ ಕಾರ್ಯವನ್ನು ಮಾಡುತ್ತೇನೆ.

ಗೋ ಬ್ರಾಹ್ಮಣ ಹಿತಾರ್ಥಾಯ ದೇಶಸ್ಯಾಸ್ಯ ಸುಖಾಯಚ ।
ತವಚೈವಾಪ್ರಮೇಯಸ್ಯ ವಚನಂ ಕರ್ತುಮುದ್ಯತಃ॥

ಬಾಲಕಾಂಡ, ಸರ್ಗ ೨೬, ಶ್ಲೋಕ ೫

ಗೋಬ್ರಾಹ್ಮಣರ ಹಿತಾರ್ಥವಾಗಿಯೂ ಈ ದೇಶದಲ್ಲಿರುವ ಪ್ರಜೆಗಳ ಸುಖಕ್ಕಾಗಿಯೂ ಮಹಾಮಹಿಮರಾದ ನಿಮ್ಮ ಆಜ್ಞೆಯಂತೆ ತಾಟಕಾವಧೆಯೆಂಬ ಕೆಲಸ ಮಾಡಲು ಉದ್ಯುಕ್ತನಾಗಿದ್ದೇನೆ ಎಂಬುದಾಗಿ ಶ್ರೀರಾಮನು ವಿಶ್ವಮಿತ್ರರಿಗೆ ಅರಿಕೆ ಮಾಡಿಕೊಂಡನು.

ಧರ್ಮ

ನಜಾವಜ್ಞಾ ಪ್ರಯೋಕ್ತವ್ಯಾ ಕಾಮಕ್ರೋಧ
ವಶಾದಪಿ ।

ಬಾಲಕಾಂಡ, ಸರ್ಗ ೧೩ ಶ್ಲೋಕ ೧೪

ಕಾಮಕ್ರೋಧಕ್ಕೆ ವಶರಾಗಿದ್ದರೂ ಯಾರನ್ನೂ ತಿರಸ್ಕಾರ ಮಾಡಬಾರದು ಎಂಬುದಾಗಿ ಪುತ್ರಕಾಮೇಷ್ಟಿ ಯಾಗದಲ್ಲಿ ವಸಿಷ್ಠರು ದಶರಥನ ಮಂತ್ರಿಗಳಿಗೆ ಆಜ್ಞಾಪಿಸಿದರು.

ಅವಜ್ಞಯಾ ನದಾತವ್ಯಂ ಕಸ್ಯಚಿಲ್ಲೀಲಯಾಪಿವಾ ।
ಅವಜ್ಞಯಾಕೃತಂ ಹನ್ಯಾನ್ದಾತಾರಂ ನಾತ್ರ
ಸಂಶಯಃ ॥

ಬಾಲಕಾಂಡ, ಸರ್ಗ ೧೩, ಶ್ಲೋಕ ೩೩

ತಿರಸ್ಕಾರ ಭಾವದಿಂದಾಗಲೀ ಹಾಸ್ಯದಿಂದಾಗಲೀ ದಾನ ಮಾಡಬಾರದು. ಆ ರೀತಿ ದಾನ ಮಾಡುವುದರಿಂದ ಯಜಮಾನನನ್ನು ಆ ದೋಷವು ಹೊಡೆಯುವುದು. ಈ ವಿಚಾರ

ದಲ್ಲಿ ಸಂದೇಹವೇ ಇಲ್ಲ ಎಂಬುದಾಗಿ ವಸಿಷ್ಠರು ಮಂತ್ರಿಗಳಿಗೆ ವಿವರಿಸಿದರು.

ಧರ್ಮೋಹಿ ಪರಮೋಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಂ।
ಧರ್ಮಸಂಶ್ರಿತಮೇತಚ್ಚ ಪಿತುರ್ವಚನ ಮುತ್ತಮಂ॥

ಅಯೋಧ್ಯಾಕಾಂಡ, ಸರ್ಗ ೨೧, ಶ್ಲೋಕ ೪೦

ಲೋಕದಲ್ಲಿರುವ ಸಮಸ್ತ ಪುರುಷಾರ್ಥಗಳಲ್ಲಿಯೂ ಧರ್ಮವೇ ಪ್ರಧಾನವು. ಧರ್ಮದಲ್ಲಿಯೇ ಸತ್ಯವು ನೆಲೆಗೊಂಡಿರುವುದು. ಈ ಪಿತೃವಾಕ್ಯ ಪರಿಪಾಲನವೂ ಸಹಾ ಧರ್ಮವನ್ನೇ ಆಶ್ರಯಿಸಿರುವುದು ಎಂಬುದಾಗಿ ಶ್ರೀರಾಮನು ತನ್ನ ತಮ್ಮನಾದ ಲಕ್ಷ್ಮಣನಿಗೆ ವಿವರಿಸಿದನು.

ಸಂಶ್ರುತ್ಯಚ ಪಿತ್ರುವಾಕ್ಯಂ ಮಾತುರ್ವಾ ಬ್ರಾಹ್ಮಣಸ್ಯವಾ।
ನಕರ್ತವ್ಯಂ ವೃಥಾ ವೀರ ಧರ್ಮಮಾಶ್ರಿತ್ಯತಿಷ್ಠತಾ॥

ಅಯೋಧ್ಯಾಕಾಂಡ, ಸರ್ಗ ೨೧, ಶ್ಲೋಕ ೪೧

ಎಲೈ ವೀರನೆ, ಧರ್ಮದಲ್ಲಿಯೇ ನಿಂತು ಆ ಧರ್ಮದ ಫಲವನ್ನು ಪಡೆಯಬೇಕೆಂದಿರುವವರು ತಂದೆ, ತಾಯಿ ಮತ್ತು ಬ್ರಾಹ್ಮಣ ಇವರುಗಳಿಗೆ ನಾನು ಮಾಡಿಕೊಡುತ್ತೇನೆಂತ ಪ್ರತಿಜ್ಞೆಮಾಡಿ ನಂತರ ಅದಕ್ಕೆ ವಿರೋಧವಾಗಿ ತಪ್ಪಿ ನಡೆಯಬಾರದು ಎಂಬುದಾಗಿ ತಮ್ಮನಾದ ಲಕ್ಷ್ಮಣನಿಗೆ ಸಮಾಧಾನವಾಗಿ ಉತ್ತರಕೊಟ್ಟನು.

ಪೂರ್ವಾಪಕಾರಿಣಾಂ ತ್ಯಾಗೋ ನಹ್ಯಧರ್ಮೋ
ವಿಧೀಯತೆ ॥

ಅಯೋಧ್ಯಾಕಾಂಡ, ಸರ್ಗ ೯೬, ಶ್ಲೋಕ ೨೪

ಮೊದಲು ನಮಗೆ ಅಪಕಾರ ಮಾಡಿದವರನ್ನು ತ್ಯಾಗ ಮಾಡುವುದರಿಂದ ಅಧರ್ಮವಾಗುವದಿಲ್ಲ ಎಂಬುದಾಗಿ ಲಕ್ಷ್ಮಣನು ಶ್ರೀರಾಮನಿಗೆ ಹೇಳಿದನು.

ಅಯಂ ಧರ್ಮಸ್ಸು ಸೂಕ್ಷ್ಮೇಣ ವಿಧಿನಾ
ಪ್ರಾಪ್ಯತೇ ಮಹಾನ್ ।
ನಿವೃತ್ತೇನತು ಶಕ್ಯೋಯಂ ವ್ಯಸನಾತ್ಕಾಮಜಾದಿಹ।

ಅರಣ್ಯಕಾಂಡ, ಸರ್ಗ ೯, ಶ್ಲೋಕ ೨

ಈ ಮುನಿಧರ್ಮವಾದರೋ ಅತಿ ಸೂಕ್ಷ್ಮ ವಿಚಾರದಿಂದಲೇ ವಿಧಿಪೂರ್ವಕವಾಗಿ ನಡೆಸದರೇನೇ ಈ ಧರ್ಮವನ್ನು ಪಡೆಯಬೇಕಾದ್ದು. ಕಾಮದಿಂದ ಹುಟ್ಟತಕ್ಕ ವ್ಯಸನಗಳನ್ನು ತ್ಯಜಿಸಿದವರಿಗೆ ಮಾತ್ರವೇ ಈ ಧರ್ಮವನ್ನು ಸಂಪಾದಿಸುವುದಕ್ಕೆ ಶಕ್ಯವಾಗುವುದು.

ತ್ರೀಣ್ಯೇವ ವ್ಯಸನಾನ್ಯತ್ರ ಕಾಮಜಾನಿ ಭವಂತ್ಯುತ ॥

ಅರಣ್ಯಕಾಂಡ, ಸರ್ಗ ೯, ಶ್ಲೋಕ ೩

ಕಾಮಜನ್ಯಗಳಾದ ಈ ವ್ಯಸನಗಳು ಮುಖ್ಯವಾಗಿ ಮೂರು ಬಗೆಯಾಗಿರುವುವು.

ಮಿಥ್ಯಾವಾಕ್ಯಂ ಪರಮಕಂ ತಸ್ಮಾದ್ಗುರುತರಾ ಉಭೌ।
ಪರದಾರಾಭಿಗಮನಂ ವಿನಾ ವೈರಂಚ ರೌದ್ರತಾ ॥

ಅರಣ್ಯಕಾಂಡ, ಸರ್ಗ ೯, ಶ್ಲೋಕ ೪

ಸುಳ್ಳು ಹೇಳುವುದು ಮೊದಲನೆಯದು. ಇನ್ನೊಂದು ಪ್ರಬಲವಾದ ವ್ಯಸನವು. ಪರದಾರಗಮನ, ದ್ವೇಶಕ್ಕೆ ಕಾರಣ ವಿಲ್ಲದೆ ಇತರರನ್ನು ಹಿಂಸಿಸುವುದು ಇವೆರಡೂ ಸುಳ್ಳುಹೇಳು ವುದಕ್ಕಿಂತಲೂ ಪ್ರಬಲತರವಾದುವುಗಳು ಎಂಬುದಾಗಿ ಶ್ರೀರಾಮನಿಗೆ ಸೀತೆಯು ಉದಹರಿಸಿದಳು.

ಧರ್ಮಾದರ್ಥಃ ಪ್ರಭವತಿ ಧರ್ಮಾತ್ಪ್ರಭವತೇ ಸುಖಂ।
ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್॥

ಅರಣ್ಯಕಾಂಡ, ಸರ್ಗ ೯, ಶ್ಲೋಕ ೩೦

ಧರ್ಮದಿಂದಲೇ ಧನ ದೊರಕುವುದು ಧರ್ಮವೇ ಸಮಸ್ತ ಸುಖಕ್ಕೂ ಕಾರಣವು. ಧರ್ಮದಿಂದಲೇ ಸಮಸ್ತವೂ ಲಭ್ಯವು. ಈ ಪ್ರಪಂಚಕ್ಕೆಲ್ಲವೂ ಧರ್ಮವೇ ಸಾರವು.

ಆತ್ಮಾನಂ ನಿಯಮೈ ಸ್ತೈಸ್ತೈ
ಕರ್ಶಯಿತ್ವಾಪ್ರಯತ್ನತಃ ।
ಪ್ರಾಪ್ಯತೇ ನಿಪುಣೈ ರ್ಧರ್ಮೋನಸುಖಾಲ್ಲಭ್ಯತೇ
ಸುಖಂ ॥

ಅರಣ್ಯಕಾಂಡ, ಸರ್ಗ ೯, ಶ್ಲೋಕ ೩೧

ತಾನು ಸ್ವಾರ್ಥನಾಗದೆ ಇನ್ನೊಬ್ಬರಿಗಾಗಿ ಆಯಾಯಾ ನಿಯಮಗಳಿಂದ ಪ್ರಯತ್ನಪೂರ್ವಕವಾಗಿ ದೇಹದಂಡಿಸ ತಕ್ಕ ಕರ್ತವ್ಯವೇ ಧರ್ಮವೆನಿಸಿಕೊಳ್ಳುವುದು. ಸುಖದಿಂದ ಸುಖ ಲಭ್ಯವಾಗುವುದಿಲ್ಲ.

ನಿತ್ಯಂ ಶುಚಿಮತಿ ಸೌಮ್ಯಚರ ಧರ್ಮಂ ತಪೋವನೆ ।

ಅರಣ್ಯಕಾಂಡ, ಸರ್ಗ ೯, ಶ್ಲೋಕ ೩೨

ಎಲೈ ಸೌಮ್ಯನೆ, ಪ್ರತಿನಿತ್ಯವೂ ಶುಚಿಯಾದ ಮನಸ್ಸುಳ್ಳವನಾಗಿ ಧರ್ಮವನ್ನು ಆಚರಿಸು.

ಧರ್ಮೋಽಪ್ಯೈಗ್ರಸತೇ ಧರ್ಮಂ ತತಃ
ಕೃತಮಭೂದ್ಯುಗಂ ।
ಅಧರ್ಮೋಽಗ್ರಸತೇ ಧರ್ಮಂ ತತಸ್ತಿಷ್ಯಃ ಪ್ರವರ್ತತೆ ॥

ಯುದ್ಧಕಾಂಡ, ಸರ್ಗ ೩೫, ಶ್ಲೋಕ ೧೪-೧೫

ಯಾವಾಗ ಧರ್ಮವು ಪ್ರಬಲವಾಗಿ ಅಧರ್ಮವನ್ನು ಮೆಟ್ಟುವುದೋ ಆ ಕಾಲವು ಕೃತಯುಗವೆನಿಸುವುದು. ಧರ್ಮವನ್ನು ಮೆಟ್ಟಿ ಅಧರ್ಮವು ಹೆಚ್ಚಿದಾಗ ಕಲಿಯು ಪ್ರವರ್ತಿಸುವುದು.

ಯಾಯಾಮೇ ಜಾಯತೇ ಬುದ್ಧಿರ್ಯೇಷು
ಯೇಷ್ವಾಶ್ರಮೇಷುಚ ।
ಸಾಸಾಭವತು ಧರ್ಮಿಷ್ಠಾತಂ ತುಧರ್ಮಂ ಚಪಾಲಯೆ।

ಉತ್ತರಕಾಂಡ, ಸರ್ಗ ೧೦, ಶ್ಲೋಕ ೩೨

ನನಗೆ ಯಾವ ಯಾವ ಆಶ್ರಮಗಳಲ್ಲಿ ಹ್ಯಾಗೆ ಹ್ಯಾಗೆ ಬುದ್ಧಿಯು ಹುಟ್ಟಿದರೂ ಅದು ಯಾವಾಗಲೂ ಧರ್ಮಮಾರ್ಗವನ್ನೆ ಅನುವರ್ತಿಸುವಂತಿರಲಿ. ಆಯಾಧರ್ಮವನ್ನು ನಾನು ತಪ್ಪದೆ ಕಾಪಾಡುವೆನು.

ನಹಿಧರ್ಮಾಭಿರಕ್ತಾನಾಂ ಲೋಕೇ ಕಿಂಚನ
ದುರ್ಲಭಂ ।

ಉತ್ತರಕಾಂಡ, ಸರ್ಗ ೧೦, ಶ್ಲೋಕ ೩೩

ಧರ್ಮಮಾರ್ಗದಲ್ಲಿ ಅನುರಕ್ತರಾದವರಿಗೆ ಲೋಕದಲ್ಲಿ ದುರ್ಲಭವಾದುದೊಂದೂ ಇಲ್ಲ ಎಂಬುದಾಗಿ ವಿಭೀಷಣನು ಬ್ರಹ್ಮದೇವರಿಗೆ ತಿಳಿಸಿದನು.

ಧರ್ಮಾದ್ರಾಜ್ಯಂ ಧನಂ ಸೌಖ್ಯಮಧರ್ಮಾ
ದ್ದುಃಖಮೇವಚ ।
ತಸ್ಮಾದ್ಧರ್ಮಂ ಸುಖಾರ್ಥಾಯ ಕುರ್ಯಾತ್ಪಾಪಂ
ವಿಸರ್ಜಯೇತ್ ॥

ಉತ್ತರಕಾಂಡ, ಸರ್ಗ ೧೫, ಶ್ಲೋಕ ೨೪

ಧರ್ಮದಿಂದ ರಾಜ್ಯವೂ ಸುಖವೂ ಅಧರ್ಮದಿಂದ ದುಃಖವೂ ಲಭಿಸುವುವು. ಆದ್ದರಿಂದ ಸುಖವಾಗಿರುವುದಕ್ಕಾಗಿ ಧರ್ಮವನ್ನು ಆಚರಿಸಬೇಕು ಪಾಪವನ್ನು ಬಿಡಬೇಕು ಎಂಬುದಾಗಿ ಕುಬೇರನು ರಾವಣನಿಗೆ ಬುದ್ಧಿ ಹೇಳಿದನು.

ಅರ್ಥ

ಅರ್ಥೇಭ್ಯೋಹಿ ವಿವೃದ್ಧೇಭ್ಯೋ ಸಂವೃತ್ತೇಭ್ಯ
ಸ್ತತಸ್ತತಃ ।
ಕ್ರಿಯಾಸರ್ವಾ ಪ್ರವರ್ತಂತೇ ಪರ್ವತೇಭ್ಯ
ಇವಾಪಗಾಃ ॥

ಯುದ್ಧಕಾಂಡ, ಸರ್ಗ ೮೩, ಶ್ಲೋಕ ೩೨

ಪರ್ವತಗಳಿಂದ ನದಿಗಳು ಹೊರಡುವಂತೆ ನಾನಾಭಾಗಗಳಿಂದ ಸಂಗ್ರಹಿಸಿ ನಾನಾವ್ಯಾಪಾರಗಳಿಂದ ವೃದ್ಧಿಗೊಳಿಸಿಟ್ಟ ಅರ್ಥದಿಂದ ಮೂಲವ್ಯಯವಿಲ್ಲದ ಹಾಗೆ ಯಾಗಾದಿ ಸಮಸ್ತ ಕ್ರಿಯೆಗಳೂ ಪ್ರವರ್ತಿಸುವುವು.

ಅರ್ಥೇನಹಿವಿಯುಕ್ತಸ್ಯ ಪುರುಷಸ್ಯಾಲ್ಪ ತೇಜಸಃ ।
ವ್ಯುಚ್ಛಿದ್ಯಂತೇ ಕ್ರಿಯಾಸ್ಸರ್ವಾಗ್ರೀಷ್ಮೇ
ಕುಸರಿತೋ ಯಥಾ ॥

ಯುದ್ಧಕಾಂಡ, ಸರ್ಗ ೮೩, ಶ್ಲೋಕ ೩೩

ಅರ್ಥಹೀನತೆಯಿಂದ ಅಲ್ಪತೇಜನಾದ ಪುರುಷನು ಯಾವ ಕಾರ್ಯವನ್ನು ನಡೆಸಿದರೂ ಅವೆಲ್ಲವೂ ಬೇಸಗೆಯ ಕಾಲದ ಕ್ಷುದ್ರನದಿಗಳಂತೆ ಕ್ಷಯಿಸಿಹೋಗುವುವು.

ಯಸ್ಯಾರ್ಥಾಸ್ತಸ್ಯಮಿತ್ರಾಣಿ ಯಸ್ಯಾರ್ಥಾಸ್ತಸ್ಯ
ಬಾಂಧವಾಃ ।
ಯಸ್ಯಾರ್ಥಾಸ್ಸಪುಮಾಂಲೋಕೇ ಯಸ್ಯಾರ್ಥಾಸ್ಸಚ
ಪಂಡಿತಃ ॥
ಯಸ್ಯಾರ್ಥಾಸ್ಸಚವಿಕ್ರಾಂತೋ ಯಸ್ಯಾರ್ಥಾಸ್ಸಚ
ಬುದ್ಧಿಮಾನ್ ।
ಯಸ್ಯಾರ್ಥಾಸ್ಸಮಹಾಭಾಗೋ ಯಸ್ಯಾರ್ಥಾಸ್ಸ
ಗುಣಾಧಿಕಃ ॥

ಯುದ್ಧಕಾಂಡ, ಸರ್ಗ ೮೩, ಶ್ಲೋಕ ೩೫-೩೬

ಹಣವುಳ್ಳವನಿಗೆ ಎಲ್ಲರೂ ಮಿತ್ರರಾಗುವರು. ಹಣವುಳ್ಳವನಿಗೆ ಎಲ್ಲರೂ ಬಂಧುಗಳೇ, ಹಣವಿದ್ದವನೇ ಲೋಕದಲ್ಲಿ ಗಣನೆಗೆ ಬರತಕ್ಕ ಪುರುಷನು. ಹಣವುಳ್ಳವನೇ ಪಂಡಿತನು. ಹಣವುಳ್ಳವನೇ ಪರಾಕ್ರಮಿಯು. ಹಣವುಳ್ಳವನೇ ಬುದ್ಧಿವಂತನು ಹಣವುಳ್ಳವನೇ ಮಹಾಗುಣಾಢ್ಯನು.

ಕಾಮ

ಕಾಮ ಏವಾರ್ಥ ಧರ್ಮಾಭ್ಯಾಂ
ಗರೀಯಾನಿತಿ ಮೇಮತಿಃ ।
ಇದಂ ವ್ಯಸನಮಾಲೋಕ್ಯ ರಾಜ್ಞಶ್ಚ ಮತಿವಿಭ್ರಮಃ॥

ಅಯೋಧ್ಯಾಕಾಂಡ, ಸರ್ಗ ೫೩, ಶ್ಲೋಕ ೯

ರಾಜನಾದ ನನ್ನ ತಂದೆಗೆ ಉಂಟಾದ ಬುದ್ಧಿ ಭ್ರಮಣ ವನ್ನು, ನನ್ನ ಕಷ್ಟವನ್ನು ನೋಡಿದರೆ ಧರ್ಮಾರ್ಥಗಳಿಗಿಂತ ಕಾಮವೆಂಬ ಪುರುಷಾರ್ಥವೇ ಪ್ರಬಲವೆಂದು ತೋರುವುದು.

ಅರ್ಥಧರ್ಮೌ ಪರಿತ್ಯಜ್ಯ ಯಃ ಕಾಮ
ಮನುವರ್ತತೆ ।
ಏವಮಾಪದ್ಯತೇ ಕ್ಷಿಪ್ರಂ ರಾಜಾ ದಶರಥೋಯಥಾ॥

ಅಯೋಧ್ಯಾಕಾಂಡ, ಸರ್ಗ ೫೩, ಶ್ಲೋಕ ೧೩

ನಮ್ಮ ತಂದೆಯಾದ ದಶರಥನಂತೆ ಯಾವನು ಅರ್ಥ ಧರ್ಮಗಳನ್ನು ಬಿಟ್ಟು ಕಾಮಮಾತ್ರವನ್ನು ಅನುಸರಿಸು ವನೋ ಆತನಿಗೆ ಇವನಿಗುಂಟಾದಂತೆಯೇ ಮಹಾವಿಪತ್ತು ಜಾಗ್ರತೆಯಾಗಿ ಸಂಭವಿಸುವುದು.

ಅಹೋ ಕಾಮಸ್ಯ ವಾಮತ್ವಂ
ಯೋಗತಾಮಪಿದುರ್ಲಭಾಂ ।
ಸ್ಮಾರಯಿಷ್ಯತಿ ಕಲ್ಯಾಣೀಂ ಕಲ್ಯಾಣ ತರವಾದನೀಂ ॥

ಕಿಷ್ಕಿಂಧಾಕಾಂಡ, ಸರ್ಗ ೧, ಶ್ಲೋಕ ೬೭

ಆಹಾ, ಈ ಕಾಮದ ವಕ್ರತೆಯನ್ನು ಏನೆಂದು ಹೇಳಲಿ, ಮಂಗಳಕರಳಾಗಿಯೂ ಮಂಗಳವಾಗಿ ಮಾತನಾಡತಕ್ಕವಳಾ

ಗಿಯೂ ಇರುವ ಸೀತೆಯು ನನಗೆ ನಷ್ಟವಾಗಿ ಪುನಃ ಸಿಕ್ಕುವ ಸ್ಥಿತಿಯಲ್ಲಿಲ್ಲವಲ್ಲಾ ಆಕೆಯನ್ನು ಪದೇ ಪದೇ ಜ್ಞಾಪಿಸಿಕೊಳ್ಳು ವಂತೆ ಮಾಡುತ್ತಿದೆಯಲ್ಲಾ.

ಶಕ್ಯೋ ಧಾರಯಿತುಂ ಕಾಮೊ
ಭವೇದದ್ಯಾಗತೋ ಮಯಾ ।
ಯದಿಭೂಯೊ ವಸಂತೋ ಮಾಂ
ನಹನ್ಯಾತ್ಪುಷ್ಪಿತದ್ರುಮಃ॥

ಕಿಷ್ಕಿಂಧಾಕಾಂಡ, ಸರ್ಗ ೧. ಶ್ಲೋಕ ೬೮

ಪುಷ್ಪಗಳಿಂದ ಮರಗಳಿಂದ ತುಂಬಿದ ವಸಂತನು ಪದೇ ಪದೇ ನನ್ನ ಹತ್ತಿರ ಬರದಿದ್ದರೆ ಆಗ ಈ ಕಾಮುಬಾಧೆಯನ್ನು ಸಹಿಸಬಹುದು.

ನದೇಶ ಕಾಲೌ ಹಿ ನಚಾರ್ಥಧರ್ಮಾವಪೇಕ್ಷತೆ
ಕಾಮರತಿರ್ಮನುಷ್ಯಃ ॥

ಕಿಷ್ಕಿಂಧಾಕಾಂಡ, ಸರ್ಗ ೩೩, ಶ್ಲೋಕ ೫೫

ಕಾಮುಲೋಲನಾದ ಮನುಷ್ಯನು ದೇಶಕಾಲಗಳನ್ನಾಗಲಿ ಧರ್ಮಾರ್ಥಗಳನ್ನಾಗಲೀ ಅಪೇಕ್ಷಿಸುವವನಲ್ಲ.

ಹಿತ್ವಾಧರ್ಮಂ ತಥಾರ್ಥಂ ಚ
ಕಾಮಂ ಯಸ್ತು ನಿಷೇವತೆ ।
ಸವೃಕ್ಷಾಗ್ರೇ ಯಥಾಸುಪ್ತಃ ಪತಿತಃ ಪ್ರತಿಬುಧ್ಯತೆ ॥

ಕಿಷ್ಕಿಂಧಾಕಾಂಡ, ಸರ್ಗ ೩೮, ಶ್ಲೋಕ ೨೧-೨೨

ಧರ್ಮಾರ್ಥಗಳು ಎರಡನ್ನೂ ಬಿಟ್ಟು ಕಾಮವನ್ನೇ ಯಾವನು ಸೇವಿಸುವನೋ ಅವನು ಮರದಮೇಲೆ ಮಲಗಿ ಮೈಮರೆತು ಕೆಳಗೆ ಬಿದ್ದಮೇಲೆ ಎಚ್ಚರಗೊಳ್ಳುವಂತೆ ಅಧೋಗತಿಯನ್ನು ಹೊಂದಿ ನಂತರ ಜಾಗರೂಕನಾಗುವನು.

ವಾಮಃ ಕಾಮೋ ಮನುಷ್ಯಾಣಾಂ ಯಸ್ಮಿಕಿಲ
ನಿಬಧ್ಯತೆ ।
ಜನೇ ತಸ್ಮಿಸ್ತ್ವನುಕ್ರೋಶಃ ಸ್ನೇಹಶ್ಚ ಕಿಲಜಾಯತೆ॥

ಸುಂದರಕಾಂಡ, ಸರ್ಗ ೨೨, ಶ್ಲೋಕ ೪

ಮನುಷ್ಯನಿಗೆ ಕಾಮವೆಂಬುವದು ಬಹಳ ವಕ್ರವಾದುದು. ಆ ಕಾಮವು ಯಾರಲ್ಲಿ ಪ್ರವರ್ತಿಸುವುದೋ ಆ ಜನರಲ್ಲಿ ದಯೆಯೂ ಪ್ರೇಮವೂ ಹುಟ್ಟಿಬಿಡುವುದು.

ಯೌವನ

ಚಲಂ ಹಿ ಯೌವ್ವನಂ ನಿತ್ಯಂ ಮಾನುಷೇಷು
ವಿಶೇಷತಃ ।

ಬಾಲಕಾಂಡ, ಸರ್ಗ ೩೨, ಶ್ಲೋಕ ೧೬

ಯೌವನವು ಯಾವಾಗಲೂ ಮನುಷ್ಯರಿಗೆ ಸ್ಥಿರವಾಗಿರುವದಿಲ್ಲ ಎಂಬುದಾಗಿ ವಾಯುದೇವನು ಕುಶನಾಭನ ನೂರು ಜನ ಹೆಣ್ಣು ಮಕ್ಕಳಿಗೆ ಹೇಳಿದನು.

ಧರ್ಮಾರ್ಥಕಾಮಗಳು

ಧರ್ಮಾರ್ಥ ಕಾಮಾ ಖಲು ತಾತ ಲೋಕೇ ।
ಸಮೀಕ್ಷಿತಾ ಧರ್ಮ ಫಲೋದಯೇಷು ॥
ತೇತತ್ರ ಸರ್ವೇಸ್ಯು ರಸಂಶಯಂಮೇ ।
ಭಾರ್ಯೇವ ವಶ್ಯಾಭಿಮತಾ ಸುಪುತ್ರಾ ॥

ಅಯೋಧ್ಯಾಕಾಂಡ, ಸರ್ಗ ೨೧, ಶ್ಲೋಕ ೫೬

ಧರ್ಮ ಅರ್ಥ ಕಾಮ ಎಂಬ ಪುರುಷಾರ್ಥಗಳು ಧರ್ಮದಲ್ಲಿಯೇ ನೆಲೆಗೊಂಡಿರುವುವು. ಇವೆಲ್ಲಕ್ಕೂ ಧರ್ಮವೇ ಆಧಾರವು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಕೈಹಿಡಿದ ಹೆಂಡತಿಯು ತನಗನುಕೂಲಳಾಗಿದ್ದು ಧರ್ಮವನ್ನೂ ಪ್ರಿಯಳಾಗಿದ್ದು ಕಾಮವನ್ನೂ ಸತ್ಪುತ್ರ ಸಂತಾನವನ್ನೂ ಪಡೆದು ಆ ಮಕ್ಕಳ ಭಾಗ್ಯವಶದಿಂದ ಅರ್ಥವನ್ನೂ ಸಾಧಿಸಿಕೊಡುವಂತೆಯೇ ಧರ್ಮ ಒಂದನ್ನು ಬಿಡದೆ ಅನುಷ್ಠಿಸುತ್ತಿದ್ದ ಪಕ್ಷದಲ್ಲಿ ಸೌಖ್ಯಪ್ರದಗಳಾದ ಅರ್ಥಕಾಮಗಳೆಂಬ ಪುರುಷಾರ್ಥಗಳು ತಾವಾಗಿ ಸಿದ್ಧಿಸುವವು.

ಯಸ್ಮಿಂಸ್ತು ಸರ್ವೇಸ್ಯು ರಸನ್ನಿವಿಷ್ಟಾ ।
ಧರ್ಮೋಯತಸ್ಯಾತ್ತದುಪಕ್ರಮೇತ ॥
ದ್ವೇಷ್ಯೋಭವತ್ಯರ್ಥ ಪರೋಹಿಲೋಕೇ ।
ಕಾಮಾತ್ಮತಾ ಖಲ್ವಪಿ ನ ಪ್ರಶಸ್ತಾ ॥

ಅಯೋಧ್ಯಾಕಾಂಡ, ಸರ್ಗ ೨೧, ಶ್ಲೋಕ ೫೭

ಯಾವ ಕಾರ್ಯದಲ್ಲಿ ಧರ್ಮಾರ್ಥ ಕಾಮಗಳೆಂಬ ಮೂರು ಪುರುಷಾರ್ಥಗಳು ಸಂಬಂಧಿಸಿಲ್ಲವೋ ಆ ಕಾರ್ಯಕ್ಕೆ ಪ್ರವರ್ತಿಸ

ಬಾರದು. ಧರ್ಮವನ್ನು ಬಿಟ್ಟು ಕೇವಲ ಅರ್ಥ ಕಾಮುಗಳನ್ನುಂಟುಮಾಡತಕ್ಕ ಕಾರ್ಯಗಳಿಗೆ ಪ್ರಯತ್ನಿಸಬಾಗದು, ಲೋಕದಲ್ಲಿ ಕೇವಲ ಅರ್ಥ ಪರಾಯಣನಾದವನು ಜನಗಳಲ್ಲಿ ವಿರೋಧವನ್ನು ಸಂಪಾದಿಸಬೇಕಾಗುವದು. ಕೇವಲ ಕಾಮುಪರಾಯಣತ್ವವೂ ಪ್ರಶಸ್ತವೆನಿಸುವದಿಲ್ಲ ಎಂ ಬು ದಾ ಗಿ ಶ್ರೀರಾಮನು ಲಕ್ಷ್ಮಣನಿಗೆ ತಿಳಿಯಹೇಳಿದನು.

ಕ್ಷಮಾಗುಣ

ಅಲಂಕಾರೋಹಿನಾರೀಣಾಂ ಕ್ಷಮಾತು ಪುರುಷಸ್ಯವಾ।

ಬಾಲಕಾಂಡ, ಸರ್ಗ ೩೩, ಶ್ಲೋಕ ೬

ಪುರುಷರಿಗಾಗಲೀ ಸ್ತ್ರೀಯರಿಗಾಗಲೀ ಸೈರಣೆ ಎಂಬುವುದೇ ಅಲಂಕಾರವು ಎಂಬುದಾಗಿ ಕುಶನಾಭನು ತನ್ನ ಒಂದುನೂರು ಹೆಣ್ಣುಮಕ್ಕಳಿಗೆ ಹೇಳಿದನು.

ಕ್ಷಮಾದಾನಂ ಕ್ಷಮಾಯಜ್ಞಃ ಕ್ಷಮಾಸತ್ಯಂಹಿ ಪುತ್ರಿಕಾಃ ।
ಕ್ಷಮಾಯಶಃ ಕ್ಷಮಾಧರ್ಮಃ ಕ್ಷಮುಯಾವಿಷ್ಟಿತಂ ಜಗತ್॥

ಬಾಲಕಾಂಡ, ಸರ್ಗ ೩೩, ಶ್ಲೋಕ ೭

ಸೈರಣೆಯೇ ದಾನ; ಸೈರಣೆಯೇ ಯಜ್ಞ; ಸೈರಣೆಯೇ ಸತ್ಯ; ಸೈರಣೆಯೇ ಕೀರ್ತಿ; ಸೈರಣೆಯೇ ಧರ್ಮ; ಈಪ್ರಪಂಚವೂ ಸಹ ಭೂದೇವಿಯ ಕ್ಷಮಾಗುಣದಿಂದಲೇ ನಿಂತಿರುತ್ತೆ ಎಂಬುದಾಗಿ ಕುಶನಾಭನು ತನ್ನ ಒಂದುನೂರು ಹೆಣ್ಣುಮಕ್ಕಳಿಗೆ ಹೇಳಿದನು.

ನಪರಃ ಪಾಪ ಮಾದತ್ತೇ ಪರೇಷಾಂ ಪಾಪಕರ್ಮಣಾಂ।
ಸಮಯೊ ರಕ್ಷಿತವ್ಯಸ್ತು ಸಂತಶ್ಚಾರಿತ್ರಭೂಷಣಾಃ ॥

ಯುದ್ಧಕಾಂಡ, ಸರ್ಗ ೧೧೬, ಶ್ಲೋಕ ೪೩

ತಮ್ಮ ನಡತೆಯೇ ಆಭರಣವಾಗಿಯುಳ್ಳ ಸತ್ಪುರುಷರು ತಮಗೆ ಅಪಕಾರ ಮಾಡಿದವರಿಗೂ ಸಮಯದಲ್ಲಿ ಉಪಕಾರ ಮಾಡಬೇಕೇ ವಿನಹಾ ಅಪಕಾರ ಮಾಡಕೂಡದು ಎಂಬುದಾಗಿ ಒಂದು ಭಲ್ಲೂಕವು ಒಂದು ವ್ಯಾಘ್ರಕ್ಕೆ ಹೇಳಿದ ಅಂಶವನ್ನು ಸೀತೆಯು ಆಂಜನೇಯನಿಗೆ ಹೇಳಿದಳು.

ಬ್ರಹ್ಮತೇಜಸ್ಸು

ಧಿಗ್ಬಲಂ ಕ್ಷತ್ರಿಯಬಲಂ ಬ್ರಂಹತೇಜೋ ಬಲಂ ಬಲಂ।
ಏಕೇನ ಬ್ರಂಹದಂಡೇನ ಸರ್ವಾಸ್ತ್ರಾಣಿ ಹತಾನಿಮೆ॥

ಬಾಲಕಾಂಡ, ಸರ್ಗ ೫೬, ಶ್ಲೋಕ ೨೨

ಕ್ಷತ್ರಿಯ ಬಲ ಸುಡು, ಬ್ರಹ್ಮತೇಜಸ್ಸಿನ ಬಲವೇ ಬಲ. ನನ್ನ ಎಲ್ಲಾ ಅಸ್ತ್ರಗಳೂ ಒಂದೇ ಒಂದು ಬ್ರಹ್ಮದಂಡದಿಂದ ನಾಶವಾದವು ಎಂಬುದಾಗಿ ವಿಶ್ವಾಮಿತ್ರನು ತನ್ನಷ್ಟಕ್ಕೆ ತಾನು ಅಂದುಕೊಂಡನು.

ಬ್ರಾಂಹಣೋಹ್ಯೇಕಪಾರ್ಶ್ವೇನ ನರ್ರಾರೋದ್ಧು
ಮಿಹಾರ್ಹತಿ ।
ನತುಮೂರ್ಧಾಭಿಷಿಕ್ತಾನಾಂ ವಿಧಿ ಪ್ರತ್ಯುಪವೇಶನೆ ॥

ಶ್ರೀರಾಮನು ಭರತನನ್ನು ಕುರಿತು ಬ್ರಾಹ್ಮಣನು ಮಾತ್ರವೇ ತನ್ನಲ್ಲಿ ಸಾಲ ತೆಗೆದುಕೊಂಡು ಮೋಸಮಾಡಿದ

ವರ ಬಾಗಲಿಗಡ್ಡವಾಗಿ ಮಲಗುವುದುಂಟು. ಅಭಿಷೇಕಾರ್ಹ ರಾದ ಕ್ಷತ್ರಿಯರಿಗೆ ಈ ಕೃತ್ಯವು ಎಂದಿಗೂ ಉಚಿತವಲ್ಲ ಎಂದನು.

ಸುಪ್ರಭಾತ

ಕೌಸಲ್ಯಾ ಸುಪ್ರಜಾ ರಾಮ ಪೂರ್ವಾಸಂಧ್ಯಾ ಪ್ರವರ್ತತೆ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವ ಮಾಹ್ನಿಕಂ॥

ಬಾಲಕಾಂಡ, ಸರ್ಗ ೨೩, ಶ್ಲೋಕ ೨

ವಿಶ್ವಾಮಿತ್ರನು ಶ್ರೀ ರಾ ಮ ನ ನ್ನು ಕುರಿತು ಎಲೈ ಕೌಸಲ್ಯಾ ಸುಪುತ್ರನಾದ ರಾಮನೇ ಪ್ರಾತಸ್ಸಂಧ್ಯಾಕಾಲವು ಪ್ರಾಪ್ತವಾಯಿತು. ಎಲೈ ಪುರುಷಶ್ರೇಷ್ಠನೇ ಏಳು! ದೇವತಾ ರಾಧನೆ ಮುಂತಾದ ಆಹ್ನಿಕ ಕೃತ್ಯಗಳನ್ನು ನಡೆಸಬೇಕಾಗಿದೆ ಎಂದನು.

ಅತಿಥಿ ಸತ್ಕಾರ

ರಾಜಾತ್ವಮತಿಥಿಷ್ಠ ಶ್ರೇಷ್ಠಃ ಪೂಜನೀಯ ಪ್ರಯತ್ನತಃ॥

ಬಾಲಕಾಂಡ, ಸರ್ಗ ೫೨, ಶ್ಲೋಕ ೧೪

ರಾಜನು ಅತಿಥಿಗಳಲ್ಲಿ ಶ್ರೇಷ್ಠನು ಪ್ರಯತ್ನ ಪೂರ್ವಕ ವಾಗಿ ಅವರನ್ನು ಪೂಜಿಸಬೇಕು ಎಂಬುದಾಗಿ ವಸಿಷ್ಠನು ವಿಶ್ವಾಮಿತ್ರನಿಗೆ ಹೇಳಿ ಅತಿಥಿ ಸತ್ಕಾರಮಾಡಿದನು.

ಅಗ್ನಿಂಹೃತ್ವಾ ಪ್ರದಾಯಾರ್ಘ್ಯಂ ಅತಿಥಿಂಪ್ರತಿ ಪೂಜಯೇತ್ ।
ಅನ್ಯಾಥಾ ಖಲುಕಾಕುತ್ಸ್ಥ ತಪಸ್ವೀ ಸಮುದಾಚರೇತ್ ॥

ದುಸ್ಸಾಕ್ಷೀವ ಪರೇಲೋಕೇಸ್ವಾನಿ ಮಾಂಸಾನಿ
ಭಕ್ಷಯೇತ್ ।
ರಾಜಾಸರ್ವಸ್ಯ ಲೋಕಸ್ಯ ಧರ್ಮಚಾರೀ ಮಹಾರಥಃ ।
ಪೂಜನೀಯಶ್ಚ ಮಾನ್ಯಶ್ಚ ಭವಾ‌ನ್ಪ್ರಾಪ್ತಃ
ಪ್ರಿಯಾತಿಥಿಃ ॥

ಅರಣ್ಯಕಾಂಡ, ಸರ್ಗ ೧೨, ಶ್ಲೋಕ ೨೯-೩೦-೩೧

ಅಗಸ್ತ್ಯರು ಶ್ರೀರಾಮನನ್ನು ಕುರಿತು ವೈಶ್ವದೇವವನ್ನು ಮಾಡಿ ಆಮೇಲೆ ಅತಿಥಿಗಳಿಗೆ ಅರ್ಘ್ಯವನ್ನು ಕೊಟ್ಟು ಪೂಜಿಸ ಬೇಕಾದುದೇ ಧರ್ಮವು. ಋಷಿಯಾದವನು ಈ ನಿಯಮ ವನ್ನು ಬಿಟ್ಟು ಬೇರೆ ವಿಧವಾಗಿ ಆಚರಿಸಿದರೆ ಅಂಥವನು ಸುಳ್ಳುಸಾಕ್ಷಿಯನ್ನು ಹೇಳಿದವನಂತೆ ಪರಲೋಕದಲ್ಲಿ ತನ್ನ ಮಾಂಸವನ್ನು ತಾನೇ ಭಕ್ಷಿಸುವನು. ನೀನಾದರೋ ಸಮಸ್ತ ಲೋಕಗಳಿಗೂ ರಾಜನು, ಧರ್ಮನಿರತನು, ಮಹಾರಥನು, ಎಂದೆನಿಸಿಕೊಂಡು ಪೂಜ್ಯತೆಯನ್ನೂ ಮರ್ಯಾದೆಯನ್ನೂ ಪಡೆದವನು ಇಂಥ ಮಹಾತ್ಮನಾದ ನೀನೇ ನನಗೆ ಪ್ರಿಯ ಅತಿಥಿಯಾಗಿ ಬಂದಿರುವೆ. ಇಂಥ ನಿನ್ನನ್ನು ನಾವು ವಿಶೇಷ ವಾಗಿ ಪೂಜಿಸಬೇಕೆಂಬುವುದನ್ನು ಹೇಳತಕ್ಕದ್ದೇನು ಎಂಬು ದಾಗಿ ನುಡಿದನು.

ಅತಿಥಿ ಕಿಲ ಪೂಜಾರ್ಹಃಪ್ರಾಕೃತೋಽಪಿ ವಿಜಾನತಾ ।
ಧರ್ಮಂ ಜಿಜ್ಞಾಸ ಮಾನೇನ ಕಿಂಪುನಸ್ತ್ವಾದೃಶೋ
ಮಹಾನ್ ॥

ಸುಂದರಕಾಂಡ, ಸರ್ಗ ೧, ಶ್ಲೋಕ ೧೨೦

ಮೈನಾಕನು ಹನುಮಂತನನ್ನು ಕುರಿತು ಅತಿಥಿಯು ಮೂಢನಾಗಿದ್ದರೂ ಮನೆಗೆ ಬಂದರೆ ಬಹಳ ಭಕ್ತಿಯಿಂದ ಪೂಜಿಸಿ ಅತಿಥಿಸತ್ಕಾರ ಮಾಡಬೇಕು. ಇಂಥಾದ್ದರಲ್ಲಿ ಪಂಡಿತ ನಾಗಿ ಧರ್ಮವನ್ನು ತಿಳಿದ ನನ್ನ ಬಂಧುವೇ ಬಂದಕಾಲದಲ್ಲಿ ಇನ್ನೂ ಹೆಚ್ಚಾಗಿ ಪೂಜಿಸಬೇಕು ಎಂಬುದಾಗಿ ಹೇಳಿದನು.

ನಿಷ್ಪಕ್ಷಪಾತ ತೀರ್ಮಾನ

ಅನ್ಯಾಮಧ್ಯಸ್ಥ ಚಿಂತಾಹಿ
ವಿಮರ್ದಾಭ್ಯಧಿಕೋದಯಾ ।

ಅಯೋಧ್ಯಾಕಾಂಡ, ಸರ್ಗ ೭, ಶ್ಲೋಕ ೧೬

ಪೂರ್ವಾಪರ ಪಕ್ಷಗಳನ್ನು ಚೆನ್ನಾಗಿ ವಿಮರ್ಶಿಸುವ ಮಧ್ಯಸ್ಥರಾದವರ ಆಲೋಚನೆಯೇ ಶ್ರೇಷ್ಠ ಎಂಬುದಾಗಿ ದಶರಥನು ಸಭೆಯಲ್ಲಿ ಮಂತ್ರಿಗಳಿಗೆ ಹೇಳಿದನು.

ಸತ್ಪುರುಷ ಲಕ್ಷಣ

ಸತಾಂತು ಧರ್ಮನಿತ್ಯಾನಾಂ ಕೃತಶೋಭಿಚ ರಾಘವ ।

ಅಯೋಧ್ಯಾಕಾಂಡ, ಸರ್ಗ ೪, ಶ್ಲೋಕ ೨೭

ಧರ್ಮನಿರತರಾದ ಸತ್ಪುರುಷರ ಮನಸ್ಸು ಇತರರ ಶ್ರೇಯಃ ಕಾರ್ಯಗಳಲ್ಲಿ ಅನುಕೂಲ ಭಾವದಿಂದ ಪರಸ್ಪರೋಪಕಾರಕ ವಾಗಿಯೇ ಪ್ರವರ್ತಿಸುತ್ತದೆ ಎಂಬುದಾಗಿ ದಶರಥನು ಶ್ರೀರಾಮನಿಗೆ ಹೇಳಿದನು.

ಸಮಯೇ ಸೌಮ್ಯತಿಷ್ಠಂತಿ ಸತ್ವವಂತೋ
ಮಹಾಬಲಾಃ ।

ಸುಂದರಕಾಂಡ, ಸರ್ಗ ೩, ಶ್ಲೋಕ ೪೫

ಮನುಷ್ಯನ ಮನಸ್ಸು ಕ್ಷಣ ಕ್ಷಣಕ್ಕೂ ಬದಲಾವಣೆಯಾಗ ತಕ್ಕವುಗಳು ಎಂಬುದಾಗಿ ದಶರಥನು ಶ್ರೀರಾಮನಿಗೆ ತಿಳಿಸಿದನು.

ಕಿಂತು ಚಿತ್ತಂ ಮನುಷ್ಯಾಣಾಂ
ಅನಿತ್ಯಮಿತಿಮೇ ಮತಿಃ ।

ಅಯೋಧ್ಯಾಕಾಂಡ, ಸರ್ಗ ೪, ಶ್ಲೋಕ ೨೭

ದಶರಥನು ಶ್ರೀರಾಮನನ್ನು ಕುರಿತು ಮನುಷ್ಯನ ಮನಸ್ಸು ಚಂಚಲ ಸ್ವಭಾವವುಳ್ಳದ್ದು ಎಂಬುದಾಗಿ ನನಗೆ ತೋರಿರುವುದು ಎಂದನು.

ಸೌಹಾರ್ದ ಅಥವಾ ಸ್ನೇಹಭಾವ

ಸನ್ನಿಕರ್ಷಾಚ್ಚ ಸೌಹಾರ್ದಂ ಜಾಯತೇ
ಸ್ಥಾವರೇಷ್ವಪಿ ।

ಅಯೋಧ್ಯಾಕಾಂಡ, ಸರ್ಗ ೮, ಶ್ಲೋಕ ೨೮

ಸ್ಥಾವರ ವರ್ಗಗಳೂ ಸಹ ಹತ್ತಿರ ಇರುವವರೊಡನೆ ಪ್ರೇಮವು ಹೆಚ್ಚುವುದು ಸ್ವಾಭಾವಿಕ ಎಂದು ಮಂಥರೆಯು ಕೈಕೇಯಿಗೆ ಹೇಳಿದಳು.

ಪರಿಮೃಷ್ಟೋ ದಶಾಂತೇನ ದಶಾಭಾಗೇನ ಸೇವ್ಯತೆ ॥

ಅರಣ್ಯಕಾಂಡ, ಸರ್ಗ ೭೨, ಶ್ಲೋಕ ೮

ಕಬಂಧನು ಶ್ರೀರಾಮನನ್ನು ಕುರಿತು ದುರವಸ್ಥೆಯನ್ನು ಹೊಂದಿದವನು ತನ್ನಂತೆ ದುರವಸ್ಥೆಯಲ್ಲಿರುವವನೊಡನೆ

ಸ್ನೇಹಕ್ಕೆ ಸೇರಿ ಸ್ವಕಾರ್ಯವನ್ನು ಸಾಧಿಸಿಕೊಳ್ಳಬೇಕು. ಎಂದನು.

ರಜತಂ ವಾ ಸುವರ್ಣಂ ವಾ ವಸ್ತ್ರಾಣ್ಯಾಭರಣಾನಿಚ।
ಅವಿಭಕ್ತಾನಿ ಸಾಧೂನಾಮವಗಚ್ಛಂತಿ ಸಾಧವಃ ॥

ಕಿಷ್ಕಿಂಧಾಕಾಂಡ ಸರ್ಗ ೮, ಶ್ಲೋಕ ೭

ಸುಗ್ರೀವನು ಶ್ರೀರಾಮನನ್ನು ಕುರಿತು ನಿಜವಾದ ಸ್ನೇಹಭಾವವುಳ್ಳವರು ತಮ್ಮೊಳಗೆ ಒಬ್ಬರೊಬ್ಬರು ತಮ್ಮಿಬ್ಬರಲ್ಲಿರುವ ಸುವರ್ಣ ರಜತಾದಿಗಳನ್ನಾಗಲೀ ವಸ್ತ್ರಭೂಷಣಾದಿಗಳನ್ನಾಗಲೀ ಬೇರೆ ಯಾವ ವಸ್ತುವನ್ನಾಗಲೀ ಅವಿಭಕ್ತವಾದಂತೆ ಎಣಿಸುವರೇ ಹೊರತು ಭೇದ ಬುದ್ಧಿಯನ್ನು ತೋರಿಸುವುದಿಲ್ಲ.

ಆಢ್ಯೋವಾಪಿ ದರಿದ್ರೋವಾ
ದುಃಖಿತಸ್ಸುಖಿತೋಪಿ ವಾ।
ನಿರ್ದೋಷೋವಾ ಸದೋಷೋವಾ
ವಯಸ್ಯಃ ಪರಮಾಗತಿಃ ॥

ಕಿಷ್ಕಿಂಧಾಕಾಂಡ, ಸರ್ಗ ೪, ಶ್ಲೋಕ ೮

ಧನವಂತನಾಗಲೀ ದರಿದ್ರನಾಗಲೀ ದುಃಖಿತನಾಗಲೀ ಸುಖಿಯಾಗಲೀ ದೋಷಿಯಾಗಲೀ ನಿರ್ದೋಷಿಯಾಗಲೀ ಮಿತ್ರನೇ ಪರಮಗತಿಯು.

ಧನತ್ಯಾಗ ಸುಖತ್ಯಾಗೋ ದೇಹತ್ಯಾಗೋಽಪಿವಾ ಪುನಃ ।
ವಯಸ್ಯಾರ್ಥೆ ಪ್ರವರ್ತಂತೇ ಸ್ನೇಹಂ ದೃಷ್ಟ್ವಾ ತಥಾವಿಧಂ ॥

ಕಿಷ್ಕಿಂಧಾಕಾಂಡ, ಸರ್ಗ ೮, ಶ್ಲೋಕ ೯

ಸನ್ಮಿತ್ರರು ಮತ್ತೊಬ್ಬರಲ್ಲಿ ಸ್ನೇಹಮಾಡಿದಲ್ಲಿ ಅಂಥ ಆಪ್ತರಿಗಾಗಿ ತಮ್ಮ ಧನವನ್ನಾಗಲೀ ಕೊನೆಗೆ ದೇಹವನ್ನಾಗಲೀ ಸುಖವನ್ನೇ ಆಗಲೀ ಸ್ನೇಹ ನೋಡಿ ಒಪ್ಪಿಸಿಬಿಡುವರು ಎಂದನು.

ಉಪಕಾರ ಫಲಂ ಮಿತ್ರಂ ಅಪಕಾರೋಽರಿ ಲಕ್ಷಣಂ ॥

ಕಿಷ್ಕಿಂಧಾಕಾಂಡ, ಸರ್ಗ ೮. ಶ್ಲೋಕ ೨೧

ಶ್ರೀರಾಮನು ಸುಗ್ರೀವನನ್ನು ಕುರಿತು ಮಿತ್ರನಾದುದಕ್ಕೆ ಉಪಕಾರ ಮಾಡುವುದೇ ಫಲವು. ಅಪಕಾರ ಮಾಡುವುದೆ ಶತೃವಿನ ಲಕ್ಷಣವು ಎಂದನು.

ದುಃಖಿತ ಸ್ಸುಖಿತೋವಾಽಪಿ ಸಖ್ಯುರ್ನಿತ್ಯಂ ಸಖಾಗತಿಃ॥

ಕಿಷ್ಕಿಂಧಾಕಾಂಡ, ಸರ್ಗ ೮, ಶ್ಲೋಕ ೪೦

ದುಃಖಿತನಾಗಲೀ ಸುಖಿತನಾಗಲೀ ಮಿತ್ರನಿಗೆ ಮಿತ್ರನೇ ಗತಿಯು ಎಂಬುದಾಗಿ ಸುಗ್ರೀವನು ಶ್ರೀರಾಮನಿಗೆ ಹೇಳಿದನು.

ಭಯದ ಲಕ್ಷಣ

ಭಯಂ ಭೀತಾದ್ಧಿ ಜಾಯತೆ

ಅಯೋಧ್ಯಾಕಾಂಡ, ಸರ್ಗ ೮, ಶ್ಲೋಕ ೪

ಭಯದಿಂದ ಭಯವು ಹುಟ್ಟುವುದು ಮಂಥರೆಯು ಕೈಕೇಯಿಗೆ ಹೇಳಿದಳು.

ಭಯೇ ಸರ್ವೇಹಿ ಬಿಭ್ಯತಿ ।

ಅಯೋಧ್ಯಾಕಾಂಡ, ಸರ್ಗ ೨೯, ಶ್ಲೋಕ ೪

ಭಯ ಉಂಟಾದಾಗ ಎಲ್ಲರೂ ಭಯಪಡುವರು ಎಂಬುದಾಗಿ ಶ್ರೀರಾಮನು ಸೀತೆಗೆ ಹೇಳಿದನು.

ಮುಂಜಾಗ್ರತೆ

ಗತೋದಕೆ ಸೇತು ಬಂಧೋ ನ ಕಲ್ಯಾಣಿ ವಿಧೀಯತೆ।

ಅಯೋಧ್ಯಾಕಾಂಡ, ಸರ್ಗ ೯, ಶ್ಲೋಕ ೫೪

ಪ್ರವಾಹವು ಇಳಿದುಹೋದಮೇಲೆ ಸೇತುವೆ ಕಟ್ಟುವಂತೆ ಈಗ ನೀನು ತಡೆಮಾಡಿದರೆ ಕೆಲಸ ಕೆಡುವುದು ಎಂಬುದಾಗಿ ಮಂಥರೆಯು ಕೈಕೆಯಿಗೆ ಬೋಧಿಸಿದಳು.

ಅನಾಗತ ವಿಧಾನಂತು ಕರ್ತವ್ಯಂ ಶುಭಮಿಚ್ಛತಾ ।
ಆಪದಂ ಶಂಕಮಾನೇನ ಪುರುಷೇಣ ವಿಪಶ್ಚಿತಾ ॥

ಅರಣ್ಯಕಾಂಡ, ಸರ್ಗ ೨೪, ಶ್ಲೋಕ ೧೧

ತನ್ನ ಕ್ಷೇಮವನ್ನು ಬಯಸುವವನು ತನಗೆ ಆಪತ್ತು ಬರಬಹುದೆಂಬ ಅನುಮಾನ ತೋರಿದಾಗ ಅದು ಪ್ರಾಪ್ತವಾಗು

ವುದಕ್ಕೆ ಮೊದಲೇ ತಕ್ಕ ಪ್ರತೀಕಾರ ಯೋಚಿಸಿರಬೇಕು ಎಂದು ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು.

ಆಪತ್ಸಂಶಯಿತಾ ಶ್ರೇಯೋ ನತು ನಿಸ್ಸಂಶಯಿೂ ಕೃತಾ ।

ಯುದ್ಧಕಾಂಡ, ಸರ್ಗ ೫೭, ಶ್ಲೋಕ ೧೧

ಮುಂದೆ ಆಪತ್ತು ಬರುತ್ತೆಂಬ ಊಹೆ ಬಂದಾಗ ನಿಸ್ಸಂದೇಹವಾಗಿರಬಾರದು. ಸಂಶಯದಿಂದ ಇದ್ದು ಮೊದಲೇ ತಕ್ಕ ಪ್ರತೀಕಾರ ಮಾಡಬೇಕೆಂದು ಪ್ರಹಸ್ತನಿಗೆ ರಾವಣನು ತಿಳಿಸಿದನು.

ಬಂಜೆತನ

ಏಕಏವಹಿ ವಂಧ್ಯಾಯಾಃ ಶೋಕೋಭವತಿ ಮಾನಸಃ।
ಅಪ್ರಜಾಸ್ಮೀತಿ ಸಂತಾಪೋ ನಹ್ಯನ್ಯಃ ಪುತ್ರ ವಿದ್ಯತೆ ॥

ಮಕ್ಕಳಿಲ್ಲದವರಿಗೆ ಮಕ್ಕಳಿಲ್ಲವೆಂಬುವದೊಂದೇ ಚಿಂತೆಯೇ ಹೊರತು ಬೇರೆ ಯಾವ ದುಃಖವೂ ಇರುವುದಿಲ್ಲವೆಂದು ಕೌಸಲ್ಯೆಯು ಶ್ರೀರಾಮನಿಗೆ ಹೇಳಿದಳು.

ಮೃದುನಿಂದೆ

ಮೃದುರ್ಹಿ ಪರಿಭೂಯತೆ ।

ಅಯೋಧ್ಯಾಕಾಂಡ, ಸರ್ಗ ೨೧, ಶ್ಲೋಕ ೧೧

ಮೃದುವಾಗಿದ್ದಷ್ಟೂ ಇತರರು ತಿರಸ್ಕರಿಸುವರು ಎಂಬುದಾಗಿ ಲಕ್ಷ್ಮಣನು ಶ್ರೀರಾಮನಿಗೆ ಅರುಹಿದನು.

ಪ್ರಶಮಶ್ಚ ಕ್ಷಮಾಚೈವ ಆರ್ಜವಂ ಪ್ರಿಯಭಾಷಿತಾ ।
ಅಸಾಮರ್ಥ್ಯಂ ಫಲಂತ್ಯೇತೇ ನಿರ್ಗುಣೇಷು
ಸತಾಂ ಗುಣಾಃ ॥

ಯುದ್ಧಕಾಂಡ, ಸರ್ಗ ೨೧, ಶ್ಲೋಕ ೧೪

ಕೋಪವಿಲ್ಲದಿರುವುದು ತಪ್ಪನ್ನು ಕ್ಷಮಿಸುವುದು; ನಿಷ್ಕಪಟವಾಗಿರುವುದು; ಪ್ರಿಯವಾಗಿ ಮಾತನಾಡುವುದು ಈ ಮೊದಲಾದ ಸತ್ಪುರುಷರ ಲಕ್ಷಣಗಳುಳ್ಳವರನ್ನು ದುರ್ಜನರು ಅವರನ್ನು ಕೈಲಾಗದವರೆಂತ ತಿಳಿಯುತ್ತಾರೆ ಎಂಬುದಾಗಿ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು.

ಮೃದುರ್ಲೋಕ ಹಿತೇಯುಕ್ತಂ ದಾಂತಂ
ಕರುಣವೇದಿನಂ ।
ನಿರ್ವೀರ್ಯ ಇತಿ ಮನ್ಯಂತೇ ನೂನಂ ಮಾಂ
ತ್ರಿದಶೇಶ್ವರಾಃ ॥

ಅರಣ್ಯಕಾಂಡ, ಸರ್ಗ ೬೪, ಶ್ಲೋಕ ೫೫

ಕೇವಲ ಮೃದುತ್ವವನ್ನು ವಹಿಸಿ ಸಮಸ್ತ ಪ್ರಜೆಗಳಿಗೂ ಹಿತವನ್ನು ಬಯಸುತ್ತಾ ಎಲ್ಲರಲ್ಲಿಯೂ ದಯೆಯನ್ನು ತೋರಿಸಿ ಶಾಂತನಾಗಿರುವುದರಿಂದ ದೇವತೆಗಳೆಲ್ಲರೂ ನನ್ನನ್ನು ಕೈಲಾಗದವನೆಂದು ಎಣಿಸಿರುವರು ಎಂಬುದಾಗಿ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು.

ಮಾತೃಭಕ್ತಿ

ಶುಶ್ರೂಷುರ್ಜನನೀಂ ಪುತ್ರ ಸ್ವಗೃಹೇ ನಿಯತೋ ವರ್ಸ್ |
ಪರೇಣ ತಪಸಾಯುಕ್ತಃ ಕಾಶ್ಯಪಸ್ತ್ರಿದಿವಂ ಗತಃ ||

ಅಯೋಧ್ಯಾಕಾಂಡ, ಸರ್ಗ ೨೧, ಶ್ಲೋಕ ೨೩

ಕೌಸಲ್ಯೆಯು ಶ್ರೀರಾಮನನ್ನು ಕುರಿತು ಎಲೈ ಪುತ್ರನೆ! ನೀನು ಇಲ್ಲಿಯೇ ಇದ್ದು ನನ್ನ ಶುಶ್ರೂಷೆ ಮಾಡು. ಮಾತೃ ಶುಶ್ರೂಷೆಯಿಂದ ಕಶ್ಯಪನ ಮಕ್ಕಳಲ್ಲಿ ಒಬ್ಬನು ಮಹಾತಪಸ್ಸನ್ನು ಸಾಧಿಸಿ ಸ್ವರ್ಗಲೋಕವನ್ನು ಪಡೆದನು ಎಂದನು.

ವೃದ್ಧಾಯಾ ಧರ್ಮಶೀಲಾಯಾ ಮಾತುರ್ನಾರ್ಹಸ್ಯ ವರ್ತಿತುಂ |
ಅಸ್ಯಾಸ್ತು ವಚನಂ ಕುರ್ವ್ವನ್ನಾತಿ ವರ್ತೇಸ್ಸತಾಂಗತಿಂ ||

ಅಯೋಧ್ಯಾಕಾಂಡ, ಸರ್ಗ ೧೧೧, ಶ್ಲೋಕ ೬

ವಶಿಷ್ಠನು ಶ್ರೀರಾಮನನ್ನು ಕುರಿತು ವೃದ್ಧರಾಗಿಯೂ ಧರ್ಮಶೀಲರಾಗಿಯೂ ಇರುವ ನಿನ್ನ ಮಾತೆಯರ ಶುಶ್ರೂಷೆಯನ್ನು ಬಿಟ್ಟುಹೋಗುವುದು ಉಚಿತವಲ್ಲ ಇವರ ಮಾತನ್ನು ನಡೆಸುತ್ತಾ ಸತ್ಪುರುಷರ ಮರ್ಯಾದೆಯನ್ನು ಮೀರಬೇಡ ಎಂದನು.

ಪಿತೃಭಕ್ತಿ

ಪಿತಾಹಿ ಪ್ರಭುರಸ್ಮಾಕಂ ದೈವತಂ ಪರಮಂ ಹಿನಃ |
ಯಸ್ಯನೋ ದಾಸ್ಯತಿ ಪಿತಾ ಸನೋಭರ್ತಾ ಭವಿಷ್ಯತಿ||

ಬಾಲಕಾಂಡ, ಸರ್ಗ ೩೨, ಶ್ಲೋಕ ೨೧

ಕುಶನಾಭನ ಹೆಣ್ಣುಮಕ್ಕಳನ್ನು ಪತಿಯಾಗಿ ವರಿಸಬೇಕೆಂದು ವಾಯುದೇವರು ಅವರನ್ನುಕೇಳಿದಾಗ ಆ ಹೆಣ್ಣುಮಕ್ಕಳು ವಾಯುದೇವರನ್ನು ಕುರಿತು ತಂದೆಯೇ ನಮಗೆ ಪ್ರಭು ಮತ್ತು ನಮಗೆ ಶ್ರೇಷ್ಠವಾದ ದೇವರು. ತಂದೆಯು ನಮ್ಮನ್ನು ಯಾರಿಗೆ ಧಾರೆ ಎರೆದು ಕೊಡುವರೋ ಆತನೇ ನಮಗೆ ಪತಿಯಾಗುವನು ಎಂದರು

ಯತೋಮೂಲಂ ನರಃಪಶ್ಯೇತ್ ಪ್ರಾದುರ್ಭಾವ
ಮಹಾತ್ಮನಃ ।
ಕಥಂ ತಸ್ಮಿನ್ ನವರ್ತೇತ ಪ್ರತ್ಯಕ್ಷೆ ಸತಿ ದೈವತೆ ॥

ಅಯೋಧ್ಯಾಕಾಂಡ, ಸರ್ಗ ೧೮, ಶ್ಲೋಕ ೧೬

ಶ್ರೀರಾಮನು ಕೈಕೇಯಿಯನ್ನು ಕುರಿತು ಲೋಕದಲ್ಲಿ ತನ್ನ ಜನನಕ್ಕೆ ಕಾರಣನಾದ ತಂದೆಯನ್ನು ಪ್ರತ್ಯಕ್ಷದೇವರಾಗಿ ಎಣಿಸಿ ಅಂತಹ ಹೆತ್ತತಂದೆಗೆ ಯಾವನು ತಾನೇ ವಿಧೇಯನಾಗಿ ನಡೆಯದೆ ಇರುವನು ಎಂದನು.

ಏಷ ಧರ್ಮಸ್ತು ಸುಶ್ರೋಣಿ ಪಿತುರ್ಮಾತುಶ್ಚ ವಶ್ಯತಾ।
ಅತಶ್ಚ ತಂ ವ್ಯತಿಕ್ರಮ್ಯ ನಾಹಂ ಜೀವಿತು ಮುತ್ಸಹೆ ॥

ಅಯೋಧ್ಯಾಕಾಂಡ, ಸರ್ಗ ೩೦, ಶ್ಲೋಕ ೩೨

ಎಲೌ ಸುಶ್ರೋಣಿಯೆ! ತಾಯಿತಂದೆಗಳ ವಿಷಯದಲ್ಲಿ ವಿಧೇಯನಾಗಿರಬೇಕೆಂಬುವುದೇ ಮನುಷ್ಯನು ಅನುಸರಿಸಬೇಕಾದ ಧರ್ಮವು. ಆದ್ದರಿಂದ ಅದಕ್ಕೆ ವಿರೋಧವಾಗಿ ನಡೆದರೆ ನನ್ನ ಜೀವನವೇ ಬೇಡ.

ಅಸ್ವಾಧೀನಂ ಕಥ ದೈವಂ ಪ್ರಕಾರೈ ರಭಿರಾಧ್ಯತೆ ।
ಸ್ವಾಧೀನಂ ಸಮತಿಕ್ರಮ್ಯ ಮಾತರಂ ಪಿತರಂ ಗುರುಂ॥

ಅಯೋಧ್ಯಾಕಾಂಡ, ಸರ್ಗ ೩೦ ಶ್ಲೋಕ ೩೩

ತಾಯಿ ತಂದೆ ಗುರು ಈ ಮೂವರೂ ಪ್ರತ್ಯಕ್ಷ ದೇವರಾಗಿ ಎದುರಿಗೆ ಇರುವಾಗ ವಶ್ಯವಾಗಿರುವ ಇವರನ್ನು ಆರಾಧನೆ ಮಾಡದೆ ನಮಗೆ ವಶ್ಯರಲ್ಲದ ಇತರ ದೇವತೆಗಳನ್ನು ಎಷ್ಟು ವಿಧದಲ್ಲಿ ಪೂಜಿಸಿದರೇನು?

ಯತ್ರಯಂ ತತ್ರಯೋ ಲೋಕಾಃ ಪವಿತ್ರಂ ತತ್ಸಮಂಭುವಿ ।
ನಾನ್ಯದಸ್ತಿ ಶುಭಾಪಾಂಗೆ ತೇನೇದಮಭಿರಾಧ್ಯತೆ ॥

ಅಯೋಧ್ಯಾಕಾಂಡ, ಸರ್ಗ ೩೦, ಶ್ಲೋಕ ೩೪

ತಂದೆ ತಾಯಿ ಗುರು ಇವರುಗಳಿಗೆ ಶುಶ್ರೂಷೆಯನ್ನು ಮಾಡುತ್ತಿದ್ದರೆ ಮೂರು ಲೋಕಗಳಲ್ಲಿರುವ ದೇವತೆಗಳನ್ನು ಆರಾಧಿಸಿದಷ್ಟು ಫಲವುಂಟು. ಇವರಂತೆ ಪವಿತ್ರವಾದ ದೈವವು ಬೇರೊಂದಿಲ್ಲ. ಆದ್ದರಿಂದ ಇವರನ್ನು ನಾನು ಆರಾಧಿಸುತ್ತೇನೆ.

ನ ಸತ್ಯಂ ದಾನ ಮಾನೌವಾನ ಯಜ್ಞಾಶ್ಚಾಪ್ತ ದಕ್ಷಿಣಾಃ ।
ತಥಾ ಬಲಕರಾ ಸೀತೆ ಯಥಾಸೇವಾ ಪಿತುರ್ಹಿತಾ ॥

ಅಯೋಧ್ಯಾಕಾಂಡ, ಸರ್ಗ ೩೦, ಶ್ಲೋಕ ೩೫

ಎಲೆ ಸೀತ ಪಿತೃಶುಶ್ರೂಷೆ ಎಂಬುವುದು ಎಷ್ಟರಮಟ್ಟಿಗೆ ಪರಲೋಕಸಾಧನೆಯಾಗಿರುವುದೋ ಅಷ್ಟರಮಟ್ಟಿಗೆ ಸತ್ಯವಾಗಲೀ ದಾನಮಾನಗಳಾಗಲೀ ಉಚಿತ ದಕ್ಷಿಣೆಗಳುಳ್ಳ ಯಾಗಗಳಾಗಲೀ ಪರಲೋಕ ಸಾಧಕಗಳಾಗಿರುವುದಿಲ್ಲ.

ಸ್ವರ್ಗೋ ಧನಂವಾ ಧಾನ್ಯಂವಾ ವಿದ್ಯಾಃ ಪುತ್ರಾಃ ಸುಖಾನಿಚ ।
ಗುರುವೃತ್ತ್ಯನುರೋಧೇನ ನಕಿಂಚಿದಪಿ ದುರ್ಲಭಂ ॥

ಅಯೋಧ್ಯಾಕಾಂಡ, ಸರ್ಗ ೩೦, ಶ್ಲೋಕ ೩೬

ಸ್ವರ್ಗಗಳಾಗಲೀ ಧನಧಾನ್ಯಗಳಾಗಲೀ ವಿದ್ಯೆಗಳಾಗಲೀ ಪುತ್ರಸಂತಾನವಾಗಲೀ ಸೌಖ್ಯಗಳಾಗಲೀ ಬೇರೆ ಯಾವವಿಧವಾದ ಕಾರ್ಯಸಿದ್ಧಿಯಾಗಲೀ ಕ್ರಮವಾಗಿ ನಡೆಸಿದ ಗುರುಶುಶ್ರೂಷೆಯಿಂದಲೇ ಲಭಿಸುವುವು. ಅದರಿಂದ ಸಾಧ್ಯವಾಗದೆ ಇರುವುದು ಒಂದೂ ಇಲ್ಲ.

ದೇವಗಂಧರ್ವಗೋಲೋಕಾನ್ ಬ್ರಹ್ಮಲೋಕಂ ತಥಾಪರಾನ್ ।
ಪ್ರಾಪ್ನುವಂತಿ ಮಹಾತ್ಮಾನೋ ಮಾತಾಪಿತೃ ಪರಾಯಣಾಃ ॥

ಅಯೋಧ್ಯಾಕಾಂಡ, ಸರ್ಗ ೩೦, ಶ್ಲೋಕ ೩೭

ತಾಯಿ ತಂದೆಗಳನ್ನು ಎಡೆಬಿಡದೆ ಭಕ್ತಿಯಿಂದ ಉಪಚರಿಸುತ್ತಿರುವ ಮಹಾತ್ಮರು ದೇವಲೋಕವನ್ನೂ ಗಂಧರ್ವಲೋಕವನ್ನೂ ಗೋಲೋಕವನ್ನೂ ಇತರ ಪುಣ್ಯಲೋಕಗಳನ್ನೂ

ಬ್ರಹ್ಮಲೋಕವನ್ನೂ ಸೇರುವರು ಎಂಬುದಾಗಿ ಶ್ರೀರಾಮನು ಸೀತೆಗೆ ತಿಳಿಸಿದನು.

ಪಿತುರ್ಹಿ ವಚನಂ ಕುರ್ವ್ರ್ನ ನಕಶ್ಚಿನ್ನಾಮಹೀಯತೆ ।

ಅಯೋಧ್ಯಾಕಾಂಡ, ಸರ್ಗ ೨೧, ಶ್ಲೋಕ ೩೬

ತಂದೆಗೆ ವಿಧೇಯನಾಗಿ ಅವರ ಮಾತನ್ನು ಗೌರವಿಸುತ್ತಿದ್ದವರಿಗೆ ಯಾರಿಗೂ ಸಹ ಯಾವ ತೊಂದರೆಯೂ ಆಗುವುದಿಲ್ಲ ಎಂಬುದಾಗಿ ಶ್ರೀರಾಮನು ಕೌಸಲ್ಯೆಗೆ ಅರುಹಿದನು.

ಪಿತುರ್ಹಿ ಸಮತಿಕ್ರಾಂತಂ ಪುತ್ರೋಯಃ
ಸಾಧುಮನ್ಯತೇ ।
ತದಪಥ್ಯಂ ಮತಂಲೋಕೆ ವಿಪರೀತ
ಮತೋನ್ಯಥಾ ॥

ಅಯೋಧ್ಯಾಕಾಂಡ, ಸರ್ಗ ೧೦೬, ಶ್ಲೋಕ ೧೫

ತಂದೆಯು ಮಾಡಿದ ಧರ್ಮಾತಿಕ್ರಮವನ್ನು ಯಾವ ಪುತ್ರನು ತಿದ್ದುವುದಕ್ಕೆ ಯತ್ನಿಸುವನೋ ಆತನೇ ಸತ್ಪುತ್ರನೆನಿಸುವನು ಎಂಬುದಾಗಿ ಭರತನು ಶ್ರೀರಾಮನಿಗೆ ಹೇಳಿದನು.

ಲಕ್ಷ್ಮೀಶ್ಚಂದ್ರಾದ ಪೇಯಾದ್ವಾ ಹಿಮಾವಾನ್ವಾ
ಹಿಮಂತ್ಯಜೇತ್ ।
ಅತೀಯಾತ್ಸಾಗರೋ ವೇಲಾಂ ನಪ್ರತಿಜ್ಞಾ
ಮಹಂ ಪಿತುಃ ॥

ಅಯೋಧ್ಯಾಕಾಂಡ, ಸರ್ಗ ೧೧೨, ಶ್ಲೋಕ ೧೮

ಶ್ರೀರಾಮನು ಭರತನನ್ನು ಕುರಿತು ಒಂದು ವೇಳೆ ಚಂದ್ರ ಕಾಂತಿಯು ಚಂದ್ರನನ್ನು ಬಿಟ್ಟು ಹೋದರೂ ಹಿಮವತ್ಪರ್ವತವು ಹಿಮವನ್ನು ಬಿಟ್ಟರೂ ಸಮುದ್ರವು ತನ್ನ ಮೇರೆಯನ್ನು ಅತಿಕ್ರಮಿಸಿದರೂ ನಾನೇನೋ ನನ್ನ ತಂದೆಗೆ ಕೊಟ್ಟ ಭಾಷೆಯನ್ನು ತಪ್ಪಲಾರೆನು ಎಂದನು.

ಜ್ಯೇಷ್ಠೋಭ್ರಾತಾ ಪಿತಾಚೈವ ಯಶ್ಚ ವಿದ್ಯಾಂ
ಪ್ರಯಚ್ಛತಿ ।
ತ್ರಯಸ್ತೇ ಪಿತರೋಜ್ಞೇಯಾ
ಧರ್ಮೇ ಪಥಿಹಿ ವರ್ತಿನಃ ॥

ಕಿಷ್ಕಿಂಧಾಕಾಂಡ, ಸರ್ಗ ೧೮, ಶ್ಲೋಕ ೧೩

ಶ್ರೀರಾಮನು ವಾಲಿಯನ್ನು ಕುರಿತು ಹೆತ್ತತಂದೆ ಹಿರಿ ಅಣ್ಣ ವಿದ್ಯಾಗುರು ಈ ಮೂವರು ತಂದೆಗೆ ಸಮಾನರು ಎಂಬದಾಗಿ ಧರ್ಮಮಾರ್ಗದಲ್ಲಿ ನಡೆಯತಕ್ಕ ಮಹಾತ್ಮರು ತಿಳಿದುಕೊಂಡಿದ್ದಾರೆ ಎಂದನು.

ಸಾಮಾನ್ಯ ಸ್ತ್ರೀಸ್ವಭಾವ

ಧಿಗಸ್ತು ಯೋಷಿತೋನಾಮ
ಶಠಾ ಸ್ವಾರ್ಥಪರಾಸ್ಸದಾ ।
ನ ಬ್ರವೀಮಿ ಸ್ತ್ರಿಯಸ್ಸರ್ವಾ
ಭರತಸ್ಯೈವ ಮಾತರಂ ॥

ಅಯೋಧ್ಯಾಕಾಂಡ, ಸರ್ಗ ೧೨ ಶ್ಲೋಕ ೧೦೨

ಯಾವಾಗಲೂ ಸ್ವಾರ್ಥ ಪರವಾಗಿ ಇತರರಿಗೆ ಕೇಡನ್ನು ಮಾಡುವ ಸ್ವಭಾವವುಳ್ಳ ಸ್ತ್ರೀ ಜಾತಿಯನ್ನೇ ಸುಡಬೇಕು.

ಎಲ್ಲಾ ಸ್ತ್ರೀ ಸಾಮಾನ್ಯವನ್ನೇ ಯಾಕೆ ನಿಂದಿಸಲಿ. ಮುಖ್ಯವಾಗಿ ಈಗ ಭರತನ ತಾಯಿಯನ್ನು ಕುರಿತು ಹೇಳಬೇಕಾಗಿದೆ ಎಂಬುದಾಗಿ ದಶರಥನು ತನ್ನಲ್ಲೇ ಅಂದುಕೊಂಡನು.

ಅಸತ್ಯ ಸರ್ವಲೋಕೇಸ್ಮಿ
ಸತತಂ ಸತ್ಕೃತಾಃ ಪ್ರಿಯೈಃ ।
ಭರ್ತಾರಂ ನಾನು ಮನ್ಯಂತೇ
ವಿನಿಪಾತಗತಂ ಸ್ತ್ರಿಯಃ ॥

ಅಯೋಧ್ಯಾಕಾಂಡ, ಸರ್ಗ ೩೯, ಶ್ಲೋಕ ೨೦

ಅನೇಕ ಸ್ತ್ರೀಯರು ಅಸತಿಯರಾಗಿ ತಮ್ಮ ಪತಿಗಳು ತಮ್ಮನ್ನು ಎಷ್ಟೇ ವಿಧದಲ್ಲಿ ಇಷ್ಟದಾನಾದಿಗಳಿಂದ ಸತ್ಕರಿಸುತ್ತಿದ್ದರೂ ಪತಿಗೆ ಏನಾದರೂ ಕಷ್ಟ ಒದಗಿದಾಗ ಆತನನ್ನು ಅನಾದರಿಸುವರು ಎಂಬುದಾಗಿ ಸೀತೆಯನ್ನು ಕುರಿತು ಕೌಸಲ್ಯೆಯು ಹೇಳಿದಳು.

ಏಷ ಸ್ವಭಾವೋ ನಾರೀಣಾಂ ಅನುಭೂಯ ಪುರಾ
ಸುಖಂ ।
ಅಲ್ಪಾನುಪ್ಯಾಪದಂ ಪ್ರಾಪ್ಯ ದುಷ್ಯಂತಿ ಪ್ರಜಹತ್ಯಪಿ॥

ಅಯೋಧ್ಯಾಕಾಂಡ, ಸರ್ಗ ೩೯, ಶ್ಲೋಕ ೨೧

ಮೊದಲು ಅನುಕೂಲ ಕಾಲಗಳಲ್ಲಿ ಬೇಕಾದ ಸೌಖ್ಯಗಳನ್ನೆಲ್ಲಾ ಯಥೇಚ್ಛವಾಗಿ ಅನುಭವಿಸಿ ತಮ್ಮ ಪತಿಗೆ ಏನಾದರೂ ಕಷ್ಟಬಂದ ಕಾಲದಲ್ಲಿ ಆತನನ್ನು ದೂಷಿಸುತ್ತಾ ಕೊನೆಗೆ ತ್ಯಜಿಸುವರು.

ಅಸತ್ಯಶೀಲಾಃ ವಿಕೃತಾ ದುರ್ಗ್ರಾಹ್ಯ ಹೃದಯಾಸ್ತಥಾ।
ಯುವತ್ಯಃ ಪಾಪಸಂಕಲ್ಪಾಃ
ಕ್ಷಣಮಾತ್ರಾದ್ವಿರಾಗಿಣಃ ॥

ಅಯೋಧ್ಯಾಕಾಂಡ, ಸರ್ಗ ೩೯, ಶ್ಲೋಕ ೨೨

ಸ್ತ್ರೀಯರು ಸುಳ್ಳಾಡುವ ಸ್ವಭಾವದವರು ಶುದ್ಧವಾದ ಮನಸ್ಸಿಲ್ಲದಿರುವುದರಿಂದ ನೋಡುವುದಕ್ಕೆ ಅಂದವಿಲ್ಲದವರು. ಅವರ ಮನಸ್ಸು ಹೀಗೆ ಇರಬಹುದೆಂತ ಹೇಳುವದಕ್ಕೆ ಸಾಧ್ಯವಿಲ್ಲದವರೂ ಪಾಪ ಸಂಕಲ್ಪವುಳ್ಳವರೂ, ನಿಮಿಷಮಾತ್ರದಲ್ಲಿ ಪ್ರೇಮವನ್ನು ತ್ಯಜಿಸುವವರೂ ಆಗಿರುತ್ತಾರೆ.

ನಕುಲಂ ನಕೃತಂ ವಿದ್ಯಾಂ ನದತ್ತಂ ನಾಪಿಸಂಗ್ರಹಂ।
ಸ್ತ್ರೀಣಾಂ ಗೃಹ್ಣಾತಿ ಹೃದಯಂ
ಅನಿತ್ಯಹೃದಯಾ ಹಿ ತಾಃ ॥

ಅಯೋಧ್ಯಾಕಾಂಡ, ಸರ್ಗ ೩೯, ಶ್ಲೋಕ ೨೩

ಸ್ತ್ರೀಯರು ತಮ್ಮ ವಂಶೋನ್ನತಿಯನ್ನಾಗಲೀ ಉಪಕಾರವನ್ನಾಗಲೀ ವಿದ್ಯೆಯನ್ನಾಗಲೀ ತಮಗೆ ಪತಿಯಿಂದ ಬಂದ ವಸ್ತ್ರಾಭರಣಾದಿ ಸನ್ಮಾನಗಳನ್ನಾಗಲೀ ಲೋಕ ಮರ್ಯಾದೆಯನ್ನಾಗಲೀ ಗಮನಿಸತಕ್ಕವರಲ್ಲ. ಅವರ ಹೃದಯವು ಸ್ಥಿರ ಮನಸ್ಸಿಲ್ಲದೆ ಬಹು ಚಂಚಲವಾಗಿರುತ್ತದೆ ಎಂಬುದಾಗಿ ಕೌಸಲ್ಯೆಯು ಸೀತೆಗೆ ಹೇಳಿದಳು.

ನತ್ವೇವ ಮವಗಚ್ಛಂತಿ ಗುಣದೋಷ ಮಸತ್ಸ್ತ್ರಿಯಃ।
ಕಾಮ ವಕ್ತವ್ಯಹೃದಯಾ
ಭರ್ತೃನಾಥಾಶ್ಚರಂತಿಯಾಃ ॥

ಅಯೋಧ್ಯಾಕಾಂಡ, ಸರ್ಗ ೧೧೭, ಶ್ಲೋಕ ೨೫

ಅನಸೂಯೆಯು ಸೀತೆಯನ್ನು ಕುರಿತು ದುಷ್ಟಸ್ತ್ರೀಯರು ಗುಣದೋಷ ಪರಿಜ್ಞಾನವಿಲ್ಲದೆ ಕಾಮ ಪರವಶರಾಗಿ ತಮ್ಮ ಪತಿಗಳನ್ನು ತಮ್ಮ ಕೈಕೆಳಗೆ ಇಟ್ಟುಕೊಂಡು ಮನಸ್ವೀ ಆಚರಿಸುತ್ತಾರೆ ಎಂದಳು.

ಪ್ರಾಪ್ನುವಂತ್ಯಯಶಶ್ಚೈವ ಧರ್ಮಭ್ರಂಶಶ್ಚ ಮೈಥಿಲೀ ।
ಅಕಾರ್ಯವಶಮಾಪನ್ನಾ ಸ್ತ್ರಿಯೋಯಾಃ
ಖಲುತದ್ವಿಧಾಃ ॥

ಅಯೋಧ್ಯಾಕಾಂಡ, ಸರ್ಗ ೧೧೭, ಶ್ಲೋಕ ೨೬

ಇಂಥಾ ದುಷ್ಟಸ್ತ್ರೀಯರು ಇಹಲೋಕದಲ್ಲಿ ಅಪಕೀರ್ತಿಯನ್ನು ಹೊಂದಿ ಪರಲೋಕದಲ್ಲಿ ಭ್ರಷ್ಟರಾಗಿ ನರಕದಲ್ಲಿ ಬೀಳುವರು ಎಂಬದಾಗಿ ಅನಸೂಯೆಯು ಸೀತೆಗೆ ಹೇಳಿದಳು.

ಏಷಾಹಿ ಪ್ರಕೃತಿಸ್ತ್ರೀಣಾಂ ಆಸೃಷ್ಟೇರಘುನಂದನ ।
ಸಮಸ್ಥಮನುರಂಜಂತಾ ವಿಷಮಸ್ಥಂ ತ್ಯಜಂತಿಚ ॥

ಅರಣ್ಯಕಾಂಡ, ಸರ್ಗ ೧೩, ಶ್ಲೋಕ ೫

ಲೋಕದಲ್ಲಿ ಸ್ತ್ರೀಯರು, ಗಂಡಂದಿರು ಉತ್ತಮಸ್ಥಿತಿಯಲ್ಲಿದ್ದಾಗ ಅವರನ್ನು ಗೌರವಿಸುವರು. ಕಷ್ಟದೆಶೆಯಲ್ಲಿರುವಾಗ ಅವರನ್ನು ತ್ಯಜಿಸುವರು. ಸೃಷ್ಟಿಕಾಲದಿಂದ ಸ್ತ್ರೀಯರಿಗೆ ಈ ರೀತಿ ವರ್ತಿಸುವುದು ಸ್ವಭಾವವು ಎಂಬದಾಗಿ ಅಗಸ್ತ್ಯರು ಶ್ರೀರಾಮನಿಗೆ ಹೇಳಿದರು.

ಶತಹ್ರದಾನಾಂ ಲೋಲತ್ವಂ ಶಸ್ತ್ರಾಣಾಂ
ತೀಕ್ಷ್ಣತಾಂ ತಥಾ।
ಗರುಡಾನಿಲಯೋಃ ಶೈಘ್ರ್ಯಂ
ಅನುಗಚ್ಛಂತಿ ಯೋಷಿತಃ ॥

ಅರಣ್ಯಕಾಂಡ, ಸರ್ಗ ೧೩, ಶ್ಲೋಕ ೬

ಅಗಸ್ತ್ಯರು ಶ್ರೀರಾಮನನ್ನು ಕುರಿತು ಸ್ತ್ರೀಯರ ಮನಸ್ಸು ಮಿಂಚಿನಂತೆ ಚಂಚಲವಾಗಿಯೂ ಆಯುಧದಂತೆ ತೀಕ್ಷ್ಣವಾಗಿಯೂ ಗರುಡ ವಾಯುಗಳಂತೆ ವೇಗವಾಗಿಯೂ ಇರುತ್ತದೆ ಎಂಬುದಾಗಿ ಹೇಳಿದರು.

ಪತಿವ್ರತಾ ಧರ್ಮ

ಭರ್ತುಃ ಕಿಲ ಪರಿತ್ಯಾಗೋ
ನೃಶಂಸಃ ಕೇವಲಂ ಸ್ತ್ರಿಯಾಃ।
ಸಭವತ್ಯಾ ನಕರ್ತವ್ಯೋ ಮನಸಾಪಿ ವಿಗರ್ಹಿತಃ ॥

ಅಯೋಧ್ಯಾಕಾಂಡ, ಸರ್ಗ ೨೪, ಶ್ಲೋಕ ೧೨

ಗಂಡನನ್ನು ಬಿಟ್ಟು ಹೋಗುವುದು ಹೆಂಗಸರಿಗೆ ಬಹಳ ಕ್ರೂರವಾದ ಕೃತ್ಯವು. ನಿನ್ನಂತಹ ಪತಿವ್ರತೆಗೆ ಮನಸ್ಸಿಗೂ ಅಸಹ್ಯವಾದ ಈ ಕೆಲಸ ಮಾಡಬಾರದು.

ವ್ರತೋಪವಾಸ ನಿರತಾ ಯಾ ನಾರೀ
ಪರಮೋತ್ತಮಾ।
ಭರ್ತಾರಂ ನಾನುವರ್ತೇತ ಸಾತು ಪಾಪ
ಗತಿರ್ಭವೇತ್ ॥

ಅಯೋಧ್ಯಾಕಾಂಡ, ಸರ್ಗ ೨೪, ಶ್ಲೋಕ ೨೫

ಯಾವಾಗಲೂ ವ್ರತೋಪವಾಸಗಳಲ್ಲಿ ನಿರತಳಾಗಿ ಉತ್ತಮ ಸ್ತ್ರೀ ಎನಿಸಿಕೊಂಡಿದ್ದರೂ ಯಾವಳು ತನ್ನ ಪತಿಯನ್ನು ಅನುಸರಿಸುವುದಿಲ್ಲವೋ ಆಕೆಯು ಪಾಪಫಲಕ್ಕೆ ಭಾಗಿಯಾಗುವಳು.

ಭರ್ತೃಶ್ಶುಶ್ರೂಷಯಾ ನಾರೀ
ಲಭತೇ ಸ್ವರ್ಗಮುತ್ತಮಂ ।
ಅಪಿಯಾ ನಿರ್ನಮಸ್ಕಾರಾ
ನಿವೃತ್ತಾ ದೇವಪೂಜನಾತ್ ॥

ಅಯೋಧ್ಯಾಕಾಂಡ, ಸರ್ಗ ೨೪, ಶ್ಲೋಕ ೨೬

ಗುರುಹಿರಿಯರಿಗೆ ನಮಸ್ಕರಿಸದೆ ದೇವಪೂಜೆ ಮುಂತಾಗಿ ಮಾಡದಿದ್ದರೂ ಪತಿಶುಶ್ರೂಷೆಯಲ್ಲಿ ನಿರತಳಾದ ಸ್ತ್ರೀಯು ಉತ್ತಮ ಗತಿಯನ್ನು ಹೊಂದುವಳು.

ಶುಶ್ರೂಷಾಮೇವ ಕುರ್ವೀತ
ಭರ್ತುಃ ಪ್ರಿಯ ಹಿತೇರತಾ ।
ಏಷಧರ್ಮಃ ಪುರಾದೃಷ್ಟೋ ಲೋಕೇ ವೇದೇ
ಶ್ರುತಸ್ಮೃತಃ ॥

ಅಯೋಧ್ಯಾಕಾಂಡ, ಸರ್ಗ ೨೪, ಶ್ಲೋಕ ೨೭

ಸ್ತ್ರೀಯಾದವಳು ಯಾವಾಗಲೂ ತನ್ನ ಪತಿಗೆ ಪ್ರಿಯಳಾಗಿಯೂ ಹಿತಳಾಗಿಯೂ ಇದ್ದು ಪತಿಶುಶ್ರೂಷೆ ಮಾಡಬೇಕು. ಈ ಧರ್ಮವು ಪುರಾತನವಾಗಿ ಬಂದ ಧರ್ಮವು. ವೇದಗಳು ಶ್ರುತಿಗಳು ಇದನ್ನೇ ಪ್ರತಿಪಾದಿಸುತ್ತವೆ ಎಂಬದಾಗಿ ಶ್ರೀರಾಮನು ಕೌಸಲ್ಯೆಗೆ ಹೇಳಿದನು.

ಆರ್ಯಪುತ್ರ ಪಿತಾಮಾತಾ ಭ್ರಾತಾ ಪುತ್ರಾಸ್ತಥಾ ಸ್ನುಷಾ।
ಸ್ವಾನಿ ಪುಣ್ಯಾನಿ ಭುಂಜಾನಾ
ಸ್ವಂಸ್ವಂ ಭಾಗ್ಯಮುಪಾಸತೇ ॥
ಭರ್ತುಃ ಭಾಗ್ಯಂತು ಭಾರ್ಯೈಕಾ
ಪ್ರಾಪ್ನೋತಿ ಪುರುಷರ್ಷಭ ।

ಅಯೋಧ್ಯಾಕಾಂಡ, ಸರ್ಗ ೨೭, ಶ್ಲೋಕ ೩

ಆರ್ಯಪುತ್ರನೆ, ಲೋಕದಲ್ಲಿ ತಂದೆ ತಾಯಿ ಒಡಹುಟ್ಟಿದವರು ಮಗ ಸೊಸೆ ಇವರುಗಳು ಅವರವರ ಪುಣ್ಯಗಳಿಗೆ ಭಾಗಿಯಾಗುವರು. ಹೆಂಡತಿಯಾದರೋ ತನ್ನ ಪತಿಯ ಭಾಗ್ಯಕ್ಕೂ ಸುಖಗಳಿಗೂ ಭಾಗಿಯಾಗುವಳು.

ನಪಿತಾ ನಾತ್ಮಜೋ ನಾತ್ಮಾ ನಮಾತಾ
ನಸಖೀಜನಃ ।
ಇಹ ಪ್ರೇತ್ಯಚ ನಾರೀಣಾಂ ಪತಿರೇಕೋ
ಸದಾಗತಿಃ ॥

ಬಾಲಕಾಂಡ, ಸರ್ಗ ೨೭, ಶ್ಲೋಕ ೫

ಸ್ತ್ರೀಯರಿಗೆ ತಂದೆ ಮಗ ತಾಯಿ ಸಖಿ ಇವರುಗಳು ಯಾರೂ ದಿಕ್ಕಾಗಿರುವುದಿಲ್ಲ. ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸಹಾ ಇವರಿಗೆ ಪತಿಯೊಬ್ಬನೇ ಆಶ್ರಯಭೂತನಾಗಿರುವನು.

ಪ್ರಾಸಾದಾಗ್ರೈರ್ವಿಮಾನೈರ್ವಾ ವೈಹಾಯಸ
ಗತೇನವಾ ।
ಸರ್ವಾವಸ್ಥಾ ಗತಾ ಭರ್ತುಃ ಪಾದಚ್ಛಾಯಾ ವಿಶಿಷ್ಯತೆ॥

ಅಯೋಧ್ಯಾಕಾಂಡ, ಸರ್ಗ ೨೭, ಶ್ಲೋಕ ೮

ಉಪ್ಪರಿಗೆಗಳಲ್ಲಿ ವಾಸಮಾಡುವುದಕ್ಕಿಂತಲೂ ವಿಮಾನಗಳಲ್ಲಿ ಸಂಚರಿಸುವುದಕ್ಕಿಂತಲೂ ಅಣಿಮಾದ್ಯಷ್ಟೈಶ್ವರ್ಯ ಸಿದ್ಧಿಗಳನ್ನು ಪಡೆದು ಆಕಾಶದಲ್ಲಿ ಸಂಚರಿಸುವುದಕ್ಕಿಂತಲೂ ಸರ್ವಾವಸ್ಥೆಗಳಲ್ಲಿಯೂ ಪತಿಯ ಪಾದಚ್ಛಾಯೆಯನ್ನನುಸರಿಸಿ ನಡೆಯುವುದೇ ಸ್ತ್ರೀಯರಿಗೆ ಸರ್ವೋತ್ತಮವಾದ ಧರ್ಮವು.

ಶ್ರುತಿರ್ಹಿಶ್ರೂಯತೇ ಪುಣ್ಯಾ ಬ್ರಾಹ್ಮಣಾನಾಂ
ಯಶಸ್ವಿನಾಂ ।
ಇಹಲೋಕೇಚ ಪಿತೃಭಿ ರ್ಯಾ ಸ್ತ್ರೀಯಸ್ಯ
ಮಹಾಮತೇ॥
ಅದ್ಭಿರ್ದತ್ತಾ ಸ್ವಧರ್ಮೇಣ ಪ್ರೇತ್ಯಭಾವೇಪಿ ತಸ್ಯಸಾ॥

ಅಯೋಧ್ಯಾಕಾಂಡ, ಸರ್ಗ ೨೯, ಶ್ಲೋಕ ೧೬-೧೮

ಯಾವ ಸ್ತ್ರೀಯು ತಂದೆ ತಾಯಿಗಳಿಂದ ದಾನ ಧಾರಾಪೂರ್ವಕವಾಗಿ ಮತ್ತೊಬ್ಬ ಪುರುಷನಿಗೆ ವಿವಾಹ ಮಾಡಿಕೊಡಲ್ಪಡುವಳೋ ಅಂತಹ ಸ್ತ್ರೀಗೆ ಪರಲೋಕದಲ್ಲಿಯೂ ಆ ಪುರುಷನೇ ಪತಿಯಾಗಿರುವನು ಎಂಬೀ ಶೃತಿಪ್ರಮಾಣ ಸಿದ್ಧವಾದ ವಿಷಯವನ್ನು ಯಶಸ್ವಿಗಳಾದ ಬ್ರಾಹ್ಮಣರಿಂದ ಕೇಳಿರುವೆನು ಎಂಬುದಾಗಿ ಸೀತಾದೇವಿಯು ಶ್ರೀರಾಮನಿಗೆ ಹೇಳಿದಳು.

ಆತ್ಮಾಹಿ ದಾರಾ ಸರ್ವೇಷಾಂ ದಾರಸಂಗ್ರಹ
ವರ್ತಿನಾಂ ।
ಆತ್ಮೇಯಮಿತಿ ರಾಮಸ್ಯ ಪಾಲಯಿಷ್ಯತಿ ಮೇದಿನೀಂ॥

ಅಯೋಧ್ಯಾಕಾಂಡ, ಸರ್ಗ ೩೭, ಶ್ಲೋಕ ೨೪

ಗೃಹಸ್ಥರಾದವರಿಗೆ ಭಾರ್ಯೆಯೇ ಆತ್ಮವೆಂದು ಶ್ರುತಿ ಪ್ರಮಾಣದಿಂದ ಸಿದ್ಧವಾಗಿರುವುದು. ಹೀಗೆ ಕೈ ಹಿಡಿದ ಹೆಂಡತಿಯಾದ ಈ ಸೀತೆಯು ಶ್ರೀರಾಮನಿಗೆ ಆತ್ಮಭೂತೆಯಾಗಿರುವುದರಿಂದ ಅವನ ಭಾಗದ ರಾಜ್ಯವನ್ನು ಪಾಲಿಸುವುದಕ್ಕೆ ಈಕೆಯೇ ಅರ್ಹಳು ಎಂಬುದಾಗಿ ವಸಿಷ್ಠನು ಕೈಕೇಯಿಗೆ ಹೇಳಿದನು.

ಸಾಧ್ವೀನಾಂ ಹಿ ಸ್ಥಿತಾನಾಂತು ಶೀಲೆ ಸತ್ಯೆ ಶೃತೆ ಶಮೆ।
ಸ್ತ್ರೀಣಾಂ ಪವಿತ್ರಂ ಪರಮಂ ಪತಿರೇಕೋ ವಿಶಿಷ್ಯತೆ ॥

ಅಯೋಧ್ಯಾಕಾಂಡ, ಸರ್ಗ ೩೯, ಶ್ಲೋಕ ೨೪

ನಡತೆಯಲ್ಲಿಯೂ ಸತ್ಯದಲ್ಲಿಯೂ ಗುರುಹಿರಿಯರ ಉಪದೇಶದಲ್ಲಿಯೂ ಶಮದಮಾದಿಗಳಲ್ಲಿಯೂ ನಿರತರಾದ ಉತ್ತಮ ಸ್ತ್ರೀಯರಿಗೆ ಪತಿಯೊಬ್ಬನೇ ಶ್ರೇಷ್ಠವಾದ ಪವಿತ್ರವಾದ ವಸ್ತುವು ಎಂಬುದಾಗಿ ಕೌಸಲ್ಯೆಯು ತನ್ನ ಸೊಸೆಯಾದ ಸೀತಾದೇವಿಗೆ ಹೇಳಿದಳು.

ನಾತಂತ್ರೀವಾದ್ಯತೇವೀಣಾ ನಾಚಕ್ರೋವರ್ತತೇ ರಥಃ ।
ನಾಪತಿಸ್ಸುಖಮೇಧೇತ ಯಾಸ್ಯಾದಪಿ ಶತಾತ್ಮಜಾಃ ॥

ಅಯೋಧ್ಯಾಕಾಂಡ, ಸರ್ಗ ೩೯, ಶ್ಲೋಕ ೨೯

ತಂತ್ರಿ ಇಲ್ಲದೆ ವೀಣೆ ಹೇಗೆ ನುಡಿಯುವುದಿಲ್ಲವೋ ಚಕ್ರವಿಲ್ಲದೆ ರಥ ಹೇಗೆ ಸಾಗುವುದಿಲ್ಲವೊ ಹಾಗೆಯೇ, ಸ್ತ್ರೀಯಾದವಳಿಗೆ ಒಂದು ನೂರು ಮಕ್ಕಳಿದ್ದರೂ ಗಂಡನಿಲ್ಲದಿದ್ದರೆ ಆಕೆಗೆ ಎಂದಿಗೂ ಸುಖವಿಲ್ಲ.

ಮಿತಂ ದದಾತಿಹಿ ಪಿತಾ ಮಿತಂ ಮಾತಾ ಮಿತಂ ಸುತಃ ।
ಅಮಿತಸ್ಯ ಹಿ ದಾತಾರಂ ಭರ್ತಾರಂ ಕಾ
ನಪೂಜಯೇತ್ ॥

ಅಯೋಧ್ಯಾಕಾಂಡ, ಸರ್ಗ ೩೯, ಶ್ಲೋಕ ೩೦

ಸ್ತ್ರೀಯರಿಗೆ ತಂದೆ ತಾಯಿ ಮಗ ಇವರುಗಳು ಎಷ್ಟು ಕೊಟ್ಟರೂ ಮಿತವಾಗಿ ಕೊಟ್ಟದ್ದು ಎಂಬುದಾಗಿ ಅನ್ನಿಸಿ ಕೊಳ್ಳುತ್ತದೆ. ಅವೆಲ್ಲವೂ ಐಹಿಕವಾದ ಫಲಕ್ಕೆ ಮಾತ್ರವೇ ಸಾಧನಗಳಾಗಿರುತ್ತವೆ. ಅವರಿಗೆ ಪತಿಯಿಂದ ಉಂಟಾಗತಕ್ಕ ಫಲಗಳಿಗಾದರೋ ಮಿತಿಯೇ ಇಲ್ಲವು. ಐಹಿಕಾಮುಷ್ಮಿಕ ಫಲಗಳೆರಡಕ್ಕೂ ಅವು ಸಾಧಕಗಳಾಗಿರುತ್ತವೆ. ಇಂಥಾ ಪತಿಯನ್ನು ಯಾರು ತಾನೇ ಗೌರವಿಸುವುದಿಲ್ಲ ಎಂಬುದಾಗಿ ಸೀತೆಯು ಕೌಸಲ್ಯೆಗೆ ಹೇಳಿದಳು.

ಭರ್ತುರಿಚ್ಛಾಹಿ ನಾರೀಣಾಂ ಪುತ್ರಕೋಟ್ಯಾ ವಿಶಿಷ್ಯತೇ।

ಅಯೋಧ್ಯಾಕಾಂಡ, ಸರ್ಗ ೩೫, ಶ್ಲೋಕ ೮

ಒಂದು ಕೋಟಿ ಪುತ್ರರಿದ್ದರೂ ಪತಿಯ ಇಷ್ಟದಂತೆ ನಡೆಯುವುದೇ ಸ್ತ್ರೀಯರಿಗೆ ಮೇಲಾದ ಧರ್ಮವು ಎಂಬುದಾಗಿ ಸುಮಂತ್ರನು ಕೈಕೇಯಿಗೆ ಹೇಳಿದನು.

ಭರ್ತಾತು ಖಲು ನಾರೀಣಾಂ ಗುಣವಾನ್
ನಿರ್ಗುಣೋಪಿವಾ ।
ಧರ್ಮಂ ವಿಮೃಶ ಮಾನಾನಾಂ ಪ್ರತ್ಯಕ್ಷಂ ದೇವಿ
ದೈವತಂ ॥

ಅಯೋಧ್ಯಾಕಾಂಡ, ಸರ್ಗ ೬೨, ಶ್ಲೋಕ ೮

ಪತಿಯು ಗುಣವಂತನಾಗಲೀ ದುರ್ಗುಣವಂತನಾಗಲೀ ಧರ್ಮ ನಿರತರಾದ ಸ್ತ್ರೀಯರಿಗೆ ಪತಿಯೇ ಪ್ರತ್ಯಕ್ಷ ದೇವರು ಎಂಬುದಾಗಿ ದಶರಥನು ಕೌಸಲ್ಯೆಗೆ ಹೇಳಿದನು.

ನೈಷಾಹಿಸಾ ಸ್ತ್ರೀ ಭವತಿ ಶ್ಲಾಘನೀಯೇನ ಧೀಮತಾ।
ಉಭಯೋರ್ಲೋಕಯೋ ವೀರ ಪ್ರತ್ಯಾಯಾ
ಸಂಪ್ರಸಾದ್ಯತೆ ॥

ಅಯೋಧ್ಯಾಕಾಂಡ, ಸರ್ಗ ೬೨, ಶ್ಲೋಕ ೧೩

ಎಲೈ ವೀರನೆ, ಶ್ಲಾಘ್ಯವಾದ ಗುಣವುಳ್ಳ ಮತ್ತು ಪಂಡಿತನಾದ ಪತಿಯಿಂದ ಯಾಚಿಸಲ್ಪಟ್ಟ ಹೆಂಡತಿಯು ಯೋಗ್ಯಳೂ ಅಲ್ಲ. ಇವಳು ಇಹಪರಗಳೆಂಬ ಉಭಯ ಲೋಕಗಳಿಗೂ ಬಹಿಷ್ಕೃತಳು ಎಂಬುದಾಗಿ ಕೌಸಲ್ಯೆಯು ದಶರಥನಿಗೆ ಹೇಳಿದಳು.

ಗತಿರೇಕಾ ಪತಿರ್ನಾರ್ಯಾ ದ್ವಿತೀಯೋ ಗತಿರಾತ್ಮಜಃ।
ತೃತೀಯೋ ಜ್ಞಾತಯೋ ರಾಜರ್
ಚತುರ್ಥೀನೇಯು ವಿದ್ಯತೆ ॥

ಅಯೋಧ್ಯಾಕಾಂಡ, ಸರ್ಗ ೬೧, ಶ್ಲೋಕ ೨೪

ಸ್ತ್ರೀಯರಿಗೆ ಪತಿಯೋ ಮೊದಲನೇ ಆಶ್ರಯವು. ಮಗನು ಎರಡನೇ ಆಶ್ರಯವು. ಮೂರನೇ ಆಶ್ರಯವು ಜ್ಞಾತಿಗಳು. ನಾಲ್ಕನೇ ಆಶ್ರಯವು ಇಲ್ಲವೇ ಇಲ್ಲ ಎಂಬುದಾಗಿ ಕೌಸಲ್ಯೆಯು ದಶರಥನಿಗೆ ತಿಳಿಸಿದಳು.

ನಗರಸ್ಥೋ ವನಸ್ಥೋವಾ ಪಾಪೋವಾ
ಯದಿವಾ ಶುಭಃ ।
ಯಾಸಾಂ ಸ್ತ್ರೀಣಾಂ ಪ್ರಿಯೋಭರ್ತಾ
ತಾಸಾಂ ಲೋಕಾಃ ಮಹೋದಯಾಃ ॥

ಅಯೋಧ್ಯಾಕಾಂಡ, ಸರ್ಗ ೧೧೭, ಶ್ಲೋಕ ೨೨

ಪತಿಯು ಪಟ್ಟಣದಲ್ಲಿದ್ದರೂ ವನದಲ್ಲಿದ್ದರೂ ಪಾಪಿಷ್ಠನಾಗಿದ್ದರೂ ಪುಣ್ಯಾತ್ಮನಾಗಿದ್ದರೂ ಯಾವ ಹೆಂಗಸು ಅಂಥಾವನನ್ನು ಪ್ರೀತಿಸುವಳೋ ಆಕೆಗೆ ಶ್ರೇಷ್ಠವಾದ ಲೋಕಗಳು ಪ್ರಾಪ್ತವಾಗುವುವು.

ದುಶ್ಶೀಲಃ ಕಾಮವೃತ್ತೋವಾ ಧನೈರ್ವಾ ಪರಿವರ್ಜಿತಃ ।
ಸ್ತ್ರೀಣಾಮಾರ್ಯ ಸ್ವಭಾವಾನಾಂ ಪರಮಂ
ದೈವತಂ ಪತಿಃ ॥

ಅಯೋಧ್ಯಾಕಾಂಡ, ಸರ್ಗ ೧೧೭, ಶ್ಲೋಕ ೨೩

ಪತಿಯಾದವನು ದುಸ್ಸ್ವಭಾವವುಳ್ಳವನಾಗಿದ್ದರೂ ಸ್ವೇಚ್ಛಾಚಾರಿಯಾಗಿದ್ದರೂ ಬಡವನಾಗಿದ್ದರೂ ಪೂಜ್ಯ ಸ್ವಭಾವವುಳ್ಳ ಸ್ತ್ರೀಯರಿಗೆ ಆತನೇ ಶ್ರೇಷ್ಠವಾದ ದೇವರು.

ನಾತೋ ವಿಶಿಷ್ಟಂ ಪಶ್ಯಾಮಿ ಬಾಂಧವಂ
ವಿಮೃಶಂತ್ಯಹಂ ।
ಸರ್ವತ್ರಯೋಗ್ಯಂ ವೈದೇಹಿ ತಪಃಕೃತ
ಮಿವಾವ್ಯಯಂ ॥

ಅಯೋಧ್ಯಾಕಾಂಡ, ಸರ್ಗ ೧೧೭, ಶ್ಲೋಕ ೨೪

ಎಲೌ ವೈದೇಹಿ, ನಾನು ಎಷ್ಟೆಷ್ಟು ವಿಧದಲ್ಲಿ ಯೋಚಿಸಿದರೂ ಪತಿಯನ್ನು ಬಿಟ್ಟರೆ ಸ್ತ್ರೀಯರಿಗೆ ಮಹಾ ತಪಸ್ಸಿನಂತೆ ಅಕ್ಷಯವಾಗಿ ಸರ್ವಾವಸ್ಥೆಯಲ್ಲಿಯೂ ರಕ್ಷಿಸತಕ್ಕ ಬೇರೆ ಬಂಧು ಒಬ್ಬನಾದರೂ ತೋರಲಿಲ್ಲ.

ತದ್ವಿಧಾಸ್ತು ಗುಣೈರ್ಯುಕ್ತಾ ದೃಷ್ಟಲೋಕ ಪರಾವರಾಃ ।
ಸ್ತ್ರಿಯ ಸ್ವರ್ಗೇ ಚರಿಷ್ಯಂತಿ ಯಥಾ ಧರ್ಮ
ಕೃತಸ್ತಥಾ ॥

ಅಯೋಧ್ಯಾಕಾಂಡ, ಸರ್ಗ ೧೧೭, ಶ್ಲೋಕ ೨೭

ನಿನ್ನಂಥಾ ಗುಣಯುಕ್ತರಾದ ಉತ್ತಮ ಸ್ತ್ರೀಯರೇ ಲೋಕದಲ್ಲಿ ಯುಕ್ತಾಯುಕ್ತಗಳನ್ನು ತಿಳಿದವರಾಗಿ ಧರ್ಮವನ್ನು ಅನುಸರಿಸಿದವರಂತೆ ಸ್ವರ್ಗದಲ್ಲಿ ವಿಹರಿಸುವರು.

ತದೇವಮೇನಂ ತ್ವಮನುವ್ರತಾ ಸತೀ ।
ಪತಿವ್ರತಾನಾಂ ಸಮಯಾನುವರ್ತಿನೀ ॥
ಭವಸ್ವಭರ್ತುಃ ಸಹಧರ್ಮಚಾರಿಣೀ ।
ಯಶಶ್ಚ ಧರ್ಮಂಚ ತತಸ್ಸಮಾಪ್ಸ್ಯಸಿ ॥

ಅಯೋಧ್ಯಾಕಾಂಡ, ಸರ್ಗ ೧೧೭, ಶ್ಲೋಕ ೨೮

ಆದುದರಿಂದ ನೀನು ಈಗಿನಂತೆಯೇ ಪತಿಯನ್ನನುವರ್ತಿಸುತ್ತಾ ಪತಿವ್ರತಾ ನಿಯಮವನ್ನನುಸರಿಸಿ ಆತನಿಗೆ ಸಹಧರ್ಮಚಾರಿಣಿಯಾಗಿರು. ಇದರಿಂದ ನೀನು ಅಪಾರವಾದ ಕೀರ್ತಿಗೂ ಧರ್ಮಕ್ಕೂ ಪಾತ್ರಳಾಗುವೆ ಎಂಬುದಾಗಿ ಅನಸೂಯೆಯು ಸೀತೆಗೆ ಹೇಳಿದಳು.

ವಿದಿತಂತು ಮಮಾಪ್ಯೇತದ್ಯಥಾ ನಾರ್ಯಾ ಪತಿರ್ಗುರುಃ ।
ಯದ್ಯಪ್ಯೇಷ ಭವೇದ್ಭರ್ತಾ ಮಮಾರ್ಯೆ
ವೃತವರ್ಜಿತಃ ॥
ಅದ್ವೈಧ ಮುಪಚರ್ತವ್ಯ ಸ್ತಥಾಪ್ಯೇಷ
ಮಯಾ ಭವೇತ್

ಅಯೋಧ್ಯಾಕಾಂಡ, ಸರ್ಗ ೧೧೮, ಶ್ಲೋಕ ೨೩೪

ಸ್ತ್ರೀಯರಿಗೆ ಪತಿಯೇ ಗುರು ಎಂಬುವದನ್ನು ನಾನೂ ತಿಳಿದುಕೊಂಡಿರುತ್ತೇನೆ. ಒಂದು ವೇಳೆ ಪತಿಯಾದವನು ದುಶ್ಶೀಲನಾಗಿದ್ದರೂ ಪತ್ನಿಯು ಭೇದವನ್ನೆಣಿಸದೆ ಉಪಚರಿಸಬೇಕು.

ಕಿಂಪುನರ್ಯೋ ಗುಣ ಶ್ಲಾಘ್ಯಃ ಸಾನುಕ್ರೋಶೋ
ಜಿತೇಂದ್ರಿಯಃ ।
ಸ್ಥಿರಾನುರಾಗೋ ಧರ್ಮಾತ್ಮಾ ಮಾತೃವತ್ಪಿತೃ
ವತ್ಪ್ರಿಯಃ ॥

ಅಯೋಧ್ಯಾಕಾಂಡ, ಸರ್ಗ ೧೧೮, ಶ್ಲೋಕ ೪

ಹೀಗಿರುವಾಗ ಸದ್ಗುಣ ಸಂಪನ್ನನಾಗಿ ದಯಾಳುವಾಗಿ ಜಿತೇಂದ್ರಿಯನಾಗಿ ನನ್ನಲ್ಲಿ ಪ್ರೇಮವುಳ್ಳವನಾಗಿ ಧರ್ಮಾತ್ಮನೆನಿಸಿಕೊಂಡಿರುವವನಾಗಿ ನನಗೆ ತಾಯಿ ತಂದೆಗಳಂತೆ ಶ್ರೇಯಃಕಾಂಕ್ಷಿಯಾಗಿರುವ ನನ್ನ ಪ್ರಿಯತಮನನ್ನು ಹೇಗೆ ಸೇವಿಸಬೇಕೆಂಬುದನ್ನು ನನಗೆ ಹೆಚ್ಚಾಗಿ ಹೇಳಬೇಕೇ ಎಂಬುದಾಗಿ ಸೀತೆಯು ಅನಸೂಯೆಗೆ ಉತ್ತರ ಕೊಟ್ಟಳು.

ಶಾಸ್ತ್ರಪ್ರಯೋಗಾದ್ವಿವಿಧಾಶ್ಚ ವೇದಾ ದಾತ್ಮಾಹ್ಯನನ್ಯಃ ಪುರುಷಸ್ಯ ದಾರಾಃ ||
ದಾನಪ್ರದಾನಾನ್ನಹಿ ದಾನಮನ್ಯತ್ಪ್ರದೃಶ್ಯತೇ ಜ್ಞಾನವತಾಂಹಿಲೋಕೇ ||

ಕಿಷ್ಕಿಂಧಾಕಾಂಡ, ಸರ್ಗ ೨೪, ಶ್ಲೋಕ ೩೮

ಅನೇಕ ಶಾಸ್ತ್ರ ಪ್ರಮಾಣಗಳಿಂದಲೂ ವೇದ ವಿಧಿಗಳಿಂದಲೂ ಪುರುಷನಿಗೆ ಪತ್ನಿಯು ಆತ್ಮವೆಂದು ಸ್ಪಷ್ಟವಾಗಿ ತಿಳಿದುಬರುವುದು. ನೀನು ನನ್ನನ್ನು ನನ್ನ ಪತಿಯೊಡನೆ ಸೇರಿಸಿಬಿಡುವುದರಿಂದ ಪುಣ್ಯವೂ ಉಂಟು. ಲೋಕದಲ್ಲಿ ಜ್ಞಾನಿಗಳಿಗೆ ಸ್ತ್ರೀದಾನಕ್ಕಿಂತಲೂ ಉತ್ತಮವಾದ ಬೇರೆ ದಾನವಿಲ್ಲ ಎಂಬುದಾಗಿ ತಾರೆಯು ಶ್ರೀರಾಮನಿಗೆ ಹೇಳಿದಳು.

ಭರ್ತಾನಾಮ ಪರಂನಾರ್ಯಾ ಭೂಷಣಂ ಭೂಷಣಾದಪಿ|
ಏಷಾತು ರಹಿತಾ ತೇನ ಭೂಷಣಾರ್ಹಾನ ಶೋಭತೇ ||

ಸುಂದರಕಾಂಡ, ಸರ್ಗ ೧೬, ಶ್ಲೋಕ ೨೬

ಹೆಂಗಸಿಗೆ ಗಂಡ ಎಂಬುವನು ಒಡವೆಗಳಿಗಿಂತ ಅಧಿಕವಾದ ಅಲಂಕಾರವಾಗಿರುತ್ತಾನೆ. ಈಗ ಈ ಸೀತೆಯಾದರೋ ಪತಿಯಾದ ರಾಮನು ಹತ್ತಿರ ಇಲ್ಲದೆ ಒಬ್ಬಳೇ ಇರುವುದರಿಂದ ಒಡವೆಗಳನ್ನು ಇಟ್ಟುಕೊಳ್ಳಲು ಅರ್ಹಳಾಗಿದ್ದರೂ ಶೋಭಾಯಮಾನವಾಗಿರುವುದಿಲ್ಲ ಎಂಬುದಾಗಿ ಆಂಜನೇಯನು ಯೋಚಿಸಿದನು.

ತಪಸಾ ಸತ್ಯವಾಕ್ಯೇನ ಅನನ್ಯತ್ವಾಚ್ಚ ಭರ್ತರಿ ।
ಅಪಿನಾ ನಿರ್ದಹೇದಗ್ನಿಂ ನತಾಮಗ್ನಿಃ ಪ್ರಧಕ್ಷ್ಯತಿ ||

ಸುಂದರಕಾಂಡ, ಸರ್ಗ ೫೫, ಶ್ಲೋಕ ೨೮

ಸೀತಾದೇವಿಯು ತನ್ನ ತಪಸ್ಸಿನಿಂದಲೂ ಸತ್ಯದಿಂದಲೂ ಪತಿಯಲ್ಲಿ ಅನನ್ಯ ಭಾವದಿಂದಲೂ ಅಗ್ನಿಯನ್ನು ಸಹಾ ಸುಟ್ಟುಬಿಡುವಳು. ಆದರೆ ಆಕೆಯನ್ನು ಅಗ್ನಿದೇವರು ಸುಡಲಾರನು ಎಂಬುದಾಗಿ ಹನುಮಂತನು ಯೋಚಿಸಿದನು.

ನಗೃಹಾಣಿ ನವಸ್ತ್ರಾಣಿ ನಪ್ರಾಕಾರಾಸ್ತಿರಸ್ಕ್ರಿಯೋಃ ।
ನೇದೃಶಾ ರಾಜಸತ್ಕಾರಾ ವೃತ್ತ ಮಾವರಣಂ
ಸ್ತ್ರಿಯೋಃ ॥

ಯುದ್ಧಕಾಂಡ, ಸರ್ಗ ೧೧೭, ಶ್ಲೋಕ ೨೬

ಹೆಂಗಸಿಗೆ ಆಕೆಯ ಸದಾಚಾರವೇ ಆವರಣವೇ ಹೊರತು ಮನೆ ವಸ್ತ್ರಗಳು ಪ್ರಾಕಾರ ತೆರೆಗಳು ಇನ್ನು ರಾಜ ಮರ್ಯಾದೆಗಳು ಎಷ್ಟಾದರೂ ಆವರಣಗಳಾಗಲಾರವು ಎಂಬುದಾಗಿ ಶ್ರೀರಾಮನು ವಿಭೀಷಣನಿಗೆ ಹೇಳಿದನು.

ಪತಿರ್ಹಿ ದೇವತಾ ನಾರ್ಯಾಃ ಪತಿರ್ಬಂಧುಃ
ಪತಿರ್ಗುರುಃ ।
ಪ್ರಾಣೈರಪಿ ಪ್ರಿಯಂತಸ್ಮಾದ್ಭರ್ತುಃ ಕಾರ್ಯಂ
ವಿಶೇಷತಃ ॥

ಉತ್ತರಕಾಂಡ, ಸರ್ಗ ೪೮, ಶ್ಲೋಕ ೧೭

ಹೆಂಗಸಿಗೆ ಪತಿಯೇ ದೇವರು. ಪತಿಯೇ ಗುರುವು. ತನ್ನ ಪ್ರಾಣಕ್ಕಿಂತಲೂ ಪ್ರಿಯವಾದ ವಸ್ತುವು. ಆದ್ದರಿಂದ ಪತಿಯು ಹೇಳಿದ ಕೆಲಸವನ್ನು ಕಡ್ಡಾಯವಾಗಿ ನಡೆಸಬೇಕೆಂಬುದಾಗಿ ಸೀತೆಯು ಲಕ್ಷ್ಮಣನಿಗೆ ಹೇಳಿದಳು.

ರಾಕ್ಷಸರ ಸ್ವಭಾವ

ರಕ್ಷಾಂಸಿ ಸಂಧ್ಯಾಕಾಲೇಷು ದುರ್ಧರ್ಷಾಣಿ ಭವಂತಿವೈ ॥

ಬಾಲಕಾಂಡ, ಸರ್ಗ ೨೬, ಶ್ಲೋಕ ೨೨

ರಾಕ್ಷಸರು ಸಾಯಂಕಾಲವಾಗುತ್ತಾ ಬಂದಾಗಲೆಲ್ಲ ಜಯಿಸಲು ಅಸಾಧ್ಯವಾಗುತ್ತಾರೆ. ಅವರಮೇಲೆ ಕೈಮಾಡುವುದಕ್ಕೆ ಆಗುವುದಿಲ್ಲವೆಂಬುದಾಗಿ ವಿಶ್ವಾಮಿತ್ರನು ಶ್ರೀರಾಮನಿಗೆ ತಿಳಿಸಿದನು.

ದೈವಪೌರುಷ

ದೈವ ಮೇವ ಪರಂಮನ್ಯೆ ಪೌರುಷಂತು ನಿರರ್ಥಕಂ ।
ದೈವೇನಾಕ್ರಮ್ಯತೇ ಸರ್ವಂ ದೈವಂಹಿ ಪರಮಾಗತಿಃ

ಬಾಲಕಾಂಡ, ಸರ್ಗ ೫೮, ಶ್ಲೋಕ ೨೨

ಮನುಷ್ಯ ಪ್ರಯತ್ನಕ್ಕಿಂತಲೂ ದೈವಬಲವೇ ಹೆಚ್ಚು ಎಂದು ನನಗೆ ತೋರುತ್ತದೆ. ಯಾಕೆಂದರೆ ನನ್ನ ಪ್ರಯತ್ನವೆಲ್ಲವೂ ನಿಷ್ಫಲವಾಯಿತು. ಎಲ್ಲವೂ ದೈವದಿಂದಲೇ ಆಗುತ್ತದೆ. ದೈವವೇ ನನಗೆ ಶ್ರೇಷ್ಠವಾದ ಆಶ್ರಯವು ಎಂಬುದಾಗಿ ತ್ರಿಶಂಕುವು ವಿಶ್ವಾಮಿತ್ರನಿಗೆ ಹೇಳಿದನು.

ಕೃತಾಂತಸ್ತ್ವೇಹ ಸೌಮಿತ್ರೆ ದ್ರಷ್ಟವ್ಯೋ ಮತ್ಪ್ರವಾಸನೆ ।
ರಾಜ್ಯಸ್ಯ ಚ ವಿತೀರ್ಣಸ್ಯ ಪುನರೇವ ನಿವರ್ತನೆ ॥

ಆಯೋಧ್ಯಾಕಾಂಡ, ಸರ್ಗ ೨೨, ಶ್ಲೋಕ ೨೧

ಎಲೈ ಲಕ್ಷ್ಮಣನೆ, ನನಗೆ ಕೊಟ್ಟ ರಾಜ್ಯ ಪುನಃ ಕೊಡದ ಹಾಗೆ ಮಾಡುವುದಕ್ಕೂ ನನ್ನನ್ನು ಕಾಡಿಗೆ ಕಳುಹಿಸು ವುದಕ್ಕೂ ದೈವವೇ ಕಾರಣವು.

ಕಶ್ಚಿದ್ದೈವೇನಸೌಮಿತ್ರೇ ಯೋದ್ಧುಮುತ್ಸಹತೇ ಪುಮಾನ್ ।
ಯಸ್ಯ ನಗ್ರಹಣಂ ಕಿಂಚಿತ್ಕರ್ಮಣೋ ನ್ಯತ್ರ ದೃಶ್ಯತೇ ॥

ಅಯೋಧ್ಯಾಕಾಂಡ, ಸರ್ಗ ೩೭, ಶ್ಲೋಕ ೨೧

ಎಲೈ ಲಕ್ಷ್ಮಣನೇ ಫಲಪ್ರಾಪ್ತಿಗೆ ಮೊದಲು ಅದೃಷ್ಟ ವನ್ನು ನಿಶ್ಚಯಿಸುವುದಕ್ಕೆ ಆಗುವುದಿಲ್ಲ. ಇದರ ಮೇಲೆ ಯಾವ ಪುರುಷ ಪ್ರಯತ್ನ ತಾನೆ ಮಾಡಬಹುದು?

ಸುಖದುಃಖೆ ಭಯಕ್ರೋಧೌ ಲಾಭಾಲಾಭೌ ಭವಾಭವೌ ।
ಯಚ್ಚ ಕಿಂಚಿತ್ತಥಾಭೂತಂ ನನುದೈವಸ್ಯ ಕರ್ಮತತ್ ॥

ಅಯೋಧ್ಯಾಕಾಂಡ, ಸರ್ಗ ೨೨, ಶ್ಲೋಕ ೩೨

ಸುಖದುಃಖಗಳಾಗಲೀ ಲಾಭ ನಷ್ಟಗಳಾಗಲೀ ನಿಗ್ರಹಾ ನುಗ್ರಹಗಳಾಗಲೀ ಜನನ ಮರಣಗಳಾಗಲೀ ಲೋಕದಲ್ಲಿ ಕಾರಣವನ್ನು ತಿಳಿಯಬಾರದು. ಯಾವ ಕಾರ್ಯಗಳೇ ಆಗಲಿ ಅವೆಲ್ಲವೂ ದೈವಾಧೀನವೆಂದೇ ತಿಳಿಯಬೇಕು.

ಋಷಯೋಪ್ಯುಗ್ರ ತಪಸೋ ದೈವೇನಾಭಿ ಪ್ರಪೀಡಿತಾಃ ।
ಉತ್ಸೃಜ್ಯ ನಿಯಮಾನ್ ತೀವ್ರಾನ್ ಭ್ರಂಶ್ಯಂತೇ ಕಾಮ ಮನ್ಯುಭಿಃ ॥

ಅಯೋಧ್ಯಾಕಾಂಡ, ಸರ್ಗ ೩೨, ಶ್ಲೋಕ ೨೩

ಉಗ್ರ ತಪಸ್ಸನ್ನು ಮಾಡಿ ದೇವತೆಗಳನ್ನು ಕೂಡ ಲಕ್ಷ್ಯಕ್ಕೆ ತಾರದ ವಿಶ್ವಾಮಿತ್ರಾದಿ ಮಹರ್ಷಿಗಳೂ ಕೂಡ ದೈವವಶರಾಗಿ ತಾವು ನಡಿಸುತ್ತಿದ್ದ ವ್ರತೋಪವಾಸಾದಿ ನಿಯಮಗಳನ್ನು ಬಿಟ್ಟು ಕಾಮಕ್ರೋಧಾದಿಗಳಿಗೊಳಗಾಗಿ ದುರ್ದೆಶೆಯನ್ನು ಹೊಂದಿರುವರು; ಎಂಬುದಾಗಿ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು.

ಕೃತಾಂತಸ್ಯ ಗತಿಃ ಪುತ್ರ ದುರ್ವಿಭಾವ್ಯಾಸ್ಸದಾ ಭುವಿ ।

ಅಯೋಧ್ಯಾಕಾಂಡ, ಸರ್ಗ ೨೪, ಶ್ಲೋಕ ೩೫

ಕೌಸಲ್ಯೆಯು ಶ್ರೀರಾಮನನ್ನು ಕುರಿತು ಎಲೈ ಮಗನೆ ದೈವಸಂಕಲ್ಪವನ್ನು ಯಾರೂ ಮೀರಲಾರರು ಎಂದಳು.

ನನೂನಂ ದೈವತಂ ಕಿಂಚಿತ್ಕಾಲೇನ ಬಲವತ್ತರಂ ।

ಅಯೋಧ್ಯಾಕಾಂಡ, ಸರ್ಗ ೮೮, ಶ್ಲೋಕ ೧೧

ಭರತನು ತನ್ನ ಮಾತೆಯರಿಗೆ ದೈವಗತಿಗಿಂತಲೂ ಕಾಲಗತಿಯೇ ಬಲವತ್ತರವೆಂದು ನನಗೆ ತೋರಿರುವುದು; ಎಂದನು.

ನಾತ್ಮನಃ ಕಾಮಕಾರೋಽಸ್ತಿ
ಪುರುಷೋಽಯಮನೀಶ್ವರಃ ।
ಇತಶ್ಚೇತರತಶ್ಚೈನಂ ಕೃತಾಂತ ಪರಿಕರ್ಷತಿ ॥

ಅಯೋಧ್ಯಾಕಾಂಡ, ಸರ್ಗ, ೧೦೫ ಶ್ಲೋಕ ೧೫

ಶ್ರೀರಾಮನು ಭರತನನ್ನು ಕುರಿತು ಪುರುಷನು ಯಾವ ಕೆಲಸಮಾಡುವುದಕ್ಕೂ ಸ್ವತಂತ್ರನಲ್ಲ. ದೇವರು ಒಬ್ಬನೇ

ಆತನ ಎಲ್ಲಾ ಕೆಲಸಗಳನ್ನು ಮಾಡುವುದರಲ್ಲಿಯೂ ಸ್ವತಂತ್ರನು; ಎಂದನು.

ಸರ್ವೇ ಕ್ಷಯಾಂತಾಃ ನಿಚಯಾಃ ಪತನಾಂತಾಃ
ಸಮುಚ್ಛ್ರಯಾಃ।
ಸಂಯೋಗಾಃ ವಿಪ್ರಯೋಗಾಂತಾಃ
ಮರಣಾಂತಂಚ ಜೀವಿತಂ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೧೬

ಕೂಡಿಹಾಕಿದ ದ್ರವ್ಯವೆಲ್ಲಾ ಕೊನೆಯಲ್ಲಿ ನಾಶವಾಗತಕ್ಕದ್ದು. ಅಭಿವೃದ್ಧಿ ಸ್ಥಿತಿಯಲ್ಲಿರುವುದೆಲ್ಲಾ ಕೊನೆಯಲ್ಲಿ ಕೆಳಕ್ಕೆ ಬೀಳತಕ್ಕದು, ಕೂಡಿಕೊಳ್ಳುವರೆಲ್ಲಾ ಕೊನೆಗೆ ಒಬ್ಬೊಬ್ಬರಾಗಿ ಅಗಲತಕ್ಕವರು. ಹುಟ್ಟಿದವನೇಲೆ ಕೊನೆಯಲ್ಲಿ ಸಾಯತಕ್ಕವರು.

ಯಥಾ ಫಲಾನಾಂ ಪಕ್ವಾನಾಂ
ನಾನ್ಯತ್ರ ಪತನಾದ್ಭಯಂ।
ಏವಂ ನರಸ್ಯ ಜಾತಸ್ಯ ನಾನ್ಯತ್ರ ಮರಣಾದ್ಭಯಂ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೧೭

ಚೆನ್ನಾಗಿ ಮಾಗಿದ ಹಣ್ಣುಗಳು ಕೊನೆಗೆ ಕೆಳಗೆ ಬೀಳತಕ್ಕವುಗಳು ಹೇಗೋ ಅದರಂತೆಯೇ ಪ್ರಪಂಚದಲ್ಲಿ ಹುಟ್ಟಿದವನಿಗೆ ಸಾಯುವುದಕ್ಕಿಂತಲೂ ಬೇರೆ ಭಯವಿಲ್ಲ.

ಯಥಾಗಾರಂ ದೃಢ ಸ್ಥೂಣಂ ಜೀರ್ಣಂಭೂತ್ವಾ
ವಸೀದತಿ।
ತಥೈವ ಸೀದಂತಿ ನರಾ ಜರಾಮೃತ್ಯುವಶಂಗತಾಃ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೧೮

ಬಲವಾದ ಕಂಭಗಳುಳ್ಳ ಮನೆಯೂ ಕಾಲಕ್ರಮದಲ್ಲಿ ಶಿಥಿಲವಾಗುವುದು ಹ್ಯಾಗೋ ಹಾಗೆಯೇ ಮನುಷ್ಯರೂ ಜರಾಮೃತ್ಯುಗಳಿಗೆ ಒಳಗಾಗಿ ನಾಶವನ್ನು ಹೊಂದುವರು.

ಅತ್ಯೇತಿ ರಜನೀಯಾತು ಸಾನಪ್ರತಿ ನಿವರ್ತತೇ ।
ಯಾತ್ಯೇವ ಯಮುನಾ ಪೂರ್ಣಾ ಸಮುದ್ರ
ಮುದಕಾ ಕುಲಂ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೧೯

ಕಳೆದುಹೋದ ರಾತ್ರಿಯು ಹಿಂತಿರುಗುವುದಿಲ್ಲ. ಯಮುನಾ ಪ್ರವಾಹವೂ ಕೂಡ ಜಲಸಮೃದ್ಧವಾದ ಸಮುದ್ರಕ್ಕೆ ಹೋಗಿ ಸೇರುವುದೇ ಹೊರತು ಅಲ್ಲಿಂದ ಹಿಂತಿರುಗಿ ಬರುವುದಿಲ್ಲ.

ಅಹೋರಾತ್ರಾಣಿ ಗಚ್ಛಂತಿ ಸರ್ವೇಷಾಂ
ಪ್ರಾಣಿನಾಮಿಹ ।
ಆಯೂಂಷಿ ಕ್ಷಪಯಂತ್ಯಾಶು ಗ್ರೀಷ್ಮೇ
ಜಲಮಿವಾಂಶವಃ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೨೦

ಬೇಸಗೆಯಲ್ಲಿ ಸೂರ್ಯನ ಕಿರಣವು ಎಡೆಬಿಡದೆ ನೆಲದ ಮೇಲಿನ ನೀರನ್ನು ಹೀರುತ್ತಿರುವಂತೆ ಕಳೆದು ಹೋಗುತ್ತಿರುವ ಹಗಲು ರಾತ್ರಿಗಳೆರಡೂ ಅವಿಚ್ಛಿನ್ನವಾಗಿ ಮನುಷ್ಯನ ಆಯುಃ ಪ್ರಮಾಣವನ್ನು ಹೀರುತ್ತಿರುವುವು.

ಆತ್ಮಾನ ಮನುಶೋಚತ್ವಂ ಕಿಮನ್ಯ ಮನುಶೋಚಸಿ ।
ಆಯುಸ್ತೇ ಹೀಯತೇ ಯಸ್ಯ ಸ್ಥಿತಸ್ಯಚ ಗತಸ್ಯಚ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೩೧

ನೀನು ನಡೆಯುವಾಗಲೂ ನಿಂತಿರುವಾಗಲೂ ಕ್ಷಣಕ್ಷಣಕ್ಕೂ ನಿನ್ನ ಆಯುಸ್ಸು ಕ್ಷೀಣಿಸುತ್ತಿರುವಾಗ ಒಬ್ಬೊಬ್ಬರೂ ತಮ್ಮ ತಮ್ಮ ಅವಸ್ಥೆಗಾಗಿಯೇ ದುಃಖಿಸಬೇಕಾಗಿರುವುದು. ಇತರರಿಗಾಗಿ ಏಕೆ ನೀನು ಚಿಂತಿಸುವುದು.

ಸಹೈವ ಮೃತ್ಯುರ್ವ್ರಜತಿ ಸಹಮೃತ್ಯುರ್ನಿಷೀದತಿ ।
ಗತ್ವಾ ಸುದೀರ್ಘಮಧ್ವಾನಂ ಸಹಮೃತ್ಯುರ್ನಿವರ್ತತೆ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೨೨

ಮನುಷ್ಯನು ಎಲ್ಲಿ ಹೋದರೂ ಎಲ್ಲಿ ಕೂತುಕೊಂಡರೂ ಮೃತ್ಯುವು ಅವನನ್ನು ಹಿಂಬಾಲಿಸಿರುವುದು. ಅವನು ಎಷ್ಟು ದೂರ ಪ್ರಯಾಣಮಾಡಿದರೂ ಅವನ ಹಿಂದೆಯೇ ಹೋಗಿ ಅವನೊಡನೆ ವಾಪಸು ಬರುವುದು.

ಗಾತ್ರೇಷು ವಲಯಃ ಪ್ರಾಪ್ತಾಃ ಶ್ವೇತಾಶ್ಚೈವ ಶಿರೋರುಹಾಃ ।
ಜರಯಾ ಪುರುಷೋ ಜೀರ್ಣಃ ಕಿಂಹಿ ಕೃತ್ವಾ ಪ್ರಭಾವಯೇತ್ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೩೩

ಮನುಷ್ಯನಿಗೆ ದೇಹವೆಲ್ಲವೂ ಸುಕ್ಕುಬಿದ್ದು ತಲೆಯ ಕೂದಲೆಲ್ಲಾ ನರೆತು ಮುಪ್ಪಿನಿಂದ ಮೈಯೆಲ್ಲವೂ ಜೀರ್ಣವಾದಮೇಲೆ ಏನುತಾನೇ ಮಾಡಿ ತಪ್ಪಿಸಿಕೊಳ್ಳುವನು? ಆದುದರಿಂದ ಶಕ್ತಿ ಇರುವಾಗಲೇ ಆತ್ಮಜ್ಞಾನಕ್ಕೆ ಪ್ರಯತ್ನಿಸಬೇಕು.

ನಂದಂತ್ಯುದಿತ ಆದಿತ್ಯೇ ನಂದಂತ್ಯಸ್ತಮಿತೇ ರವೌ ।
ಆತ್ಮನೋನಾವ ಬುಧ್ಯಂತೆ ಮನುಷ್ಯಾ
ಜೀವಿತಕ್ಷಯಂ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೨೪

ಲೋಕದಲ್ಲಿ ಮನುಷ್ಯನು ಹಣವನ್ನು ಸಂಪಾದಿಸ ಬೇಕೆಂಬ ಆಶೋತ್ತರದಿಂದ ಎಷ್ಟುಹೊತ್ತಿಗೆ ಸೂರ್ಯೋದಯ ವಾಗುವದೆಂದು ನಿರೀಕ್ಷಿಸುತ್ತಿದ್ದು ಬೆಳಗಾದುದನ್ನು ನೋಡಿ ಹಿಗ್ಗುವನು. ಹಾಗೆಯೇ ಕಾಮೋಪಭೋಗಗಳನ್ನು ಅನು ಭವಿಸುವ ಅತ್ಯಾತುರದಿಂದ ರಾತ್ರಿಯಾಗುವುದನ್ನೇ ಕಾದು ಕೊಂಡಿದ್ದು ಸೂರ್ಯನು ಅಸ್ತಮಿಸಿದುದನ್ನು ನೋಡಿ ಆಗಲೂ ಸಂತೋಷದಿಂದ ಉಬ್ಬುವನು. ಈ ಉದಯಾಸ್ತಮಯ ಕಾಲಗಳೇ ತಮ್ಮ ತಮ್ಮ ಅಯುಸ್ಸನ್ನು ಕ್ಷೀಣಿಸುತ್ತಿರು ವುವೆಂಬುದನ್ನು ಲೋಕದಲ್ಲಿ ಯಾರೂ ಎಣಿಸಲಾರರು.

ಹೃಷ್ಯಂತ್ಯೃತುಮುಖಂ ದೃಷ್ಟ್ವಾ ನವಂ
ನವ ಮಿಹಾಗತಂ ॥
ಋತೂನಾಂ ಪರಿವರ್ತೇನ ಪ್ರಾಣಿನಾಂ
ಪ್ರಾಣಸಂಕ್ಷಯಃ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೨೫

ಹೀಗೆಯೇ ಒಂದೊಂದು ಋತುಗಳು ತಲೆದೋರು ವಾಗಲೂ ಮನುಷ್ಯನು ಆಯಾ ಭೋಗಕಾಲವು ಬಂತೆಂದು ಸಂತೋಷದಿಂದ ಉಬ್ಬುವನು. ಆ ಋತುಗಳು ಸುತ್ತಿ ಸುತ್ತಿ ಬಂದಷ್ಟೂ ತಮ್ಮ ಆಯುಃ ಪ್ರಮಾಣವು ತಗ್ಗುತ್ತಾ ಬರುವು ದೆಂಬ ಪರ್ಯಾಲೋಚನೆಯೇ ಇರುವುದಿಲ್ಲ.

ಯಥಾ ಕಾಷ್ಠಂಚ ಕಾಷ್ಠಂಚ ಸಮೇಯಾತಾಂ
ಮಹಾರ್ಣವೇ ।
ಸಮೇತ್ಯಚ ವ್ಯಪೇಯಾತಾಂ ಕಾಲಮಾಸಾದ್ಯ ಕಂಚನ

ಅಯೋಧ್ಯಾಖಾಂಡ, ಸರ್ಗ ೧೦೫, ಶ್ಲೋಕ ೨೬

ಸಮುದ್ರದದಲ್ಲಿ ಎರಡು ಮರದ ತುಂಡುಗಳು ಒಂದಾಗಿ ಸೇರಿಕೊಂಡು ಕೆಲವು ಕಾಲ ಇದ್ದು ನಂತರ ಅವೆರಡೂ ಬೇರೆ ಬೇರೆ ಆಗುವಂತೆ—

ಏವಂ ಭಾರ್ಯ್ಯಾಶ್ಚ ಪುತ್ರಾಶ್ಚ ಜ್ಞಾತಯಶ್ಚ ಧನಾನಿ ಚ ।
ಸಮೇತ್ಯ ವ್ಯವಧಾವಂತಿ ಧ್ರುವೋಹ್ಯೇಷ್ಯಾಂ
ವಿನಾಭವಃ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೨೭

ಹೆಂಡತಿ ಮಕ್ಕಳು ಬಂಧುಗಳು ಮತ್ತು ಧನ ಸಹಾ ಕೆಲವುಕಾಲ ಜೊತೆಯಲ್ಲಿದ್ದು ಕಾಲ ಬಂದಾಗ ಬಿಡಲ್ಪಡುತ್ತಾರೆ. ಈ ರೀತಿ ಆಗುವುದು ಖಂಡಿತ.

ನಾತ್ರ ಕಶ್ಚಿತ್ಯಥಾ ಭಾವಂ ಪ್ರಾಣೀ ಸಮಭಿವರ್ತತೆ ।
ತೇನ ತಸ್ಮಿನ್ನ ಸಾಮರ್ಥ್ಯಂ
ಪ್ರೇತಸ್ಯಾ ಸ್ತ್ಯನುಶೋಚತಃ ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೨೮

ಯಾರಿಗೂ ತನ್ನ ಇಷ್ಟದಂತೆ ನಡೆಯಲು ಸಾಧ್ಯವಿಲ್ಲ. ಆದುದರಿಂದ ಸತ್ತವರಿಗಾಗಿ ನಾವು ಎಷ್ಟು ದುಃಖಿಸಿದರೂ ಅವರನ್ನು ಬದುಕಿಸುವುದಕ್ಕೆ ಆಗುವದಿಲ್ಲ.

ಯಥಾಹಿ ಸಾರ್ಥಂ ಗಚ್ಛಂತಂ
ಬ್ರೂಯಾತ್ಕಶ್ಚಿತ್ಪಥಿ ಸ್ಥಿತಃ ।
ಅಹಮಪ್ಯಾಗಮಿಷ್ಯಾಮಿ ಪೃಷ್ಠತೋ ಭವತಾಮಿತಿ ॥
ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೨೯

ಒಬ್ಬ ಮನುಷ್ಯನು ದಾರಿಯಲ್ಲಿ ಬರುತ್ತಿರುವ ಕೆಲವು ಮಾರ್ಗಸ್ಥರ ಗುಂಪನ್ನು ನೋಡಿ ನಾನು ನಿಮ್ಮ ಸಂಗಡಲೇ ಬರುವೆನು, ಎಂದು ಹೇಳಿ ಅವರನ್ನು ಹಿಂಬಾಲಿಸುವಂತೆ.

ಏವಂ ಪೂರ್ವೈರ್ಗತೋ ಮಾರ್ಗಃ ಪಿತೃ
ಪೈತಾಮಹೋಧ್ರುವಃ ।
ತಮಾಪನ್ನಃ ಕಥಂಶೋಚೇದ್ಯಸ್ಯ ನಾಸ್ತಿ ವ್ಯತಿಕ್ರಮಃ॥
ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೩೦

ಇದಕ್ಕೆ ಮೊದಲು ತಮ್ಮ ತಮ್ಮ ಹಿರಿಯರು ಅವಲಂಬಿಸಿದ ದಾರಿಯನ್ನು ಹಿಡಿದು ಹೋಗುವುದೇ ಮುಂದಿನವರ ಕೆಲಸವೆಂಬುವುದು ನಿಜ. ಎಷ್ಟು ಮಾತ್ರಕ್ಕೂ ಆ ಮಾರ್ಗವನ್ನು ಬಿಡಲು ಆಗುವದಿಲ್ಲ ಹೀಗಿರುವಾಗ ದುಃಖಿಸುವದೇಕೆ?

ವಯಸಃ ಪತಮಾನಸ್ಯ ಸ್ರೋತಸೋವಾನಿವರ್ತಿನಃ ।
ಆತ್ಮಾ ಸುಖೇ ನಿಯೋಕ್ತವ್ಯ ಸುಖಭಾಜಃ

ಪ್ರಜಾಸ್ಮೃತಾಃ ॥
ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೩೧

ಪ್ರವಾಹದಂತೆ ವಯಸ್ಸೆಂಬುವುದು ಮುಂದೆ ಮುಂದೆ ಹೋಗುತ್ತಿರುವುದೇ ಹೊರತು ಹಿಂತಿರುಗಿ ಬರಲಾರದು.

ತಾನು ಬದುಕಿರುವಷ್ಟರಲ್ಲಿ ಪರಲೋಕ ಶ್ರೇಯಸ್ಸಿಗೆ ಬೇಕಾದ ಉಪಾಯವನ್ನು ತಾನು ಸಿದ್ಧಪಡಿಸಿಕೊಳ್ಳಬೇಕು. ಸುಖ ಹೇತುವಾದ ಧರ್ಮವನ್ನು ಗಳಿಸತಕ್ಕವರೇ ಮನುಷ್ಯ ರೆನಿಸುವರು.

ಏತೇ ಬಹುವಿಧಾ ಶೋಕಾಃ ವಿಲಾಪರುದಿತೇ ತಥಾ।
ವರ್ಜನೀಯಾಹಿ ಧೀರೇಣ ಸರ್ವಾವಸ್ಥಾಸು ಧೀಮತಾ॥

ಅಯೋಧ್ಯಾಕಾಂಡ, ಸರ್ಗ ೧೦೫, ಶ್ಲೋಕ ೩೫

ಪ್ರಾಜ್ಞನಾಗಿಯೂ ಧೀರನಾಗಿಯೂ ಇರುವ ಪುರುಷನು ಯಾವ ಅವಸ್ಥೆಗಳಲ್ಲಿಯೂ ಹೀಗೆ ದುಃಖಿಸಬಾರದು-

ಯಥಾಮೃತಸ್ತಥಾಜೀವನ್ ಯಥಾಸತಿ ತಥಾಸತಿ।
ಯಸ್ಯೈಷ ಬುದ್ಧಿ ಲಾಭಸ್ಯಾತ್ಪರಿತಪ್ಯೇತ ಕೇನಸಃ॥

ಅಯೋಧ್ಯಾಕಾಂಡ, ಸರ್ಗ ೧೦೬, ಶ್ಲೋಕ ೪

ಸತ್ತವನಮೇಲೆ ದ್ವೇಷಬುದ್ಧಿಯನ್ನು ಬಿಡುವ ಹಾಗೆಯೇ ಬದುಕಿರುವವನ ಮೇಲೆಯೂ ದ್ವೇಷವಿಲ್ಲದಿರುವುದು; ಇಲ್ಲದ ವಸ್ತುವಿನಲ್ಲಿ ಆಸೆಯನ್ನಿಡದಿರುವುದು; ಈ ಎರಡು ವಿಧ ವಶದ ಮನೋದಾರ್ಢ್ಯವು ಭೂಮಿಯಲ್ಲಿ ಯಾವನಿಗುಂಟೋ ಅತನು ಯಾವದಕ್ಕೂ ಸ್ವಲ್ಪವಾದರೂ ಪರಿತಪಿಸಲಾರನು ಎಂಬದಾಗಿ ಶ್ರೀರಾಮನು ಭರತನಿಗೆ ಹೇಳಿದನು.

ಶಕ್ರಾದಿಷ್ವಪಿ ದೇವೇಷು ವರ್ತಮಾನೌ
ನಯಾನಯೌ।
ಶ್ರೂಯೇತೇ ನರಶಾರ್ದೂಲ ನತ್ವಂ
ಶೋಚಿತುಮರ್ಹಸಿ॥

ಅರಣ್ಯಕಾಂಡ, ಸರ್ಗ ೬೬, ಶ್ಲೋಕ ೧೨

ಇಂದ್ರಾದಿ ದೇವತೆಗಳಿಗೂ ಕೂಡ ಅವರವರ ಸುಖ ದುಃಖಗಳ ಮೂಲಕ ಬಂದೊದಗುವ ಅವಸ್ಥೆಗಳು ತಪ್ಪಿದು ವಲ್ಲವೆಂದು ಕೇಳಿರುವೆವು. ಆದ್ದರಿಂದ ಎಲೈ ಪುರುಷ ಶ್ರೇಷ್ಠನೆ ನೀನು ದುಃಖಿಸಬಾರದು ಎಂಬುದಾಗಿ ಲಕ್ಷ್ಮಣನು ಶ್ರೀರಾಮನಿಗೆ ಹೇಳಿದನು.

ಐಶ್ವರ್ಯೇವಾ ಸುವಿಸ್ತೀರ್ಣೇ ವ್ಯಸನೇ ವಾತಿ ದಾರುಣೆ ।
ರಜ್ಜ್ವೇವ ಪುರುಷಂ ಬಧ್ವಾ ಕೃತಾಂತಃ ಪರಿಕರ್ಷತಿ ॥

ಸುಂದರಕಾಂಡ, ಸರ್ಗ ೩೭, ಶ್ಲೋಕ ೩

ಹೆಚ್ಚಾದ ಐಶ್ವರ್ಯ ಬಂದಾಗಾಗಲೀ ಭಯಂಕರವಾದ ಕಷ್ಟಬಂದಾಗಾಗಲೀ ಪುರುಷನು ತಾನು ಸ್ವತಂತ್ರನಲ್ಲ ವಿಧಿಯೇ ಅವನನ್ನು ಹಗ್ಗದಿಂದ ಕಟ್ಟಿ ಹಿಡಿದುಕೊಂಡು ಹೋಗುತ್ತದೆ: ಅಂದರೆ ಇದ್ದಕ್ಕಿದ್ದ ಹಾಗೆ ಬಹಳ ಕಷ್ಟಕ್ಕೆ ಪಾತ್ರನಾಗುತ್ತಾನೆ.

ವಿಧಿರ್ನೂನಮಸಂಹಾರ್ಯಃ ಪ್ರಾಣಿನಾಂ ಪ್ಲವಗೋತ್ತಮ ।
ಸೌಮಿತ್ರಿಂ ಮಾಂಚ ರಾಮಂಚ ವ್ಯಸನೈಃ ಪಶ್ಯ ಮೋಹಿತಾನ್ ॥

ಸುಂದರಕಾಂಡ, ಸರ್ಗ ೩೭, ಶ್ಲೋಕ ೪

ಎಲೈ ವಾನರ ಶ್ರೇಷ್ಠನೆ, ಪ್ರಾಣಿಗಳಿಗೆ ವಿಧಿಯನ್ನು ಮೀರುವುದಕ್ಕೆ ಆಗುವದಿಲ್ಲ. ಇದು ನಿಜ, ಈಗ ನೋಡು ಲಕ್ಷ್ಮಣನು ನಾನು ಮತ್ತು ಶ್ರೀರಾಮನು ಸಹಾ ನಮ್ಮ ನಮ್ಮ ಅಗಲಿಕೆಯಿಂದ ಬಹಳ ವ್ಯಸನಕ್ಕೆ ಪಾತ್ರರಾಗಿದ್ದೇವೆ, ಎಂಬದಾಗಿ ಸೀತೆಯು ಆಂಜನೇಯನಿಗೆ ಹೇಳಿದಳು.

ಭಾಗ್ಯ ವೈಷಮ್ಯ ಯೋಗೇನ ಪುರಾ ದುಶ್ಚರಿತೇನ ಚ।
ಮಯ್ಯೈ ತತ್ಪ್ರಾಪ್ಯತೇ ಸರ್ವಂ ಸ್ವಕೃತಂ ಹ್ಯುಪಭುಜ್ಯತೆ॥

ಯುದ್ಧಕಾಂಡ, ಸರ್ಗ ೧೧೬ ಶ್ಲೋಕ ೩೯

ನನ್ನ ವಿಧಿ ಭಾಗ್ಯ ಪರಿಪಾಕದಿಂದಲೂ, ನಾನು ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ವಿಶೇಷದಿಂದಲೂ, ನನಗೆ ಈ ಕಷ್ಟಗಳೆಲ್ಲಾ ಪ್ರಾಪ್ತವಾದುವು. ನಾನು ಮಾಡಿದ ಕರ್ಮ ಫಲ ಅನುಭವಿಸಲೇಬೇಕು ಎಂಬುದಾಗಿ ಸೀತೆಯು ಆಂಜನೇಯನಿಗೆ ಹೇಳಿದಳು.

ಪುರುಷ ಪ್ರಯತ್ನ

ವಿಕ್ಲಬೋ ವೀರ್ಯಹೀನೋಯಸ್ಸದೈವ ಮನುವರ್ತತೆ।
ವೀರಾಸ್ಸಂಭಾವಿತಾತ್ಮಾನೋ ನ ದೈವಂ ಪರ್ಯುಪಾಸತೇ॥

ಅಯೋಧ್ಯಾಕಾಂಡ, ಸರ್ಗ ೨೩, ಶ್ಲೋಕ ೧೬

ಯಾರು ದೃಢವಾದ ಮನಸ್ಸಿಲ್ಲದೆ ವೀರ್ಯ ಹೀನನಾಗಿರುತ್ತಾನೆಯೋ ಆವನು ಮಾತ್ರವೇ ದೈವವನ್ನು ಅನುಸರಿಸುವನು. ವೀರರಾಗಿಯೂ ಗೌರವ ಶಾಲಿಗಳಾಗಿಯೂ ಇರುವವರು ಪುರುಷ ಪ್ರಯತ್ನ ಮಾಡುವರೇ ಹೊರತು ದೈವವನ್ನು ಅನುಸರಿಸುವದಿಲ್ಲ.

ದೈವಂ ಪುರುಷಕಾರೇಣ ಯಸ್ಸಮರ್ಥಃ ಪ್ರಬಾಧಿತುಂ।
ನದೈವೇನ ವಿಪನ್ನಾರ್ಥಃ ಪುರುಷಸ್ಸೋವಸೀದತಿ॥

ಅಯೋಧ್ಯಾಕಾಂಡ, ಸರ್ಗ ೨೩ ಶ್ಲೋಕ ೧೭

ಸಮರ್ಥರಾದವರು ಪುರುಷ ಪ್ರಯತ್ನದಿಂದ ದೈವವನ್ನು ತಳ್ಳಿ ಕೆಲಸ ಸಾಧಿಸುವರು. ಸಮರ್ಥರಾದವರು ದೈವದಿಂದ

ಕಷ್ಟಕ್ಕೆ ಸಿಕ್ಕುವುದಿಲ್ಲ. ಪುರುಷ ಪ್ರಯತ್ನ ಮಾಡದಿರುವವರು ಕಷ್ಟಕ್ಕೆ ಒಳಗಾಗುವರು, ಎಂಬುದಾಗಿ ಲಕ್ಷ್ಮಣನು ಶ್ರೀರಾಮನಿಗೆ ತಿಳಿಸಿದನು.

ಅರ್ಥೋಹಿ ನಷ್ಟ ಕಾರ್ಯಾರ್ಥೈರ್ನಾಯತ್ನೇನಾದಿ ಗಮ್ಯತೆ ||

ಕಿಷ್ಕಿಂಧಾಕಾಂಡ, ಸರ್ಗ ೧, ಶ್ಲೋಕ ೧೨೦—೧೨೧

ಧೈರ್ಯವನ್ನು ಬಿಟ್ಟು ಪ್ರಯತ್ನ ಮಾಡದಿರುವವರಿಗೆ ಕಾರ್ಯ ಸಿದ್ಧಿಯಾಗುವುದಿಲ್ಲ; ಎಂಬುದಾಗಿ ಲಕ್ಷ್ಮಣನು ಶ್ರೀರಾಮನಿಗೆ ತಿಳಿಸಿದನು.

ಕೃತಜ್ಞತೆ

ಕೃತೇಚ ಪ್ರತಿ ಕರ್ತವ್ಯ ಮೇಷಧರ್ಮಸ್ಸನಾತನಃ

ಸುಂದರಕಾಂಡ ಸರ್ಗ ೧, ಶ್ಲೋಕ ೧[illegible]

ಒಬ್ಬರು ನಮಗೆ ಉಪಕಾರ ಮಾಡಿದರೆ ಅವರಿಗೆ ನಾವು ಪ್ರತ್ಯುಪಕಾರ ಮಾಡಬೇಕಾದ ಕರ್ತವ್ಯವು ಶಾಶ್ವತವಾದ ಧರ್ಮವು ಎಂಬುದಾಗಿ ಮೈನಾಕನು ಆಂಜನೇಯನಿಗೆ ಹೇಳಿದನು.

ಮರ್ಷಿತಂ ಮರ್ಷಣೀಯಂಚ ಚೇಷ್ಟಿತಂ ಕೃತ ಕರ್ಮಣಾಂ ।

ಸುಂದರಕಾಂಡ, ಸರ್ಗ ೬೩, ಶ್ಲೋಕ ೨೭

ಉಪಕಾರ ಮಾಡಿದವರು ಮಾಡಿದ ಅಪರಾಧ ಕ್ಷಮಿಸಲ್ಪಡತಕ್ಕದ್ದು ಎಂಬುದಾಗಿ ಸುಗ್ರೀವನು ದಧಿಮುಖನಿಗೆ ಹೇಳಿದನು.

ನಾಜ್ಞಾಪಯಿತು ಮೀಶೋಽಹಂ ಯುವರಾಜೋಽಸ್ಮಿ ಯದ್ಯಪಿ ।
ಅಯುಕ್ತಂ ಕೃತಕರ್ಮಾಣೋ ಯೂಯಂ ಧರ್ಷಯಿತುಂ ಮಯಾ ॥

ಸುಂದರಕಾಂಡ, ಸರ್ಗ ೬೪, ಶ್ಲೋಕ ೧೫

ನಾನು ಯುವರಾಜನಾದರೂ ಹೇಳಿದ ಕೆಲಸವನ್ನು ಸಫಲವಾಗಿ ಮಾಡಿದ ನಿಮಗೆ ದರ್ಪದಿಂದ ಹೇಳುವುದು ನನಗೆ ಯುಕ್ತವಾಗಿಲ್ಲ; ಎಂಬುದಾಗಿ ಅಂಗದನು ಹನುಮಂತನಿಗೆ ಹೇಳಿದನು.

ಏಕೈಕಸ್ಯೋಪಕಾರಸ್ಯ ಪ್ರಾಣಾನ್ ದಾಸ್ಯಾಮಿ ತೇ ಕಪೇ ।
ನರಃ ಪ್ರತ್ಯುಪಕಾರಾಣಾಂ ಆಪತ್ಸ್ವಾಯಾತಿ ಪಾತ್ರತಾಂ

ಉತ್ತರಕಾಂಡ, ಸರ್ಗ ೪೦, ಶ್ಲೋಕ ೨೨

ನೀನು ಮಾಡಿದ ಒಂದೊಂದು ಉಪಕಾರಕ್ಕೂ ನಾನು ನನ್ನ ಪ್ರಾಣಗಳನ್ನು ಕೊಟ್ಟರೂ ನಿನ್ನ ಉಪಕಾರದ ಋಣ ತೀರುವುದಿಲ್ಲ. ಪ್ರತ್ಯುಪಕಾರ ಮಾಡುವವನು ತನಗೆ ಉಪಕಾರ ಮಾಡಿದವನಿಗೆ ಕಷ್ಟಕಾಲದಲ್ಲಿ ಮಾಡತಕ್ಕದ್ದೇ ಶ್ರೇಷ್ಠವಾದ ಪಾತ್ರ ಎಂಬುದಾಗಿ ಶ್ರೀರಾಮನು ಆಂಜನೇಯನಿಗೆ ಹೇಳಿದನು.

ಕರ್ತವ್ಯ

ಕರ್ತವ್ಯಮಕೃತಂ ಕಾರ್ಯಂ ಸತಾಂ ಮನ್ಯುಮುದೀರಯೇತ್ ॥

ಸುಂದರಕಾಂಡ, ಸರ್ಗ ೧, ಶ್ಲೋಕ ೯೮

ಮಾಡಬೇಕಾದ ಕರ್ತವ್ಯವನ್ನು ಮಾಡದಿದ್ದರೆ ಸತ್ಪುರುಷರ ಆಗ್ರಹಕ್ಕೆ ಪಾತ್ರರಾಗಬೇಕಾಗುತ್ತದೆ ಎಂಬುದಾಗಿ ಸಮುದ್ರರಾಜನು ಮೈನಾಕನಿಗೆ ಹೇಳಿದನು.

ಕಾರ್ಯ ಸಾಧನೆ

ಯಸ್ಯತ್ವೇತಾನಿ ಚತ್ವಾರಿ ವಾನರೇಂದ್ರ ಯಥಾತವ ।
ಧೃತಿರ್ದೃಷ್ಟಿ ಮತಿರ್ದಾಕ್ಷ್ಯಂ ಸ್ವಕರ್ಮಸು ನಸೀದತಿ ॥

ಸುಂದರಕಾಂಡ, ಸರ್ಗ ೧, ಶ್ಲೋಕ ೧೮೯

ಎಲೈ ವಾನರೇಂದ್ರನೆ, ನಿನ್ನಲ್ಲಿರುವಂತೆ ಯಾರಲ್ಲಿ ಧೈರ್ಯವೂ, ಸೂಕ್ಷ್ಮವಾಗಿಯೂ ನಿಶ್ಚಯಿಸುವುದಾಗಿಯೂ ಇರುವ ಬುದ್ಧಿ ಸಾಮರ್ಥ್ಯವೂ ಇರುತ್ತವೆಯೋ ಅವರು ತಾವು ತೊಡಗಿರುವ ಕಾರ್ಯದಲ್ಲಿ ಅಪಜಯಹೊಂದುವುದಿಲ್ಲ ಎಂಬುದಾಗಿ ಆಕಾಶದಲ್ಲಿ ಸಂಚರಿಸುತ್ತಿರುವ ಭೂತಗಳು ಆಂಜನೇಯನನ್ನು ಶ್ಲಾಘಿಸಿದರು.

ಕಾರ್ಯೆ ಕರ್ಮಣಿ ನಿರ್ದಿಷ್ಟೆ ಯೋ ಬಹೂನ್ಯಪಿ
ಸಾಧಯೇತ್ ।
ಪೂರ್ವಕಾರ್ಯಾವಿರೋಧೇನ ಸಕಾರ್ಯಂ ಕರ್ತುಮರ್ಹತಿ

ಸುಂದರಕಾಂಡ, ಸರ್ಗ ೧೪, ಶ್ಲೋಕ ೫

ಯಾರಾದರೆ ತನಗೆ ಆಜ್ಞಾಪಿಸಲ್ಪಟ್ಟ ಕೆಲಸವನ್ನು ನೆರವೇರಿಸಿ ಅದಕ್ಕೆ ವಿರೋಧವಿಲ್ಲದಂತೆ ಇತರ ಹೆಚ್ಚು ಕೆಲಸಗಳನ್ನೂ ಸಾಧಿಸುವನೋ ಅವನೇ ಕೆಲಸಗಳನ್ನು ಮಾಡಲು ಅರ್ಹನು (ಯೋಗ್ಯ ಕಾರ್ಯ ಸಾಧಕನು.).

ನಹ್ಯೇಕಸ್ಸಾಧಕೋ ಹೇತುಸ್ಸ್ವಲ್ಪಸ್ಯಾಪೀಹ ಕರ್ಮಣಃ ।
ಯೋಹ್ಯರ್ಥಂ ಬಹುಧಾವೇದಸ ಸಮರ್ಥೋಽರ್ಥ ಸಾಧನೆ ॥

ಸುಂದರಕಾಂಡ, ಸರ್ಗ ೪೧, ಶ್ಲೋಕ ೨

ಕೆಲಸ ಸ್ವಲ್ಪವಾದರೂ ಒಂದೇ ರೀತಿಯಲ್ಲಿ ಸಾಧಿಸಲು ಕಾರಣವಾಗಿರುವುದಿಲ್ಲ. ಒಂದು ಕೆಲಸ ನೆರವೇರಲು ನಾನಾ ವಿಧ ಉಪಾಯಗಳಿಂದ ಮಾಡಲು ಯಾವನು ತಿಳಿಯುವನೋ ಅವನೇ ಕಾರ್ಯ ಸಾಧನೆ ಮಾಡುವುದಕ್ಕೆ ಸಮರ್ಥನು ಎಂಬು ದಾಗಿ ಹನುಮಂತನು ಯೋಚಿಸಿದನು.

ಅನಿರ್ವೇದಂಚ ಧಾಕ್ಷ್ಯಂಚ ಮನಸಶ್ಚಾಪರಾಜಯಃ ।
ಕಾರ್ಯಸಿದ್ಧಿ ಕರಣ್ಯಾಹು ಸ್ತಸ್ಮಾದೇತದ್ಬ್ರವೀಮ್ಯಹಂ॥

ಕಿಷ್ಕಿಂಧಾಕಾಂಡ, ಸರ್ಗ ೪೯, ಶ್ಲೋಕ ೬

ಉತ್ಸಾಹ, ದಕ್ಷತೆ, ಧೈರ್ಯ ಈ ಗುಣಗಳುಳ್ಳ ಪುರುಷರಿಗೆ ಕಾರ್ಯಸಿದ್ಧಿಯಾಗುವುವು. ಆದ್ದರಿಂದ ನಿಮಗೆ ಹೇಳುತ್ತೇನೆ ಎಂಬುದಾಗಿ ಅಂಗದನು ಹನುಮದಾದಿಗಳಿಗೆ ಹೇಳಿದನು.

ದೂತಲಕ್ಷಣ

ಭೂತಾಶ್ಚಾರ್ಥಾ ವಿಪದ್ಯಂತೇ ದೇಶಕಾಲ ವಿರೋಧಿತಾಃ।
ವಿಕ್ಲಬಂ ದೂತಮಾಸಾದ್ಯ ತಮಸ್ಸೂರ್ಯೋದಯೇ ಯಥಾ ॥

ಸುಂದರಕಾಂಡ, ಸರ್ಗ ೨, ಶ್ಲೋಕ ೩೯

ಉಪಾಯದಿಂದ ಮಾಡಬೇಕಾದ ಕೆಲಸಗಳೂ ಸಹ, ಆಲೋಚನೆ ಮಾಡಲು ಸಾಮರ್ಥ್ಯವಿಲ್ಲದ ವಿವೇಕ ಶೂನ್ಯ

ನಾದ ದೂತನಿಂದ ದೇಶಕಾಲ ವಿರೋಧದಿಂದ ಸೂರ್ಯೋದಯದಿಂದ ಕತ್ತಲು ಹೋಗುವಂತೆ ಫಲಪ್ರದವಾಗದೆ ನಾಶ ಹೊಂದುವುವು.

ಅರ್ಥಾನರ್ಥಾಂತರೇ ಬುದ್ಧಿ ನಿಶ್ಚಿತಾಪಿ ನಶೋಭತೆ ।
ಘಾತಯಂತಿಹಿ ಕಾರ್ಯಾಣಿ ದೂತಾಃ ಪಂಡಿತಮಾನಿನಃ॥

ಸುಂದರ ಕಾಂಡ, ಸರ್ಗ ೨, ಶ್ಲೋಕ ೪೦

ಹೀಗೆ ಮಾಡಿದರೆ ಒಳ್ಳೇದು, ಹೀಗೆ ಮಾಡಿದರೆ ಪ್ರಯೋಜನವಿಲ್ಲ ಎಂಬ ಬುದ್ಧಿಯುಳ್ಳವನೂ ಸಹ ತಾನೇ ಗಟ್ಟಿಗನು ಎಂಬದಾಗಿ ಅಹಂಕಾರ ಪಟ್ಟವನು, ಪೂರ್ವಾಪರ ಯೋಚನೆ ಮಾಡದೆ ಕೆಲಸ ಹಾಳು ಮಾಡುವನು ಎಂಬುದಾಗಿ ಆಂಜನೇಯನು ಯೋಚಿಸಿದನು.

ಯೋಹಿಭೃತ್ಯೋ ನಿಯುಕ್ತಸ್ಸ್ ಭರ್ತ್ರಾಕರ್ಮಣಿ ದುಷ್ಕರೆ ।
ಕುರ್ಯಾತ್ತದನುರಾಗೇಣ ತಮಾಹು ಪುರುಷೋತ್ತಮಂ॥

ಯುದ್ಧ ಕಾಂಡ, ಸರ್ಗ ೧, ಶ್ಲೋಕ ೭

ಯಾವ ಸೇವಕನು ಯಜಮಾನನಿಂದ ನೇಮಿಸಲ್ಪಟ್ಟ ಅಸಾಧ್ಯವಾದ ಕೆಲಸವನ್ನು ಅನುರಾಗದಿಂದ ಆ ಕೆಲಸವು ಸಫಲವಾಗುವ ಹಾಗೆ ನೆರವೇರಿಸುವನೋ ಅವನು ಪುರುಷ ಶ್ರೇಷ್ಠನೆಂದು ಎಣಿಸಲ್ಪಡುವನು.

ನಿಯುಕ್ತೋ ಯಃ ಪರಂಕಾರ್ಯಂ ನಕುರ್ಯಾನ್ನೃಪತೇಃ ಪ್ರಿಯಂ ।
ಭೃತ್ಯೋಯುಕ್ತಸ್ಸಮರ್ಥಶ್ಚ ತಮಾಹುರ್ಮಧ್ಯಮಂ ನರಂ ॥

ಯುದ್ಧ ಕಾಂಡ, ಸರ್ಗ ೧, ಶ್ಲೋಕ ೪

ಯಜಮಾನನಿಂದ ನೇಮಿಸಲ್ಪಟ್ಟ ಅಸಾಧ್ಯವಾದ ಕೆಲಸ ವನ್ನು ಸೇವಕನು ಯಜಮಾನನಿಗೆ ಪ್ರೀತಿ ಆಗುವ ಹಾಗೆ ಮಾಡದೆ ಸುಮ್ಮನೆ ಕೆಲಸ ಮಾಡಿದರೆ ಸೇವಕನು ಸಮರ್ಥ ನಾಗಿ ಸರಿಯಾದವನಾಗಿದ್ದರೂ ಅವನು ಮಧ್ಯಮನೆಂದು ಎಣಿಸಲ್ಪಡುವನು.

ನಿಯುಕ್ತೋ ನೃಪತೇಃ ಕಾರ್ಯಂ ನಕುರ್ಯಾದ್ಯ
ಸ್ಸಮಾಹಿತಃ ।
ಭೃತ್ಯೋಯುಕ್ತ ಸ್ಸಮರ್ಥಶ್ಚ ತಮಾಹುಃ
ಪುರುಷಾಧಮಃ॥

ಯುದ್ಧಕಾಂಡ, ಸರ್ಗ ೧, ಶ್ಲೋಕ ೯

ಯಜಮಾನನಿಂದ ನೇಮಿಸಲ್ಪಟ್ಟ ಅಸಾಧ್ಯವಾದ ಕೆಲಸ ವನ್ನು ಸೇವಕನು ಒಮ್ಮನಸ್ಸಿನಿಂದ ಮಾಡದೆ ಕೆಲಸ ಕೆಡಿಸಿ ಬಿಟ್ಟರೆ ಅವನನ್ನು ಅಧಮ ಪುರುಷನೆಂತ ಹೇಳುವರು ಎಂಬದಾಗಿ ಶ್ರೀರಾಮನು ಸುಗ್ರೀವನಿಗೆ ಹೇಳಿದನು.

ಜಿತೇಂದ್ರಿಯತ್ವ

ಮನೋಹಿ ಹೇತು ಸ್ಸರ್ವೇಷಾಂ ಇಂದ್ರಿಯಾಣಾಂ
ಪ್ರವರ್ತನೆ ।
ಶುಭಾಶುಭಾಸ್ವವಸ್ಥಾಸು ತಚ್ಚಮೇ ಸುವ್ಯವಸ್ಥಿತಂ ॥

ಸುಂದರಕಾಂಡ, ಸರ್ಗ ೧೧, ಶ್ಲೋಕ ೪೧

ಧರ್ಮದಲ್ಲಿಯಾಗಲೀ ಅಧರ್ಮದಲ್ಲಿಯಾಗಲೀ ಇಂದ್ರಿಯ ಗಳು ಪ್ರವರ್ತಿಸುವದಕ್ಕೆ ಮನಸ್ಸೇ ಕಾರಣ. ಅಂಥಾ ನನ್ನ ಮನಸ್ಸು ಇಂದ್ರಿಯಗಳಿಗೆ ಅಧೀನವಾಗದೆ ಸ್ಥಿರವಾಗಿರುತ್ತ ದಲ್ಲಾ ಎಂಬದಾಗಿ ಆಂಜನೇಯನು ತನಗೆ ತಾನು ಆಲೋ ಚಿಸಿದನು.

ಧನ್ಯಾಃ ಖಲು ಮಹಾತ್ಮಾನೋ ಮುನಯ ಸ್ತ್ಯಕ್ತ
ಕಿಲ್ಬಿಷಾಃ ।
ಜಿತಾತ್ಮಾನೋ ಮಹಾಭಾಗಾಯೇಷಾಂನಸ್ತಃ
ಪ್ರಿಯಾಪ್ರಿಯೆ ॥

ಸುಂದರಕಾಂಡ, ಸರ್ಗ ೨೬, ಶ್ಲೋಕ ೪೯

ನಮಗೆ ಇರುವ ಹಾಗೆ ಇದು ಸುಖ ಇದು ಕಷ್ಟ ಎಂಬ ಭೇದ ಯಾರಿಗೆ ಇಲ್ಲವೋ ಅವರು ಧೈರ್ಯಶಾಲಿಗಳು, ಪಾಪ ರಹಿತರು, ಮನಸನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವರು. ಇಂಥವರು ಮಹಾ ಪೂಜ್ಯರಾದ ತಪಸ್ವಿಗಳು, ಇದು ಪ್ರಿಯ ವಾದ್ದು, ಇದು ಅಪ್ರಿಯವಾದ್ದು ಎಂಬ ಭೇದವೇ ಇವರಿಗೆ ಇರುವದಿಲ್ಲ.

ಪ್ರಿಯಾನ್ನಸಂಭವೇ ದ್ದುಃಖಮಪ್ರಿಯಾದಧಿಕಂ
ಭಯಂ ।
ತಾಭ್ಯಾಂಹಿಯೇ ವಿಯುಜ್ಯಂತೇ ನಮಸ್ತೇಷಾಂ
ಮಹಾತ್ಮನಾಂ ॥

ಸುಂದರಕಾಂಡ, ಸರ್ಗ ೨೬, ಶ್ಲೋಕ ೫೦

ಹೀಗೆ ಸುಖ-ದುಃಖಗಳನ್ನುಂಟುಮಾಡುವ ಪ್ರಿಯಾ ಪ್ರಿಯಗಳನ್ನು ಬಿಟ್ಟು ಇರುವ ಮಹಾತ್ಮರಾದ ಋಷಿಗಳಿಗೆ ನಮಸ್ಕಾರ ಮಾಡುತ್ತೇನೆ ಎಂಬುದಾಗಿ ಸೀತೆಯು ತನಗೆ ತಾನೇ ಹೇಳಿಕೊಂಡಳು.

ಉತ್ಸಾಹ

ಅನಿರ್ವೇದಶ್ಶ್ರಿಯೋ ಮೂಲ ಮನಿರ್ವೇದಃ ಪರಂ
ಸುಖಂ ।
ಅನಿರ್ವೇದೋಹಿ ಸತತಂ ಸರ್ವಾರ್ಥೇಷು ಪ್ರವರ್ತಕಃ॥
ಕರೋತಿ ಸಫಲಂ ಜಂತೋಃ ಕರ್ಮಯಚ್ಚ ಕರೋತಿಸಃ।

ಸುಂದರಕಾಂಡ, ಸರ್ಗ ೧೨, ಶ್ಲೋಕ ೧೦

ಉತ್ಸಾಹವು ಸಂಪತ್ತಿಗೆ ಮೂಲವೆಂತಲೂ, ಉತ್ಸಾಹದಿಂದ ಅಧಿಕವಾಗಿ ಸುಖವಾಗುತ್ತೆಂತಲೂ ಉತ್ಸಾಹದಿಂದಲೇ ಪುರುಷನು ಸಮಸ್ತ ಕಾರ್ಯಗಳಲ್ಲಿಯೂ ಪ್ರವರ್ತಿಸುವನು. ಪುರುಷನು ಯಾವ ಕಾರ್ಯವನ್ನು ಮಾಡುತ್ತಾನೆಯೋ ಆ ಕಾರ್ಯವೆಲ್ಲಾ ಉತ್ಸಾಹದಿಂದಲೇ ಸಫಲವಾಗುವವು ಎಂಬುದಾಗಿ ಆಂಜನೇಯನು ಆಲೋಚಿಸಿದನು.

ಉತ್ಸಾಹೋ ಬಲವಾನಾರ್ಯ ನಾಸ್ತ್ಯುತ್ಸಾಹಾತ್ಪರಂ
ಬಲಂ ।
ಸೋತ್ಸಾಹಸ್ಯಾಸ್ತಿ ಲೋಕೇಸ್ಮಿನ್ನ ಕಿಂಚಿದಪಿ
ದುರ್ಲಭಂ ॥

ಕಿಷ್ಕಿಂಧಾಕಾಂಡ, ಸರ್ಗ ೧, ಶ್ಲೋಕ ೧೨೧-೧೨೨

ಆರ್ಯನೇ ಉತ್ಸಾಹವೇ ಬಲವುಳ್ಳದ್ದು, ಉತ್ಸಾಹಕ್ಕಿಂತ ಬೇರೆ ಅಧಿಕ ಬಲವಿಲ್ಲ. ಉತ್ಸಾಹವಂತನಿಗೆ ಲೋಕದಲ್ಲಿ ದುರ್ಲಭವಾದ್ದು ಯಾವದೂ ಇರುವದಿಲ್ಲ.

ಉತ್ಸಾಹವಂತಃ ಪುರುಷಾ ನಾವಸೀದಂತಿ ಕರ್ಮಸು ।
ಉತ್ಸಾಹಮಾತ್ರ ಮಾಶ್ರಿತ್ಯ ಸೀತಾ ಪ್ರತಿಲಭೇ ಮಹಿ॥

ಕಿಷ್ಕಿಂಧಾಕಾಂಡ, ಸರ್ಗ ೧, ಶ್ಲೋಕ ೧೨೨-೧೨೩

ಉತ್ಸಾಹವುಳ್ಳ ಪುರುಷರು ಯಾವ ಕೆಲಸದಲ್ಲಿಯೂ ಎದೆಗುಂದುವದಿಲ್ಲ. ನಮ್ಮ ಉತ್ಸಾಹ ಮಾತ್ರದಿಂದಲೇ ಸೀತೆಯನ್ನು ಪುನಃ ನಾವು ಪಡೆಯುವೆವು ಎಂಬದಾಗಿ ಲಕ್ಷ್ಮಣನು ಶ್ರೀರಾಮನಿಗೆ ಹೇಳಿದನು.

ಆಂಜನೇಯನ ಮಹಾಮಂತ್ರ

ನಮೋಽಸ್ತು ರಾಮಾಯ ಸಲಕ್ಷ್ಮಣಾಯ ದೇವ್ಯೈ ಚ
ತಸ್ಯೈ ಜನಕಾತ್ಮಜಾಯೈ ।
ನಮೋಽಸ್ತು ರುದ್ರೇಂದ್ರ ಯಮಾನಿಲೇಭ್ಯೋ
ನಮೋಽಸ್ತು ಚಂದ್ರಾರ್ಕ ಮರುದ್ಗಣೇಭ್ಯಃ ॥

ಸುಂದರಕಾಂಡ, ಸರ್ಗ ೧೩, ಶ್ಲೋಕ ೬೦

ಶ್ರೀರಾಮನಿಗೂ ಲಕ್ಷ್ಮಣನಿಗೂ ನಮಸ್ಕಾರವು, ಜನಕಪುತ್ರಿಯಾದ ಸೀತಾದೇವಿಗೆ ನಮಸ್ಕಾರವು, ರುದ್ರ, ಇಂದ್ರ, ಯಮ, ವಾಯುದೇವರು ಇವರುಗಳಿಗೆ ನಮಸ್ಕಾರವು. ಚಂದ್ರ, ಸೂರ್ಯ, ಸಪ್ತ ಮಾರುತ್ತುಗಳಿಗೂ ನಮಸ್ಕಾರವು ಎಂಬದಾಗಿ ಆಂಜನೇಯನು ಇವರೆಲ್ಲರನ್ನೂ ಧ್ಯಾನ ಮಾಡಿದನು.

ಗಾಥೆ

ಕಲ್ಯಾಣೀ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮೇ।
ಏತಿ ಜೀವಂತ ಮಾನಂದೋ ನರಂ ವರ್ಷಶತಾದಪಿ ॥

ಸುಂದರಕಾಂಡ, ಸರ್ಗ ೩೪, ಶ್ಲೋಕ ೬

ಬಹಳ ಕಷ್ಟದೆಶೆಯಲ್ಲಿರುವ ಮನುಷ್ಯನೂ ಬದುಕಿದ್ದರೆ ಆತನ ನೂರು ವರ್ಷದ ಅವಧಿಯಲ್ಲಿ ಎಂದಾದರೂ ಒಂದು ದಿನ ಕಷ್ಟಗಳು ನೀಗಿ ಆನಂದ ಹೊಂದುವನು ಎಂಬ ಲೋಕ ವಾರ್ತೆ ನಿಜ ಎಂಬದಾಗಿ ಸೀತೆಯು ಅಂದುಕೊಂಡಳು.

ಕ್ರೋಧ ಅಥವಾ ಕೋಪ

ಧನ್ಯಾಸ್ತೇ ಪುರುಷಶ್ರೇಷ್ಠಾ ಯೇಬುದ್ಧ್ಯಾ ಕೋಪ
ಮುತ್ಥಿತಂ ।
ನಿರುಂಧಂತಿ ಮಹಾತ್ಮಾನೋ ದೀಪ್ತಮಗ್ನಿಮಿ
ವಾಂಭಸಾ ॥

ಸುಂದರಕಾಂಡ, ಸರ್ಗ ೫೫, ಶ್ಲೋಕ ೪

ಯಾರಾದರೆ ಕೋಪ ಬಂದಾಗ ಉರಿಯುತ್ತಿರುವ ಬೆಂಕಿಯನ್ನು ನೀರಿನಿಂದ ಆರಿಸುವಂತೆ ಬುದ್ಧಿಯಿಂದ ಕೋಪವನ್ನು ಬಿಡದೆ ಅಣಗಿಸುತ್ತಾರೋ ಅವರೇ ಪುರುಷ ಶ್ರೇಷ್ಠರು ಮತ್ತು ಪುಣ್ಯವಂತರು.

ಕೃದ್ಧಃ ಪಾಪಂ ನಕುರ್ಯಾತ್ಕಃ ಕೃದ್ಧೋ ಹನ್ಯಾ
ದ್ಗುರೂನಪಿ ।
ಕೃದ್ಧಃ ಪರುಷಯಾವಾಚಾ ನರ ಸ್ಸಾಧೂ ನಧಿಕ್ಷಿ
ಪೇತ್ ॥

ಸುಂದರಕಾಂಡ, ಸರ್ಗ ೫೫, ಶ್ಲೋಕ ೫

ಕೋಪ ಬಂದಾಗ ಯಾರು ತಾನೆ ಪಾಪ ಮಾಡುವುದಿಲ್ಲ. ಕೋಪಿಷ್ಠನು ಗುರುವನ್ನು ಕೂಡ ಕೊಲ್ಲುವನು. ಕೋಪಿಷ್ಠನು ಕಠಿಣವಾದ ಮಾತಿನಿಂದ ಸಾಧುಗಳನ್ನು ತಿರಸ್ಕರಿಸುವನು.

**ನಾಚ್ಯಾವಾಚ್ಯಂ ಪ್ರಕುಪಿತೋ ನವಿಜಾನಾತಿ ಕರ್ಹಿ
ಚಿತ್ ।
ನಾಕಾರ್ಯಮಸ್ತಿ ಕೃದ್ಧಸ್ಯ ನಾವಾಚ್ಯಂ ವಿದ್ಯತೇ
ಕ್ವಚಿತ್ ॥**

ಸುಂದರಕಾಂಡ, ಸರ್ಗ ೫೫, ಶ್ಲೋಕ ೬

ಕೋಪಿಷ್ಠನಾದಮನುಷ್ಯನಿಗೆಇಂಥಾಮಾತುಆಡಬಹುದು ಇಂಥಾ ಮಾತು ಆಡಬಾರದು ಎಂಬ ತಾರತಮ್ಯವೇ ಇರುವದಿಲ್ಲ. ಕೋಪಿಷ್ಠನು ಮಾಡದೆ ಇರುವ ಕೆಲಸವೇ ಇರುವದಿಲ್ಲ. ಆಡದೇ ಇರುವ ಮಾತೇ ಇರುವದಿಲ್ಲ.

**ಯಸ್ಸಮುತ್ಪತಿತಂ ಕ್ರೋಧಂ ಕ್ಷಮಯೈವ ನಿರಸ್ಯತಿ ।
ಯಥೋರಗಸ್ತ್ವಚಂಜೀರ್ಣಾಂ ಸವೈ ಪುರುಷ
ಉಚ್ಯತೇ ॥**

ಸುಂದರಕಾಂಡ, ಸರ್ಗ ೫೫, ಶ್ಲೋಕ ೭

ಯಾವನಾದರೆ ಬಂದ ಕೋಪವನ್ನು ಹಾವು ತನ್ನ ಪೊರೆಯನ್ನು ಬಿಡುವಂತೆ ಕ್ಷಮಾಗುಣದಿಂದ ಅಣಗಿಸಿಕೊಳ್ಳುತ್ತಾನೆಯೋ ಅವನೇ ಪುರುಷನು ಎಂಬದಾಗಿ ಆಂಜನೇಯನು ಅಂದು ಕೊಂಡನು.

**ಕ್ರೋಧಃ ಪ್ರಾಣಹರ ಶ್ಶತ್ರುಃ ಕ್ರೋಧೋ ಮಿತ್ರ
ಮುಖೇರಿಪುಃ ।
ಕ್ರೋಧೋಹ್ಯಸಿ ರ್ಮಹಾತೀಕ್ಷ್ಣ ಸ್ಸರ್ವಂ
ಕ್ರೋಧೋಪಕರ್ಷತಿ ।**

ಉತ್ತರಕಾಂಡ, ಸರ್ಗ ೮೪, ಅಧಿಕಪಾಠ ೨, ಶ್ಲೋಕ ೨೧

ಕೋಪವೇ ಪ್ರಾಣ ತೆಗಿಯತಕ್ಕ ಶತ್ರುವು, ಕೋಪವೇ ಸ್ನೇಹಿತನನ್ನು ಹಗೆ ಮಾಡುತ್ತದೆ, ಕೋಪವೇ ಮಹಾ ಹರಿತ ವಾದ ಕತ್ತಿಯಾಗಿಬಿಡುವುದು; ಕೋಪವೇ ಸಕಲ ಒಳ್ಳೇ ಗುಣಗಳನ್ನು ನುಂಗಿ ಬಿಡುವುದು.

ತಪತೇ ಯಜತೇ ಚೈವ ಯಚ್ಚದಾನಂ ಪ್ರಯಚ್ಛತಿ ।
ಕ್ರೋಧೇನ ಸರ್ವಂ ಹರತಿ ತಸ್ಮಾತ್ ಕ್ರೋಧಂ
ವಿಸರ್ಜಯೇತ್ ॥

ಉತ್ತರಕಾಂಡ, ಸರ್ಗ ೭೮, ಅಧಿಕಪಾಠ ೨, ಶ್ಲೋಕ ೨೨

ತಾನು ಮಾಡಿದ ತಪಸ್ಸು ಯಜ್ಞ ಮತ್ತು ದಾನ ಮುಂತಾದ ಎಲ್ಲಾ ಸತ್ಕರ್ಮಗಳ ಫಲಗಳೂ ಕೋಪದಿಂದ ಹಾಳಾಗುವುವು, ಆದ್ದರಿಂದ ಕೋಪವನ್ನು ಬಿಡತಕ್ಕದ್ದು.

ಇಂದ್ರಿಯಾಣಾಂ ಪ್ರದುಷ್ಟಾನಾಂ ಹಯಾನಾಮಿವ
ಧಾವತಾಂ ।
ಕುರ್ವೀತ ಧೃತ್ಯಾ ಸಾರಥ್ಯಂ ಸಂಹೃತ್ಯೇಂದ್ರಿಯ
ಗೋಚರಂ ॥
ಮನಸಾ ಕರ್ಮಣಾ ವಾಚಾ ಚಕ್ಷುಷಾ ಚ ಸಮಾಚರೇತ್ ॥
ಶ್ರೇಯೋ ಲೋಕಸ್ಯ ಚರತೋ ನದ್ವೇಷ್ಟಿ
ನಚಲಿಪ್ಯತೆ ॥

ಉತ್ತರಕಾಂಡ, ಸರ್ಗ ೭೮, ಅಧಿಕಪಾಠ ೨, ಶ್ಲೋಕ ೨೩–೨೪

ಮತ್ತು ಓಡಿಹೋಗುತ್ತಿರುವ ಕುದುರೆಯನ್ನು ಲಗಾಮು ಹಿಡಿದು ಧೈರ್ಯದಿಂದ ಅದನ್ನು ಹಿಡಿತಕ್ಕೆ ತರುವ ಸಾರಥಿ ಯಂತೆ ಕಾಮ, ಕ್ರೋಧಾದಿ ವೈರಿಗಳನ್ನು ಮನಸ್ಸೆಂಬ

ಲಗಾಮಿನಿಂದ ಬಿಗಿಹಿಡಿದ ಮನಸ್ಸಿನಿಂದಲೂ, ಬಾಯಿಯಿಂದಲೂ ತಾನು ಮಾಡುವ ಕೆಲಸದಿಂದಲೂ ಕಣ್ಣಿನಿಂದಲೂ ಇಂದ್ರಿಯ ನಿಗ್ರಹ ಮಾಡಬೇಕು. ಈ ಲೋಕದಲ್ಲಿ ಯಾರಾದರೆ ಎಲ್ಲರಿಗೂ ಒಳ್ಳೆಯದನ್ನು ಆಚರಿಸುವರೋ ಅವರಿಗೆ ದ್ವೇಷಿಗಳೂ ಇರುವದಿಲ್ಲ, ಯಾವ ಪಾಪವೂ ಅಂಟುವದಿಲ್ಲ ಎಂಬದಾಗಿ ಶ್ರೀರಾಮನು ಸಿದ್ಧಾರ್ಥನೆಂಬ ಬ್ರಾಹ್ಮಣನಿಗೆ ಹೇಳಿದನು.

೫೮

ದ್ವಿಧಾ ಭಜ್ಯೇಯ ಮಪ್ಯೇವಂ ನ ನಮೇಯಂತು
ಕಸ್ಯಚಿತ್ ।
ಏಷಮೇ ಸಹಜೋ ದೋಷ ಸ್ಸ್ವಭಾವೋ ದುರತಿ
ಕ್ರಮಃ ॥

ಯುದ್ಧಕಾಂಡ, ಸರ್ಗ ೩೬, ಶ್ಲೋಕ ೧೧

ನನ್ನನ್ನು ಎರಡು ತುಂಡಾಗಿ ಕತ್ತರಿಸಿದರೂ ನಾನು ಯಾರಿಗೂ ಬಗ್ಗುವದಿಲ್ಲ. ಇದು ನನ್ನಲ್ಲಿರುವ ಸಹಜವಾದ ದೋಷ. ಈ ಸ್ವಭಾವವನ್ನು ಬಿಡುವುದು ನನಗೆ ಸಾಧ್ಯವಿಲ್ಲ ಎಂಬದಾಗಿ ರಾವಣನು ತನ್ನ ಮಾತಾಮಹನಾದ ಮಾಲ್ಯವಂತನಿಗೆ ಹೇಳಿದನು.

೫೯

ಸನ್ನಿಕರ್ಷೇ ತವಾಖ್ಯಾತಿ ಭವಿಷ್ಯತ್ಯಭಯೋಗ್ಯತಾಂ ।

ಸುಂದರಕಾಂಡ, ಸರ್ಗ ೬೪, ಶ್ಲೋಕ ೧೮

ನಿನ್ನ ವಿನಯವು ಮುಂದೆ ನಿನ್ನ ಮಂಗಳಕರವಾದ ಯೋಗ್ಯತೆಯನ್ನು ಹೇಳುತ್ತದೆ ಎಂಬದಾಗಿ ಹನುಮದಾದಿಗಳು ಅಂಗದನಿಗೆ ಹೇಳಿದರು.

ರಾಜ ಸಂಶ್ರಯ ವಶ್ಯಾನಾಂ ಕುರ್ವಂತೀನಾಂ
ಪರಾಜ್ಞಯೊ ।
ವಿಧೇಯಾನಾಂಚ ದಾಸೀನಾಂ ಕಃ ಕುಪ್ಯೇದ್ವಾ
ನರೋತ್ತಮ ॥

ಯುದ್ಧಕಾಂಡ, ಸರ್ಗ ೧೧೬, ಶ್ಲೋಕ ೩೮

ಈ ರಾಕ್ಷಸ ಸ್ತ್ರೀಯರು ರಾವಣನಿಗೆ ವಿಧೇಯರಾಗಿ ಅವನ ಅಪ್ಪಣೆಯಂತೆ ನಡೆದಿರುವದರಿಂದ ಇವರ ಮೇಲೆ ಏಕೆ ಕೋಪ ಮಾಡಬೇಕು ಎಂಬದಾಗಿ ಸೀತೆಯು ಆಂಜನೇಯನಿಗೆ ಹೇಳಿದಳು.

ಶೋಕ

ಶೋಕೋ ನಾಶಯತೆ ಧೈರ್ಯಂ ಶೋಕೊ ನಾಶಯತೆ
ಶ್ರುತಂ ।
ಶೋಕೇ ನಾಶಯತೆ ಸರ್ವಂ ನಾಸ್ತಿಶೋಕ
ಸಮೋರಿಪುಃ ॥

ಅಯೋಧ್ಯಾಕಾಂಡ, ಸರ್ಗ ೬೨, ಶ್ಲೋಕ ೧೫

ದುಃಖವು ಧೈರ್ಯವನ್ನು ಹಾಳು ಮಾಡುವುದು. ದುಃಖವು ತಾನು ವೇದದಲ್ಲಿ ನಿಪುಣನಾಗಿದ್ದರೂ ಆ ಜ್ಞಾನವನ್ನು ಹಾಳು ಮಾಡುತ್ತದೆ. ದುಃಖವು ಎಲ್ಲವನ್ನು ನಾಶಮಾಡುತ್ತದೆ. ದುಃಖಕ್ಕೆ ಸಮವಾದ ಶತ್ರುವೇ ಇಲ್ಲ.

**ಶಕ್ಯೋ ಆಪತಿತ ಸ್ಸೋಢುಂ ಪ್ರಹಾರೋ
ರಿಪುಹಸ್ತತಃ ।
ಸೋಢು ಮಾಪತಿತ ಶ್ಶೋಕಃ ಸುಸೂಕ್ಷ್ಮೋಪಿ
ನಶಕ್ಯತೇ ॥**

ಅಯೋಧ್ಯಾಕಾಂಡ, ಸರ್ಗ ೬೨, ಶ್ಲೋಕ ೧೬

ಶತ್ರುವಿನ ಕೈಯಿಂದ ಬೀಳುವ ಏಟನ್ನು ಸಹಿಸಬಹುದು. ಆದರೆ ಬಹು ಸೂಕ್ಷ್ಮವಾದ ದುಃಖ ತಡೆಯುವದಕ್ಕೆ ಆಗುವದಿಲ್ಲ.

**ಧರ್ಮಜ್ಞಾ ಶ್ಶ್ರುತಿ ಮಂತೋಪಿ ಛಿನ್ನಧರ್ಮಾರ್ಥ
ಸಂಶಯಃ ।
ಯತಯೋ ವೀರ ಮುಹ್ಯಂತಿ ಶೋಕ
ಸಂಮೂಢಚೇತಸಃ ॥**

ಅಯೋಧ್ಯಾಕಾಂಡ, ಸರ್ಗ ೬೨ ಶ್ಲೋಕ ೧೭

ವೇದ ಪಾರಂಗತರಾಗಿಯೂ ಧರ್ಮನಿರತರಾಗಿಯೂ ಧರ್ಮಾರ್ಥಗಳ ರಹಸ್ಯವನ್ನು ಚೆನ್ನಾಗಿ ಬಲ್ಲವರಾಗಿಯೂ ಇರುವ ಯತಿಗಳೂ ಸಹಾ ದುಃಖದಿಂದ ಮೋಹಿತರಾಗುತ್ತಾರೆ ಎಂಬುದಾಗಿ ಕೌಸಲ್ಯೆಯು ದಶರಥನಿಗೆ ಹೇಳಿದಳು.

**ಪುರುಷಸ್ಯಹಿ ಲೋಕೇಸ್ಮಿ ಶೋಕಶ್ಶೌರ್ಯಾಪ
ಕರ್ಷಣಃ ।**

ಯುದ್ಧಕಾಂಡ, ಸರ್ಗ ೯೭, ಶ್ಲೋಕ ೧೫

ಈ ಲೋಕದಲ್ಲಿ ಮನುಷ್ಯನು ದುಃಖದಲ್ಲಿ ಮಗ್ನನಾಗಿದ್ದರೆ ಅವನಲ್ಲಿರುವ ಶೌರ್ಯವನ್ನು ಆ ದುಃಖವು ನಾಶಮಾಡಿ ಅಬಲನನ್ನಾಗಿ ಮಾಡುವುದು.

ವಿನಷ್ಟೇವಾ ಪ್ರಣಷ್ಟೇವಾ ಶೋಕ ಸರ್ವಾರ್ಥ ನಾಶನಃ॥

ಯುದ್ಧಕಾಂಡ, ಸರ್ಗ ೭, ಶ್ಲೋಕ ೧೭

ನಷ್ಟವಾಗಿರಲಿ ಅಥವಾ ನಾಶವಾಗಿರಲಿ ದುಃಖವು ಸಕಲ ಪ್ರಯೋಜನಗಳನ್ನೂ ನಾಶಪಡಿಸುತ್ತದೆ ಎಂಬದಾಗಿ ಸುಗ್ರೀವನು ಶ್ರೀರಾಮಚಂದ್ರನಿಗೆ ವಿನಯದಿಂದ ಅರಿಕೆ ಮಾಡಿಕೊಂಡನು.

ನಿರುತ್ಸಾಹ

ನಿರುತ್ಸಾಹಸ್ಯ ದೀನಸ್ಯ ಶೋಕಪರ್ಯಾಕುಲಾತ್ಮನಃ ।
ಸರ್ವಾರ್ಥಾ ವ್ಯವಸೀದಂತಿ ವ್ಯಸನಂಚಾಧಿಗಚ್ಛತಿ ॥

ಯುದ್ಧಕಾಂಡ, ಸರ್ಗ ೨, ಶ್ಲೋಕ ೬

ಉತ್ಸಾಹವಿಲ್ಲದವನಾಗಿಯೂ, ದೀನನಾಗಿಯೂ ದುಃಖದಿಂದ ಪೀಡಿತನಾಗಿಯೂ ಇರುವವನಿಗೆ ಯಾವ ಪ್ರಯತ್ನ ಮಾಡಲೂ ಅಶಕ್ತತೆಯುಂಟಾಗಿ ಅವನಿಗೆ ಮುಂದೆ ಆಗಬಹುದಾದ ಪ್ರಯೋಜನಗಳು ನಾಶವಾಗುವುವಲ್ಲದೆ ಇಂದು ಅವನಿಗೆ ವ್ಯಸನವೂ ಹೆಚ್ಚುವುದು ಎಂಬುದಾಗಿ ಸುಗ್ರೀವನು ಶ್ರೀರಾಮನಿಗೆ ಹೇಳಿದನು.

ಶರಣಾಗತ ರಕ್ಷಣ

ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ।
ದೋಷೋ ಯದ್ಯಪಿ ತಸ್ಯಸ್ಯಾತ್ಸತಾಮೇತ
ದಗರ್ಹಿತಂ ॥

ಯುದ್ಧಕಾಂಡ, ಸರ್ಗ ೧೮, ಶ್ಲೋಕ ೩

ಎಷ್ಟು ಅಪರಾಧ ಮಾಡಿದ್ದರೂ ಶರಣಾಗತನಾಗಿ ಬಂದವನನ್ನು ಪ್ರಾಜ್ಞರು ಕೈ ಬಿಡುವದಿಲ್ಲ. ಹಾಗೆಯೇ ನಾನು ಬಿಡಲಾರೆನು. ಈ ಧರ್ಮವು ಸತ್ಪುರುಷರಿಗೆ ಪೂಜಾರ್ಹವಾದದ್ದು.

ಶ್ರೂಯತೇಪಿ ಕಪೋತೇನ ಶತ್ರುಶ್ಶರಣ ಮಾಗತಃ ।
ಅರ್ಚಿತಶ್ಚ ಯಥಾನ್ಯಾಯಂ ಸ್ವೈಶ್ಚ ಮಾಂಸೈರ್ನಿಮಂತ್ರಿತಃ ॥

ಯುದ್ಧ ಕಾಂಡ, ಸರ್ಗ ೧೮ ಶ್ಲೋಕ ೨೪

ಒಂದು ಕಪೋತ ಪಕ್ಷಿಯು ತನ್ನ ಶತ್ರುವಾದ ಬೇಡನು ತನಗೆ ಶರಣಾಗತನಾಗಿ ಬರಲು ಅವನನ್ನು ಆದರದಿಂದ ಪೂಜಿಸಿ ಆತನಿಗೆ ಆಹಾರವಾಗಿ ತನ್ನ ಮಾಂಸವನ್ನೇ ಕೊಟ್ಟು ಅವನನ್ನು ತೃಪ್ತಿಪಡಿಸಿತಲ್ಲವೆ ?

ಬದ್ಧಾಂಜಲಿ ಪುಟಂ ದೀನಂ ಯಾಚಂತಂ ಶರಣಾಗತಂ।
ನಹನ್ಯಾದಾನೃಶಂಸ್ಯಾರ್ಥ ಮಪಿಶತ್ರುಂ ಪರಂತಪ॥

ಯುದ್ಧ ಕಾಂಡ, ಸರ್ಗ ೧೮, ಶ್ಲೋಕ ೨೭

ಎಲೈ ಪರಂತಪನೆ, ಕೈ ಜೋಡಿಸಿಕೊಂಡು ಬದ್ಧಾಂಜಲಿಯಾಗಿ ದೀನನಾಗಿ ನನ್ನನ್ನು ಉದ್ಧರಿಸು ಎಂಬದಾಗಿ ಬೇಡಿಕೊಂಡು ಬಂದವನನ್ನು, ಅಕ್ರೌರ್ಯ ಧರ್ಮಪಾಲನೆಗಾಗಿ ಯಾವ ರೀತಿಯಿಂದಲೂ ಶರಣಾಗತನನ್ನು ವಧಿಸಬಾರದು.

ಆರ್ತೋವಾ ಯದಿವಾದೃಪ್ತಃ ಪರೇಷಾಂ ಶರಣಾಗತಃ।
ಅರಿಃ ಪ್ರಾಣಾನ್ ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ॥

ಯುದ್ಧ ಕಾಂಡ, ಸರ್ಗ ೧೮, ಶ್ಲೋಕ ೨೮

ಶರಣಾಗತನಾಗಿ ಬಂದವನು ಆರ್ತನಾಗಲೀ ಅಥವಾ ಗರ್ವಿತನಾಗಲಿ, ಪಂಡಿತನಾದವನು ತನ್ನ ಪ್ರಾಣವನ್ನಾದರೂ ಬಿಟ್ಟು ಶರಣಾಗತನನ್ನು ರಕ್ಷಿಸತಕ್ಕದ್ದು.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ॥
ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ ॥

ಯುದ್ಧಕಾಂಡ, ಸರ್ಗ ೧೮, ಶ್ಲೋಕ ೩೩

ಒಂದು ಸಲ ನಾನು ನಿನ್ನವನು ನನ್ನನ್ನು ಕಾಪಾಡು ಎಂಬದಾಗಿ ಹೇಳಿ ಶರಣಾಗತನಾದವನನ್ನು, ಆತನನ್ನು ಯಾರಿಂದಲೂ ಯಾವ ಭಯವೂ ಇಲ್ಲದ ಹಾಗೆ ರಕ್ಷಿಸುವದೇ ನನ್ನ ವ್ರತ ಎಂಬದಾಗಿ ವಿಭೀಷಣನನ್ನು ಪರಿಗ್ರಹಿಸುವಾಗ ಶ್ರೀರಾಮನು ಸುಗ್ರೀವನಿಗೆ ಹೇಳಿದನು.

ಆತ್ಮಹತ್ಯಾ ದೋಷ

ವಿನಾಶೇ ಬಹವೋ ದೋಷಾ ಜೀವನ್ ಭದ್ರಾಣಿ ಪಶ್ಯತಿ ।
ತಸ್ಮಾತ್ಪ್ರಾಣಾನ್ ಧರಿಷ್ಯಾಮಿ ಧ್ರುವೋಜೀವಿತ ಸಂಗಮಃ ॥

ಸುಂದರಕಾಂಡ, ಸರ್ಗ ೧೩, ಶ್ಲೋಕ ೪೭

ಪ್ರಾಣ ಬಿಟ್ಟರೆ ಬಹಳ ದೋಷಗಳು ಆಗುತ್ತವೆ. ಬದಕಿದ್ದರೆ ಪುರುಷನು ಯಾವಾಗಲಾದರೂ ಮಂಗಳವನ್ನು ನೋಡುವನು. ಇದರಿಂದಲೇ ನಾನು ಜೀವವನ್ನು ಉಳಿಸಿಕೊಂಡಿರುತ್ತೇನೆ. ಖಂಡಿತವಾಗಿ ಸೀತೆಯು ಜೀವದಿಂದಿರುವ

ದನ್ನು ನಾನು ನೋಡುವೆನು ಎಂಬುದಾಗಿ ಹನುಮಂತನು ನಿರ್ಧರಿಸಿದನು.

ಕೃತಜ್ಞತೆ

ಕೃತಂ ಹಿ ಪ್ರಿಯ ಮಸ್ಮಾಕಂ ರಾಘವೇಣ ಮಹಾತ್ಮನಾ ।
ತಸ ಚೇತ್ಪ್ರತಿ ಕಾರೋಽಸ್ತಿ ಸಫಲಂ ಜೀವಿತಂ ಭವೇತ್ ॥

ಕಿಷ್ಕಿಂಧಾಕಾಂಡ, ಸರ್ಗ ೪೦, ಶ್ಲೋಕ ೬

ಮಹಾತ್ಮನಾದ ರಾಮನು ಮೊದಲೇ ನನಗೆ ಉಪಕಾರವನ್ನು ಮಾಡಿರುವನು. ಅದಕ್ಕೆ ತಕ್ಕಂತೆ ನಾವು ಅವನಿಗೆ ಪತ್ಯುಪಕಾರವನ್ನು ಮಾಡಿದ ಹೊರತು ನಮ್ಮ ಜನ್ಮವು ಸಾರ್ಥಕವಾಗಲಾರದು ಎಂಬದಾಗಿ ಸುಗ್ರೀವನು ಶತಬಲಿ ಮುಂತಾದ ವಾನರರಿಗೆ ಹೇಳಿದನು.

ಆಶೀರ್ವಾದ

ವೃದ್ಧಾನಾಂ ಧರ್ಮಶೀಲಾನಾಂ ರಾಜರ್ಷೀಣಾಂ ಮಹಾತ್ಮನಾಂ ।
ಪ್ರಾಪ್ನುಹ್ಯಾಯುಶ್ಚ ಕೀರ್ತಿಂಚ ಧರ್ಮಂಚೋಪ ಹಿತಂ ಕುಲೆ ॥

ಅಯೋಧ್ಯಾಕಾಂಡ, ಸರ್ಗ ೨೦, ಶ್ಲೋಕ ೩೩

ಎಲೈ ರಾಮನೆ, ವೃದ್ಧರಾಗಿಯೂ ಧಾರ್ಮಿಕರಾಗಿಯೂ ಮಹಾತ್ಮರಾಗಿಯೂ ಇರುವ ರಾಜಋಷಿಗಳಂತೆ ನೀನು

ದೀರ್ಘಾಯುಸ್ಸನ್ನೂ ಸತ್ಕೀರ್ತಿಯನ್ನೂ ಹೊಂದಿ ಕುಲಕ್ಕೆ ತಕ್ಕ ಧರ್ಮವನ್ನು ನಡಿಸುವವನಾಗು.

**ಯಂ ಪಾಲಯಸಿ ಧರ್ಮಂತ್ವಂ ಧೃತ್ಯಾಚ
ನಿಯಮೇನಚ ।
ಸ ವೈರಾಘವಶಾರ್ದೂಲ ಧರ್ಮಸ್ತ್ವಾ ಮಭಿರಕ್ಷತು ॥**

ಅಯೋಧ್ಯಾಕಾಂಡ, ಸರ್ಗ ೨೫, ಶ್ಲೋಕ ೩

ಧೈರ್ಯದಿಂದಲೂ ನಿಯಮದಿಂದಲೂ ಯಾವ ಧರ್ಮವನ್ನು ಕಾಪಾಡುತ್ತಾ ಬಂದೆಯೋ ಆ ಧರ್ಮದೇವತೆಯೇ ನಿನ್ನನ್ನು ಕಾಪಾಡಲಿ.

**ಪಿತೃಶುಶ್ರೂಷಯಾ ಪುತ್ರ ಮಾತೃ ಶುಶ್ರೂಷಯಾ
ತಥಾ ।
ಸತ್ಯೇನಚ ಮಹಾಬಾಹೋ ಚಿರಂಜೀವಾಭಿ ರಕ್ಷಿತಃ ॥**

ಅಯೋಧ್ಯಾಕಾಂಡ, ಸರ್ಗ ೨೫, ಶ್ಲೋಕ ೬

ಮಗನೇ, ನಿನ್ನ ಪಿತೃಶುಶ್ರೂಷೆಯೂ ಮಾತೃ ಶುಶ್ರೂಷೆಯೂ ನಿನ್ನ ಸತ್ಯ ಸಂಧತೆಯೂ ನಿನ್ನನ್ನು ರಕ್ಷಿಸಿ ನಿನಗೆ ಚಿರಜೀವವನ್ನು ಕೊಡಲಿ.

**ಶ್ರೇಯಸೇ ವೃದ್ಧಯೇ ತಾತ ಪುನರಾಗಮನಾಯ ಚ।
ಗಚ್ಛಸ್ವಾರಿಷ್ಟ ಮವ್ಯಗ್ರಂ ಪಂಥಾನಮಕುತೋ
ಭಯಂ ॥**

ಅಯೋಧ್ಯಾಕಾಂಡ, ಸರ್ಗ ೩೪, ಶ್ಲೋಕ ೩೧

ಪಾರ ಲೌಕಿಕ ಫಲಕ್ಕಾಗಿಯೂ, ಇಹಲೋಕದ ಅಭ್ಯುದಯಕ್ಕಾಗಿಯೂ ಈ ವನವಾಸ ಮುಗಿಸಿಕೊಂಡು ಪುನಹ ಇಲ್ಲಿಗೆ ಬಾ. ನೀನು ಹೋಗತಕ್ಕ ಮಾರ್ಗಗಳೆಲ್ಲವೂ

ಮಂಗಳಕರವಾಗಿರಲಿ. ನಿನಗೆ ದಾರಿಯಲ್ಲಿ ಯಾವದೊಂದು ಭಯವೂ ಇಲ್ಲದಿರಲಿ, ನೀನು ಸುಖವಾಗಿ ಹಿಂದಿರುಗಿ ಬರುವ ವರೆಗೂ ನಿನಗೆ ಕ್ಷೇಮ ಉಂಟಾಗಲಿ.

ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಂ।
ಅಯೋಧ್ಯಾಮಟವೀಂ ವಿದ್ಧಿ ಗಚ್ಛತಾತ ಯಥಾ
ಸುಖಂ ॥

ಅಯೋಧ್ಯಾಕಾಂಡ, ಸರ್ಗ ೪೦, ಶ್ಲೋಕ

ರಾಮನನ್ನು ದಶರಥನನ್ನಾಗಿಯೂ ಸೀತೆಯನ್ನೇ ನಾನೆಂತಲೂ, ಅಡವಿಯೇ ಅಯೋಧ್ಯೆ ಎಂತಲೂ ಭಾವಿಸಿ ಸುಖವಾಗಿ ಹೋಗಿ ಬಾ.

ತವ ಕಲ್ಯಾಣ ಋಚಯಃ ಕಪಿ ಮುಖ್ಯಾಃ
ಸಮಾಗತಾಃ ।
ಮಂಗಳಂ ಕಾರ್ಯ ಸಿದ್ಧ್ಯರ್ಥಂ ಕರಿಷ್ಯಂತಿ
ಸಮಾಹಿತಾಃ ॥

ಕಿಷ್ಕಿಂಧಾಕಾಂಡ, ಸರ್ಗ ೬೭, ಶ್ಲೋಕ ೩೩-೩೪

ಈ ವಾನರರೆಲ್ಲರೂ ಸೇರಿ ನಿನಗೆ ಮಂಗಳವನ್ನು ಕೋರುತ್ತಾ, ನಿನ್ನ ಕಾರ್ಯ ಸಿದ್ಧಿಗಾಗಿ ಬಹಳ ಅಕ್ಕರೆಯಿಂದ ಮಂಗಳಾ ಶಾಸನವನ್ನು ಮಾಡುವರು ಎಂಬದಾಗಿ ಜಾಂಬವನು ಆಂಜನೇಯನಿಗೆ ಹೇಳಿದನು.

ಶ್ರೀ ಬಾಲರಾಮಾಯಣಂ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೆ॥

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೆ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥

ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ ॥

ಅಂಜನಾನಂದನಂ ವೀರಂ ಜಾನಕೀ ಶೋಕನಾಶನಂ ।
ಕಪೀಶಮಕ್ಷಹಂತಾರಂ ವಂದೇ ಲಂಕಾ ಭಯಂಕರಂ ॥

ವೇದವೇದ್ಯೆ ಪರೆ ಪುಂಸಿ ಜಾತೆ ದಶರಥಾತ್ಮಜೆ ।
ವೇದಃ ಪ್ರಾಚೇತನಾ ದಾಸೀತ್ಸಾಕ್ಷಾದ್ರಾಮಾಯಣಾತ್ಮನಾ ॥

ಯಃ ಕರ್ಣಾಂಜಲಿ ಸಂಪುಟೈ ರಹರಹಸ್ಸಮ್ಯಕ್ಪಿಬತ್ಯಾದರಾ
ದ್ವಾಲ್ಮೀಕೇರ್ವದನಾರವಿಂದಗಳಿತಂ ರಾಮಾಯಣಾಖ್ಯಂ ಮಧು॥
ಜನ್ಮವ್ಯಾಧಿ ಜರಾ ವಿಪತ್ತಿ ಮರಣೈ ರತ್ಯಂತ ಸೋಪದ್ರವಂ
ಸಂಸಾರಂ ಸವಿಹಾಯ ಗಚ್ಛತಿ ಪುಮಾನ್ವಿಷ್ಣೋಃಪದಂ ಶಾಶ್ವತಂ॥

ತಪಸ್ಸ್ವಾಧ್ಯಾಯನಿರತಂ ತಪಸ್ವೀ
ವಾಗ್ವಿದಾಂ ವರಂ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿ ರ್ಮುನಿ ಪುಂಗವಂ॥

ಮನಶ್ಶುದ್ಧಿಗೆ ಕಾರಣಗಳಾದ ತಪಸ್ಸೇ ಮೊದಲಾದ ಕರ್ಮಗಳನ್ನೂ, ವೇದಾಧ್ಯಯನವನ್ನೂ ಯಾವಾಗಲೂ ಎಡೆ ಬಿಡದೆ ಅಕ್ಕರೆಯಿಂದ ನಡೆಸುವನಾಗಿ, ಶಾಸ್ತ್ರಜ್ಞಾನವುಳ್ಳವರಲ್ಲಿ ಮೇಲೆನಿಸಿಕೊಂಡಿರುವ ನಾರದ ಮಹರ್ಷಿಯನ್ನು ಕುರಿತು, ಮಹಾ ತಪಸ್ವಿಯಾದ ವಾಲ್ಮೀಕಿಯು ವಿನಯದಿಂದ ಪ್ರಾರ್ಥಿಸಿ ಕೇಳಿದುದೇನೆಂದರೆ:

**ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ
ವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥**

ಈ ಕಾಲದಲ್ಲಿ ಭೂಲೋಕದಲ್ಲಿ ಸಮಸ್ತ ಸದ್ಗುಣ ಸಂಪನ್ನನಾದವನು ಯಾರು ? ನಿಜವಾದ ವೀರ್ಯವು ಯಾವನಲ್ಲಿರುವುದು ? ನಡೆಸಬೇಕಾದ ಧರ್ಮಗಳನ್ನೂ, ಬಿಡಬೇಕಾದ ಅಧರ್ಮಗಳನ್ನೂ ಚೆನ್ನಾಗಿ ಬಲ್ಲವನು ಯಾರು ? ಮಾಡಿದ ಉಪಕಾರವನ್ನು ಮರೆಯದೆ ಅವರು ಎಷ್ಟೇ ಅಪಕಾರವನ್ನು ಮಾಡಿದರೂ ಮನಸ್ಸಿಗೆ ತಂದುಕೊಳ್ಳದೆ ಇರುವವನಾರು ? ಸತ್ಯವನ್ನೇ ನುಡಿಯುವ ಗುಣವು ಯಾರಲ್ಲಿರುವುದು? ಉದ್ದೇಶಿಸಿದ ಸಂಕಲ್ಪವನ್ನು ಬಿಡದೆ ಸಾಧಿಸುವ ಧೃಡವಾದ ಪ್ರತಿಜ್ಞೆ ಯಾರಲ್ಲಿರುವುದು ?

**ಚಾರಿತ್ರೇಣ ಚ ಕೋಯುಕ್ತ ಸ್ಸರ್ವಭೂತೇಷು
ಕೋಹಿತಃ ।
ವಿದ್ವಾನ್ಕಃ ಕಸ್ಸಮರ್ಥಶ್ಚ ಕಶ್ಚೈಕ ಪ್ರಿಯದರ್ಶನಃ ॥**

ಸ್ವಲ್ಪವೂ ಲೋಪವಿಲ್ಲದಂತೆ ವಂಶಪಾರಂಪರ್ಯವಾಗಿ ಬಂದ ಧರ್ಮಗಳನ್ನು ನಡೆಸಿಕೊಂಡು ಬರುವವನಾರು ? ಸಮಸ್ತ ಪ್ರಾಣಿಗಳನ್ನೂ ತನ್ನಂತೆಯೇ ಭಾವಿಸಿ ಅವರಿಗೆ ಹಿತವಾಗಿರುವವನಾರು ? ವಿದ್ವಾಂಸನು ಯಾರು? ಇತರರಿಗೆ ಸಾಧ್ಯವಲ್ಲದ ಎಂತಹ ಕೆಲಸವನ್ನಾದರೂ ಸಾಧಿಸಿ ಕೊನೆಗಾಣಿಸುವ ಸಾಮರ್ಥ್ಯ ಯಾರಿಗಿರುವುದು ? ನೋಡಿದಕೂಡಲೆ ಎಲ್ಲರಿಗೂ ಮನಸ್ಸಿಗೆ ಪ್ರೀತಿಯುಂಟಾಗುವಂತಹ ಸೌಮ್ಯವಾದ ರೂಪವು ಯಾರಿಗಿರುವುದು ?

ಆತ್ಮವಾನ್ ಕೋ ಜಿತ ಕ್ರೋಧೋ ದ್ಯುತಿಮಾನ್
ಕೋ ನಸೂಯಕಃ ||
ಕಸ್ಯಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೆ ||

ತನ್ನನ್ನು ತಾನು ತಿಳಿದವನಾರು? ಜಯಿಸಲ್ಪಟ್ಟ ಕ್ರೋಧ ಉಳ್ಳವನಾರು? ತೇಜಸ್ವಿಯಾರು? ಅಸೂಯೆ ಇಲ್ಲದವನಾರು? ಯಾವನ ಕೋಪಕ್ಕೆ ದೇವತೆಗಳೂ ಸಹಾ ಭಯ ಪಡುವರೋ ಅಂಥಾ ಪುರುಷನು ಯಾರು?

ಏತದಿಚ್ಛಾಮ್ಯಹಂ ಶ್ರೋತುಂ ಪರಂ
ಕೌತೂಹಲಂ ಹಿ ಮೆ ||
ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂ
ವಿಧಂ ನರಂ ||

ಇಂಥಾ ಮಹಾಪುರುಷನನ್ನು ತಿಳಿಯಬೇಕೆಂದು ನನಗೆ ಬಹಳ ಲವಲವಿಕೆ ಇರುವುದು. ಎಲೈ ಮಹರ್ಷಿಯೆ! ನೀನು ಮಹಾ ಜ್ಞಾನಿಯಾದುದರಿಂದ ಇದನ್ನು ತಿಳಿದು ಹೇಳಲು ನೀನೇ ಸಮರ್ಥನು. ಆದುದರಿಂದ ಕೃಪೆಯಿಟ್ಟು ನನಗೆ ಹೇಳಬೇಕು ಎಂದು ವಾಲ್ಮೀಕಿಯು ಪ್ರಾರ್ಥಿಸಿ ಕೇಳಲು:

ಶ್ರುತ್ವಾ ಚೈತತ್ತ್ರಿಲೋಕಜ್ಞೋ
ವಾಲ್ಮೀಕೇರ್ನಾರದೋ ವಚಃ ||
ಶ್ರೂಯತಾಮಿತಿ ಚಾಮಂತ್ರ್ಯ
ಪ್ರಹೃಷ್ಟೋ ವಾಕ್ಯಮಬ್ರವೀತ್ ||

ತ್ರಿಲೋಕಜ್ಞನಾದ ನಾರದನು ಬಹಳ ಸಂತೋಷದಿಂದ ವಾಲ್ಮೀಕಿಯನ್ನು ಕುರಿತು ಒಳ್ಳೇದು ಕೇಳುವಂಥಾವನಾಗು ಎಂದು, ಹೀಗೆಂದು ನುಡಿದನು:

ಬಹವೋ ದುರ್ಲಭಾಶ್ಚೈವ
ಯೇತ್ವಯಾ ಕೀರ್ತಿತಾ ಗುಣಾಃ ||
ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತ
ಶ್ರೂಯತಾಂ ನರಃ ||

ಮುನಿಯೆ ! ನೀನು ಹೇಳಿದ ಗುಣಗಳೋ ಬಹಳವಾಗಿರುವವು. ಇವುಗಳೆಲ್ಲವೂ ಒಬ್ಬನಲ್ಲಿಯೇ ಸೇರಿರುವುದು ಬಹಳ ಕಷ್ಟ. ಆದರೂ ಅಂತಹ ನರಪುಂಗವನಾರು ಎಂಬುವದನ್ನು ಯೋಚಿಸಿ ಹೇಳುವೆನು.

ಇಕ್ಷ್ವಾಕು ವಂಶಪ್ರಭವೋ
ರಾಮೋನಾಮ ಜನೈಶ್ಶ್ರುತಃ |
ನಿಯತಾತ್ಮಾ ಮಹಾ ವೀರ್ಯೋ
ದ್ಯುತಿಮಾನ್ಧೃತಿರ್ಮಾ ವಶೀ ||

ಇಕ್ಷ್ವಾಕು ವಂಶದಲ್ಲಿ ಜನಿಸಿ ರಾಮನೆಂಬ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧನಾದ ನಿಯತಾತ್ಮನಾಗಿಯೂ ಮಹಾ ವೀರ್ಯವುಳ್ಳವನಾಗಿಯೂ ಅದ್ಭುತವಾದ ದೇಹಕಾಂತಿಯುಳ್ಳವನಾಗಿಯೂ ಧೈರ್ಯಶಾಲಿಯಾಗಿಯೂ ಇಂದ್ರಿಯ ನಿಗ್ರಹವುಳ್ಳವನಾಗಿಯೂ ಇರುವ ಮಹಾಪುರುಷನೊಬ್ಬನು ಇರುವನು.

ಬುದ್ಧಿಮಾನ್ನೀತಿಮಾನ್ವಾಗ್ಮೀ
ಶ್ರೀಮಾರ್ ಶತ್ರು ನಿಬರ್ಹಣಃ ||
ವಿಪುಲಾಂಸೋ ಮಹಾ ಬಾಹುಃ
ಕಂಬುಗ್ರೀವೋ ಮಹಾಹನುಃ||

ಆತನು ಬಹಳ ಬುದ್ಧಿವಂತನು, ನ್ಯಾಯ ತತ್ಪರನು. ಶ್ರೇಷ್ಠವಾದ ಮಾತುಳ್ಳವನು. ಸಂಪತ್ತಿನಿಂದ ಅಧಿಕ ಕಾಂತಿಯುಳ್ಳವನು. ಶತೃನಾಶಕನು ಅಗಲವಾದ ಮತ್ತು ಎತ್ತರವಾದ ಭುಜ ಶಿರಸ್ಸು ಉಳ್ಳವನು, ಮೊಣಕಾಲುವರೆವಿಗೂ ತೋಳುಗಳುಳ್ಳವನು. ಶಂಖದಂತೆ ಕಂಠವುಳ್ಳವನು, ಉಬ್ಬಿದ ದವಡೆಗಳುಳ್ಳವನು.

ಮಹೋರಸ್ಕೋ ಮಹೇಷ್ವಾಸೋ
ಗೂಢ ಜತ್ರುರರಿಂದಮಃ ।
ಆಜಾನುಬಾಹು ಸ್ಸುಶಿರಾ ಸ್ಸುಲಲಾಟ ಸ್ಸುವಿಕ್ರಮಃ ॥

ವಿಸ್ತಾರವಾದ ಎದೆಯುಳ್ಳವನು, ದೊಡ್ಡ ಬಿಲ್ಲನ್ನು ಧರಿಸುವದಕ್ಕೆ ತಕ್ಕ ದೇಹಕಟ್ಟುಳ್ಳನು ಮತ್ತು ಆತನು ಮಾಂಸಪುಷ್ಟಿಯಿಂದ ಗೂಢವಾದ ಭುಜದ ಕೀಲುಳ್ಳವನು. ಶತೃಭಯಂಕರನು, ಮೊಳಕಾಲಿನವರಿಗೆ ನೀಡಿದ ತೋಳುಗಳುಳ್ಳವನು. ಸುಂದರವಾದ ತಲೆ ವಿಸ್ತಾರವಾದ ಹಣೆ ಗಂಭೀರವಾದ ನಡೆಯುಳ್ಳವನು.

ಸಮಸ್ಸಮ ವಿಭಕ್ತಾಂಗ ಸ್ನಿಗ್ಧವರ್ಣಃ ಪ್ರತಾಪವಾ೯ ।
ಪೀನವಕ್ಷಾ ವಿಶಾಲಾಕ್ಷೋ ಲಕ್ಷ್ಮೀವಾ೯ ಶುಭಲಕ್ಷಣಃ॥

ಸಮ ಪ್ರಮಾಣವುಳ್ಳ ಆಕೃತಿ ಸಮವಾಗಿ ಒಂದಕ್ಕೊಂದು ಹೋಲುವ ಅವಯವಗಳು ನುಣುಪಾದ ದೇಹಕಾಂತಿ ಇತರರಿಗೆ ಅಂದರೆ ಶತೃಗಳ ಕಣ್ಣಿಗೆ ಭಯಂಕರವಾದ ಆಕೃತಿ ಉಳ್ಳವನು, ಅಗಲವಾದ ಎದೆಯುಳ್ಳವನು ವಿಶಾಲವಾದ

ಕಣ್ಣುಗಳುಳ್ಳವನು. ಸಂಪದ್ಯುಕ್ತನು ಶುಭ ಲಕ್ಷಣಗಳಿಂದ ಕೂಡಿದವನು.

ಧರ್ಮಜ್ಞಸ್ಸತ್ಯಸಂಧಶ್ಚ ಪ್ರಜಾನಾಂಚ ಹಿತೇರತಃ ।
ಯಶಸ್ವೀಜ್ಞಾನಸಂಪನ್ನಶ್ಶುಚಿರ್ವಶ್ಯಸ್ಸಮಾಧಿಮಾನ್

ಆತನು ಧರ್ಮವನ್ನು ತಿಳಿದವನು. ಸತ್ಯಸಂಧನು, ಪ್ರಜೆಗಳ ಹಿತದಲ್ಲಿಯೇ ಆಸಕ್ತಿಯುಳ್ಳವನು. ಆತನ ಕೀರ್ತಿಯು ಲೋಕ ಪ್ರಸಿದ್ಧವಾದದು. ಆತನು ಬಹು ಜ್ಞಾನಿಯು, ಪರಿಶುದ್ಧನು, ಪ್ರಜೆಗಳಿಗೆ ವಶ್ಯನು, ಯೋಗ ನಿಷ್ಠನು.

ಪ್ರಜಾಪತಿ ಸಮಃ ಶ್ರೀಮಾನ್ಧಾತಾ ರಿಪುನಿಷೂದನಃ ।
ರಕ್ಷಿತಾ ಜೀವ ಲೋಕಸ್ಯ ಧರ್ಮಸ್ಯ ಪರಿರಕ್ಷಿತಾ ॥

ಮತ್ತು ಆತನು ಬ್ರಹ್ಮನಿಗೆ ಸಮಾನನು, ಶ್ರೀಮಂತನು, ಜಗದ್ರಕ್ಷಕನು. ತನ್ನನ್ನು ನಂಬಿದವರನ್ನೂ ದ್ವೇಷಿಸುವವರನ್ನೂ ಸಂಹರಿಸತಕ್ಕವನು. ಸಮಸ್ತ ಪ್ರಾಣಿಗಳನ್ನೂ ಒಂದೇ ವಿಧವಾಗಿ ಕಾಪಾಡತಕ್ಕವನು. ತನ್ನ ಸ್ವಧರ್ಮವನ್ನು ಕಾಪಾಡ ತಕ್ಕವನು.

ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ ।
ವೇದವೇದಾಂಗ ತತ್ವಜ್ಞೋ ಧನುರ್ವೇದೇಚ ನಿಷ್ಠಿತಃ॥

ಮತ್ತು ತಾನು ತನ್ನ ಧರ್ಮವನ್ನು ಕಾಪಾಡಿಕೊಂಡು ಬರುವವನು. ಸ್ವಜನಗಳನ್ನು ಇನ್ನೂ ಚೆನ್ನಾಗಿ ಕಾಪಾಡ ತಕ್ಕವನು. ವೇದವೇದಾಂಗಗಳನ್ನು ಚೆನ್ನಾಗಿ ಬಲ್ಲವನು. ಸಮಸ್ತ ಶಸ್ತ್ರಾಸ್ತ್ರಗಳಲ್ಲಿ ನಿಪುಣನು.

ಸರ್ವಶಾಸ್ತ್ರಾರ್ಥ ತತ್ವಜ್ಞಃ ಸ್ಮೃತಿಮಾನ್ಪ್ರತಿಭಾನವಾನ್ ।
ಸರ್ವಲೋಕ ಪ್ರಿಯಸ್ಸಾಧು ರದೀನಾತ್ಮಾ ವಿಚಕ್ಷಣಃ ॥

ಸಮಸ್ತ ಶಾಸ್ತ್ರಗಳ ಅರ್ಥ ಮತ್ತು ತತ್ವಗಳನ್ನು ಚನ್ನಾಗಿ ಬಲ್ಲವನು. ಜ್ಞಾಪಕ ಶಕ್ತಿಯುಳ್ಳವನು, ಅಸಾಧಾರಣವಾದ ಬುದ್ಧಿ ವಿಕಾಸವುಳ್ಳವನು. ಸಮಸ್ತ ಭೂತಗಳಿಗೂ ಇಷ್ಟನಾದವನು, ಬಹಳ ಸಾಧುವಾಗಿದ್ದರೂ ದೈನ್ಯವನ್ನು ತೋರಿಸದ ಗಂಭೀರ ಸ್ವಭಾವವುಳ್ಳವನು. ಬಹಳ ಚತುರನು.

ಸರ್ವದಾಭಿ ಗತಸ್ಸದ್ಭಿ ಸ್ಸಮುದ್ರ ಇವ ಸಿಂಧುಭಿಃ ।
ಆರ್ಯಸ್ಸರ್ವ ಸಮಶ್ಚೈವ ಸದೈಕ ಪ್ರಿಯದರ್ಶನಃ ॥

ನದಿಗಳೆಲ್ಲವೂ ಸಮುದ್ರವನ್ನು ಹೇಗೋ ಹಾಗೆ, ಯಾವಾಗಲೂ ಸತ್ಪುರುಷರು ಆತನನ್ನು ಆಶ್ರಯಿಸಿರುವರು. ಆತನು ಲೋಕ ಪೂಜ್ಯನಾದರೂ ಎಲ್ಲರೊಡನೆಯೂ ಸಮನಾಗಿರುವನು. ಯಾವಾಗಲೂ ಒಂದೇ ಬಗೆಯ ಆಹ್ಲಾದವನ್ನುಂಟು ಮಾಡತಕ್ಕ ದೇಹ ಸೌಂದರ್ಯವುಳ್ಳವನು.

ಸಚ ಸರ್ವಗುಣೋಪೇತಃ ಕೌಸಲ್ಯಾನಂದ ವರ್ಧನಃ ।
ಸಮುದ್ರ ಇವ ಗಾಂಭೀರ್ಯೆ ಧೈರ್ಯೇಣ ಹಿಮವಾನಿವ॥

ಆತನು ಸಮಸ್ತ ಸದ್ಗುಣಗಳಿಂದ ಕೂಡಿದವನು. ಆತನೇ ಕೌಸಲ್ಯಾದೇವಿಯ ಹೊಟ್ಟೆಯಲ್ಲಿ ಹುಟ್ಟಿ ಆಕೆಗೆ ಅತ್ಯಾನಂದವನ್ನುಂಟು ಮಾಡಿದವನು. ಆತನು ಗಾಂಭೀರ್ಯದಲ್ಲಿ ಸಮುದ್ರಕ್ಕೂ ಧೈರ್ಯದಲ್ಲಿ ಹಿಮವತ್ ಪರ್ವತಕ್ಕೂ ಸಮಾನನು.

ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ಪ್ರಿಯ
ದರ್ಶನಃ।

ಕಾಲಾಗ್ನಿಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ॥

ವೀರ್ಯದಲ್ಲಿ ವಿಷ್ಣುವಿಗೆ ಸಮಾನನು. ನೋಡಿದವರ ಕಣ್ಣಿಗೆ ಚಂದ್ರನಂತೆ ಆಪ್ಯಾಯಮಾನನಾಗಿರುವನು. ಕೋಪ ಬಂದಾಗ ಪ್ರಳಯಾಗ್ನಿಗೆ ಸಮಾನನು. ಸೈರಣೆಯಲ್ಲಿ ಭೂದೇವಿಗೆ ಸಮಾನನು.

ಧನದೇನ ಸಮಸ್ತ್ಯಾಗೇ ಸತ್ಯೇ ಧರ್ಮ ಇವಾಪರಃ ।
ತಮೇವಂ ಗುಣಸಂಪನ್ನಂ ರಾಮಂ ಸತ್ಯ ಪರಾಕ್ರಮಂ॥

ಕೊಡುವದರಲ್ಲಿ ಕುಬೇರನಿಗೆ ಸಮಾನನು, ಸತ್ಯದಲ್ಲಿ ಬೇರೆಯಾದ ಧರ್ಮದಂತಿರುವನು. ಹೀಗೆ ಸರ್ವೋತ್ತಮವಾದ ಗುಣಗಳಿಂದ ಕೂಡಿ ಸತ್ಯ ಪರಾಕ್ರಮ ಉಳ್ಳವನಾಗಿ,

ಜ್ಯೇಷ್ಠಂ ಶ್ರೇಷ್ಠಗುಣೈರ್ಯುಕ್ತಂ ಪ್ರಿಯಂ ದಶರಥಸ್ಸುತಂ।
ಪ್ರಕೃತೀನಾಂ ಹಿತೈರ್ಯುಕ್ತಂ ಪ್ರಕೃತಿ ಪ್ರಿಯ
ಕಾಮ್ಯಯಾ ।
ಯೌವರಾಜ್ಯೇನ ಸಂಯೋಕ್ತು ಮೈಚ್ಛತ್ಪ್ರೀತ್ಯಾ
ಮಹೀಪತಿಃ ॥

ಶ್ರೇಷ್ಠವಾದ ಸದ್ಗುಣಗಳಿಂದ ಕೂಡಿ, ತನಗೆ ಪ್ರಿಯನಾಗಿಯೂ, ಹಿರಿಯ ಮಗನಾಗಿಯೂ ಇರುವ ಶ್ರೀರಾಮನಿಗೆ ತಂದೆಯಾದ ದಶರಥನು ಪ್ರಜೆಗಳ ಪ್ರೀತ್ಯರ್ಥವಾಗಿ ಯೌವ ರಾಜ್ಯಾಭಿಷೇಕವನ್ನು ಮಾಡಲು ಉದ್ದೇಶಿಸಿದನು.

ತಸ್ಯಾಭಿಷೇಕ ಸಂಭಾರಾ ನ್ದೃಷ್ಟ್ವಾ ಭಾರ್ಯಾಥ ಕೈಕಯಿ।
ಪೂರ್ವದತ್ತವರಾದೇವೀ ವರಮೇನಮಯಾಚತ ॥
ವಿವಾಸನಂಚ ರಾಮಸ್ಯ ಭರತಸ್ಯಾಭಿಷೇಚನಂ ॥

ಇದಕ್ಕಾಗಿ ಬೇಕಾದ ಸನ್ನಾಹಗಳನ್ನು ಮಾಡುತ್ತಿರುವುದನ್ನು ದಶರಥನ ಎರಡನೆಯ ಹೆಂಡತಿಯಾದ ಕೈಕೇಯಿಯು ನೋಡಿ ಹಿಂದೆ ಶಂಬರಾಸುರನ ಯುದ್ಧ ಕಾಲದಲ್ಲಿ ದಶರಥನಿಂದ ಎರಡು ವರಗಳನ್ನು ಪಡೆದಿದ್ದುದರಿಂದ ಆ ವರಗಳನ್ನು ಉಪಯೋಗಪಡಿಸಿಕೊಳ್ಳುವುದಕ್ಕೆ ಇದೇ ಸಮಯವೆಂದೆಣಿಸಿ ರಾಮನನ್ನು ಕಾಡಿಗೆ ಕಳುಹಿಸಬೇಕೆಂದೂ, ತನ್ನಲ್ಲಿ ಹುಟ್ಟಿದ ಭರತನಿಗೇ ಯೌವರಾಜ್ಯ ಪಟ್ಟಾಭಿಷೇಕವನ್ನು ಮಾಡಬೇಕೆಂದೂ ಪ್ರಾರ್ಥಿಸಿದಳು.

ಸಸತ್ಯ ವಚನಾದ್ರಾಜಾ ಧರ್ಮಪಾಶೇನ ಸಂಯುತಃ||
ವಿವಾಸಯಾಮಾಸ ಸುತಂ ರಾಮಂ ದಶರಥಃ ಸ್ಸುತಂ||

ಆ ದಶರಥನು ರಾಮನ ಪಟ್ಟಾಭಿಷೇಕಕ್ಕಾಗಿ ಸಮಸ್ತ ಸನ್ನಾಹಗಳನ್ನೂ ಸಿದ್ಧಪಡಿಸಿದ್ದರೂ, ಕೊಟ್ಟ ಭಾಷೆಗೆ ತಪ್ಪದವನಾದುದರಿಂದ, ಧರ್ಮ ಪಾಶಕ್ಕೆ ಕಟ್ಟುಬಿದ್ದು ರಾಮನನ್ನು ಅಡವಿಗೆ ಕಳುಹಿಸಿಬಿಟ್ಟನು.

ಸಜಗಾಮ ವನಂ ವೀರೋ ಪ್ರತಿಜ್ಞಾ
ಮನುಪಾಲಯನ್ ।
ಪಿತುರ್ವಚನ ನಿರ್ದೇಶಾ ತ್ಕೈಕೇಯಾಃ
ಪ್ರಿಯ ಕಾರಣಾತ್ ॥

ರಾಮನಾದರೊ ತನ್ನ ತಾಯಿಯಾದ ಕೈಕೇಯಿಯ ಇಷ್ಟಕ್ಕೆ ವಿರೋಧಿಸಿ ನಡೆಯಬಾರದೆಂಬ ಮಾತೃ ಭಕ್ತಿಯಿಂದಲೂ, ತಂದೆಯ ವಾಕ್ಯವನ್ನು ಮೀರಬಾರದೆಂಬ ವಿಧೇಯತೆಯಿಂದಲೂ, ಕಾಡಿಗೆ ಹೊರಟನು.

ತಂ ವ್ರಜಂತಂ ಪ್ರಿಯೋಭ್ರಾತಾ
ಲಕ್ಷ್ಮಣೋನು ಜಗಾಮಹ ।
ಸ್ನೇಹಾದ್ವಿನಯ ಸಂಪನ್ನ ಸ್ಸುಮಿತ್ರಾನಂದ ವರ್ಧನಃ॥

ದಶರಥನ ಮತ್ತೊಬ್ಬ ಹೆಂಡತಿಯಾದ ಸುಮಿತ್ರೆಯಲ್ಲಿ ಜನಿಸಿ ಅವಳಿಗೆ ಆತ್ಯಾನಂದವನ್ನುಂಟುಮಾಡಿದ ಲಕ್ಷ್ಮಣನೆಂಬುವನು ರಾಮನಿಗೆ ಪ್ರಿಯ ಸಹೋದರನಾಗಿಯೂ ಬಹಳ ವಿಶ್ವಾಸವುಳ್ಳವನಾಗಿಯೂ ಇದ್ದುದರಿಂದ ಆತನನ್ನು ಅಗಲಿರಲಾರದೆ ತಾನೂ ರಾಮನನ್ನು ಹಿಂಬಾಲಿಸಿ ಹೊರಟನು.

ಭ್ರಾತರಂ ದಯಿತೋ ಭ್ರಾತು ಸ್ಸೌಭ್ರಾತ್ರ
ಮನುದರ್ಶಯನ್ ॥

ಇದರಿಂದ ಲಕ್ಷ್ಮಣನಿಗೆ ಶ್ರೀರಾಮನು ಬಹು ಪ್ರೀತಿಯ ಸಹೋದರನು ಎಂಬ ಉದಾಹರಣೆಯು ಚೆನ್ನಾಗಿ ವ್ಯಕ್ತವಾಗುತ್ತದೆ.

ರಾಮಸ್ಯ ದಯಿತಾ ಭಾರ್ಯಾ ನಿತ್ಯಂ
ಪ್ರಾಣಸಮಾಹಿತಾ ।
ಜನಕಸ್ಯ ಕುಲೇಜಾತಾ ದೇವ ಮಾಯೇವ ನಿರ್ಮಿತಾ॥
ಸರ್ವಲಕ್ಷಣ ಸಂಪನ್ನಾ ನಾರೀಣಾ ಮುತ್ತಮಾ ವಧೂಃ।
ಸೀತಾಪ್ಯನುಗತಾ ರಾಮಂ ಶಶಿನಂ ರೋಹಿಣೀಯಥಾ॥

ದೇವ ಮಾಯೆಯಿಂದ ಅವತಾರ ಮಾಡಿದವಳೋ ಎಂಬಂತೆ ಜನಕ ವಂಶದಲ್ಲಿ ಹುಟ್ಟಿ, ಶ್ರೀರಾಮನಿಗೆ ನಿತ್ಯವೂ ಪ್ರಾಣ ಸಮಾನಳಾದ ಪ್ರಿಯ ಪತ್ನಿಯಾಗಿ, ಸಮಸ್ತ ಲಕ್ಷಣಗಳಿಂದ ಪತಿವ್ರತಾ ಸ್ತ್ರೀಯರೊಳಗೆ ಅಗ್ರೇಸರಳಾದ ಸೀತೆಯೂ

ರಾಮನನ್ನು ಅಗಲಿರಲಾರದೆ ಚಂದ್ರನನ್ನು ರೋಹಿಣಿಯು ಹಿಂಬಾಲಿಸಿದಂತೆ, ಆತನನ್ನು ಹಿಂಬಾಲಿಸಿದಳು.

ಪೌರೈರನುಗತೋ ದೂರಂ ಪಿತ್ರಾ ದಶರಥೇನ ಚ ।
ಶೃಂಗಿಬೇರ ಪುರೇ ಸೂತಂ ಗಂಗಾಕೂಲೇ
ವ್ಯಸರ್ಜಯತ್ ॥

ಪಟ್ಟಣದ ನಿವಾಸಿಗಳೆಲ್ಲರೂ ರಾಮನನ್ನು ಬಹುದೂರ ಹಿಂಬಾಲಿಸಿದರು. ದಶರಥನೂ ಸಹಾ ರಾಮನನ್ನು ಕೊಂಚ ದೂರ ಹಿಂಬಾಲಿಸಿ ಹಿಂದಿರುಗಿದನು. ರಾಮನು ತನ್ನ ಹಿಂದೆ ಬರುತ್ತಿದ್ದ ಪಟ್ಟಣವಾಸಿಗಳನ್ನು ಹಿಂದಕ್ಕೆ ಕಳುಹಿಸಿ, ಗಂಗಾ ತೀರದಲ್ಲಿದ್ದ ಶಂಗಿಬೇರವೆಂಬ ಪಟ್ಟಣವನ್ನು ಸೇರಿದನು. ಅಲ್ಲಿಂದಲೇ ತನ್ನನ್ನು ಅನುಸರಿಸಿಕೊಂಡು ಬರುತ್ತಿದ್ದ ಸುಮಂತ್ರನೆಂಬ ಸಾರಥಿಯನ್ನು ಹಿಂದಕ್ಕೆ ಕಳುಹಿಸಿಬಿಟ್ಟನು.

ಗುಹಮಾಸಾದ್ಯ ಧರ್ಮಾತ್ಮಾ ನಿಷಾದಾಧಿಪತಿಂ ಪ್ರಿಯಂ।
ಗುಹೇನ ಸಹಿತೋ ರಾಮೋ ಲಕ್ಷ್ಮಣೇನ
ಚ ಸೀತಯಾ ॥
ತೇ ವನೇನ ವನಂಗತ್ವಾ ನದೀಸ್ತೀರ್ತ್ವಾ ಬಹೂದಕಾಃ॥
ಚಿತ್ರಕೂಟ ಮನುಪ್ರಾಪ್ಯ ಭರದ್ವಾಜಸ್ಯ ಶಾಸನಾತ್॥
ರಮ್ಯಮಾವಸಥಂ ಕೃತ್ವಾ ರಮಮಾಣಾ ವನೇತ್ರಯಃ॥
ದೇವಗಂಧರ್ವ ಸಂಕಾಶಾಸ್ತತ್ರತೇ ನ್ಯವಸನ್ಸುಖಂ ॥

ಆಮೇಲೆ ಬೇಡರಿಗೆಲ್ಲಾ ಅಧಿಪತಿಯೂ ತನಗೆ ಪ್ರಿಯ ಸಖನೂ ಆಗಿದ್ದ ಗುಹ, ಲಕ್ಷ್ಮಣ ಮತ್ತು ಸೀತೆ ಇವರೊಡನೆ ಧರ್ಮಾತ್ಮನಾದ ರಾಮನು ಅಡವಿಯಿಂದ ಅಡವಿಗೆ

ಬಂದು ಬಹಳ ಜಲಸಮೃದ್ಧಿಯಿಂದ ಕೂಡಿದ ನದಿಗಳನ್ನು ದಾಟಿ, ಭರದ್ವಾಜಾಶ್ರಮಕ್ಕೆ ಬಂದು, ಅವರ ಆಜ್ಞೆಯಂತೆ ಚಿತ್ರಕೂಟವೆಂಬ ಪ್ರದೇಶವನ್ನು ಸೇರಿ ಅಲ್ಲಿ ಮನೋಹರವಾದ ಪರ್ಣಶಾಲೆಯನ್ನು ಮಾಡಿಕೊಂಡು ದೇವಗಂಧರ್ವರಿಗೆ ಸಮಾನರಾದ ಸೀತಾ, ಲಕ್ಷ್ಮಣ, ಶ್ರೀರಾಮರು ಆ ಆಶ್ರಮದಲ್ಲಿ ಸುಖವಾಗಿ ವಾಸವಾಗಿದ್ದರು.

ಚಿತ್ರಕೂಟಂ ಗತೇ ರಾಮೇ ಪುತ್ರ ಶೋಕಾತುರ ಸ್ತಥಾ।
ರಾಜಾ ದಶರಥ ಸ್ಸ್ವರ್ಗಂ ಜಗಾಮ ವಿಲಪ್ನ ಸುತಂ ॥

ರಾಮನು ಚಿತ್ರಕೂಟಕ್ಕೆ ಬಂದು ನೆಲಸಿದ ಕೆಲವು ದಿನಗಳಲ್ಲಿಯೇ ರಾಜನಾದ ದಶರಥನು ಪುತ್ರ ವಿರಹ ದುಃಖದಿಂದ ವಿಹ್ವಲನಾಗಿ ಸ್ವರ್ಗಸ್ಥನಾದನು.

ಮೃತೇತು ತಸ್ಮಿನ್ ಭರತೋ ವಸಿಷ್ಠ
ಪ್ರಮುಖೈರ್ದ್ವಿಜೈಃ ॥
ನಿಯುಜ್ಯಮಾನೋ ರಾಜ್ಯಾಯ
ನೈಚ್ಛದ್ರಾಜ್ಯಂ ಮಹಾಬಲಃ ॥

ನಂತರ ವಸಿಷ್ಠರೇ ಮುಂತಾದ ಮುಖ್ಯ ಬ್ರಾಹ್ಮಣರು ಈ ರಾಜ್ಯವನ್ನು ಭರತನಿಗೆ ಕೊಟ್ಟು ಅವನನ್ನೇ ರಾಜನನ್ನಾಗಿ ಮಾಡಲು ಏರ್ಪಾಟು ಮಾಡಿದರಾದರೂ ಮಹಾ ಬಲಿಷ್ಠನಾದ ಭರತನು ತಾನು ಸಮರ್ಥನಾಗಿದ್ದರೂ, ತಾನು ಕಿರಿಯವನಾದುದರಿಂದ ಈ ರಾಜ್ಯವನ್ನು ಆಳಲು ಒಪ್ಪಲಿಲ್ಲ.

ಸ ಜಗಾಮ ವನಂ ವೀರೋ ರಾಮಪಾದ ಪ್ರಸಾದಕಃ।
ಗತ್ವಾತು ಸ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಂ॥

**ಅಯಾಚದ್ಭ್ರಾತರಂ ರಾಮಮಾರ್ಯಭಾವ ಪುರಸ್ಕೃತಃ।
ತ್ವಮೇವ ರಾಜಾ ಧರ್ಮಜ್ಞ ಇತಿರಾಮಂ
ವಚೋಬ್ರವೀತ್ ॥**

ರಾಮನನ್ನೇ ಸಮಾಧಾನಪಡಿಸಿ ಹಿಂದಕ್ಕೆ ಕರೆತಂದು ರಾಜ್ಯದಲ್ಲಿರಿಸಬೇಕೆಂಬ ಉದ್ದೇಶದಿಂದ ತಾನೂ ಕಾಡಿಗೆ ಹೊರಟು, ರಾಮನಿರುವ ಸ್ಥಳಕ್ಕೆ ಬಂದು, ಧರ್ಮಜ್ಞನಾದ ರಾಮನೇ ನೀನೇ ರಾಜನು, ನೀನೇ ರಾಜ್ಯವನ್ನು ವಹಿಸ ಬೇಕೆಂದು ಅನೇಕ ವಿಧದಲ್ಲಿ ಅಣ್ಣನಾದ ರಾಮನನ್ನು ಪ್ರಾರ್ಥಿಸಿದನು.

**ರಾಮೋಪಿ ಪರಮೋದಾರಸ್ಸುಮುಖ
ಸ್ಸುಮಹಾಯಶಾಃ ।
ನಚೈಚ್ಛತ್ಪಿತುರಾದೇಶಾದ್ರಾಜ್ಯಂ
ರಾಮೋ ಮಹಾಬಲಃ ॥**

ಶ್ರೀರಾಮನಾದರೋ ತನ್ನನ್ನು ಬೇಡುವವರ ಕೋರಿಕೆ ಗಳನ್ನು ನೆರವೇರಿಸುವದರಲ್ಲಿ ಬಹಳ ಉದಾರಿಯೂ, ಸೌಮ್ಯ ರೂಪಿಯೂ ಆದರೂ, ಈ ವಿಷಯದಲ್ಲಿ ಬಹಳ ಕೀರ್ತಿಯನ್ನು ಹೊಂದಿದ್ದರೂ, ತನ್ನ ತಂದೆಯ ಆಜ್ಞೆಯೆಂಬ ನಿರ್ಬಂಧದಿಂದ ಮಹಾ ಬಲಿಷ್ಠನಾದ ರಾಮನು ಭರತನಿಂದ ರಾಜ್ಯವನ್ನು ವಹಿಸುವದಕ್ಕೆ ಇಷ್ಟಪಡಲಿಲ್ಲ.

**ಪಾದುಕೇ ಚಾಸ್ಯ ರಾಜ್ಯಾಯ ನ್ಯಾಸಂ ದತ್ವಾ
ಪುನಃಪುನಃ ।
ನಿವರ್ತಯಾಮಾಸ ತತೋ ಭರತಂ ಭರತಾಗ್ರಜಃ ॥**

ನಂತರ ಭರತನ ಅಣ್ಣನಾದ ರಾಮನು, ಭರತನಿಗೆ ತಾವಿಬ್ಬರೂ ಪಿತೃವಾಕ್ಯ ಪರಿಪಾಲನೆ ಮಾಡುವದು ಕರ್ತವ್ಯವೆಂಬ ವಿಷಯವಾಗಿ ಅನೇಕ ವಿಧ ಪ್ರಮಾಣಗಳಿಂದ ವಿಶದಪಡಿಸಿ, ಕೊನೆಗೆ ತನ್ನ ಆ ತಮ್ಮನ ಇಷ್ಟದಂತೆ ತನಗೆ ಬದಲಾಗಿ ತನ್ನ ಪಾದುಕೆಗಳನ್ನು ಕೊಟ್ಟು ಬಾರಿಬಾರಿಗೂ ಭರತನನ್ನು ಸಮಾಧಾನಪಡಿಸಿ ಹಿಂದಿರುಗಿಸಿದನು.

ಸಕಾಮ ಮನವಾಪ್ಯೈವ ರಾಮಪಾದಾವುಪಸ್ಪೃರ್ಶ ।
ನಂದಿಗ್ರಾಮೇ ಕರೋದ್ರಾಜ್ಯಂ ರಾಮಾಗಮನ
ಕಾಂಕ್ಷಯಾ ॥

ಭರತನು ತನ್ನ ಕೋರಿಕೆಯಂತೆ ರಾಮನನ್ನು ಹಿಂದಿರುಗಿಸಲು ಆಗದೆ, ರಾಮಪಾದುಕೆಗಳನ್ನು ಗೌರವಿಸಿ, ಸಿಂಹಾಸನದ ಮೇಲೆ ಇಟ್ಟು ಅವುಗಳ ಪ್ರತಿನಿಧಿಯಾಗಿ, ರಾಮನಿಲ್ಲದ ಅಯೋಧ್ಯೆಯಲ್ಲಿರಲು ಇಷ್ಟಪಡದೆ ಸಮೀಪದಲ್ಲಿದ್ದ ನಂದಿಗ್ರಾಮವೆಂಬ ಊರಿನಲ್ಲಿ ರಾಮನ ಬರುವಿಕೆಗಾಗಿ ನಿರೀಕ್ಷಿಸುತ್ತಾ ಅಲ್ಲಿಯೇ ರಾಜ್ಯಭಾರ ಮಾಡುತ್ತಿದ್ದನು.

ಗತೇತು ಭರತೆ ಶ್ರೀಮಾನ್ಸತ್ಯಸಂಧೋ ಜಿತೇಂದ್ರಿಯಃ।
ರಾಮಸ್ತು ಪುನರಾಲಕ್ಷ್ಯ ನಾಗರಸ್ಯ ಜನಸ್ಯ ಚ ॥
ತತ್ರಾಗಮನ ಮೇಕಾಗ್ರೋ ದಂಡಕಾನ್ಪ್ರವಿವೇಶಹ ॥

ಭರತನು ಅಯೋಧ್ಯೆಗೆ ಹಿಂದಿರುಗಿದ ನಂತರ, ಸಂಪದ್ಯುಕ್ತನಾದ, ಸತ್ಯಸಂಧನಾದ ಮತ್ತು ಜಿತೇಂದ್ರಿಯನಾದ ರಾಮನಾದರೋ ಪುನಹ ಅಯೋಧ್ಯಾ ಪಟ್ಟಣದ ಮತ್ತು ನೆರೆಹೊರೆ ಗ್ರಾಮಗಳ ಜನಗಳು ಬರುವರೆಂಬ ಶಂಕೆಯಿಂದ

ದೃಢವಾದ ಮನಸ್ಸಿನಿಂದ ಚಿತ್ರಕೂಟ ಪ್ರದೇಶಬಿಟ್ಟು ದಂಡಕಾರಣ್ಯಕ್ಕೆ ಸೀತಾಲಕ್ಷ್ಮಣರೊಡನೆ ಹೊರಟನು.

ಪ್ರವಿಶ್ಯತು ಮಹಾರಣ್ಯಂ ರಾಮೋ
ರಾಜೀವಲೋಚನಃ ।
ವಿರಾಧಂ ರಾಕ್ಷಸಂ ಹತ್ವಾ ಶರಭಂಗಂ ದದರ್ಶ ಹ ॥

ನಂತರ ಕಮಲದಳದಂತೆ ಅಗಲವಾದ ಕಣ್ಣುಗಳುಳ್ಳ ಶ್ರೀರಾಮನು ದಾರಿಯಲ್ಲಿ ವಿರಾಧನೆಂಬ ರಾಕ್ಷಸನನ್ನು ಸಂಹರಿಸಿ ಶರಭಂಗ ಮಹರ್ಷಿಗಳ ಆಶ್ರಮಕ್ಕೆ ಬಂದು ಅವರನ್ನು ಸಂದರ್ಶಿಸಿದನು.

ಸುತೀಕ್ಷ್ಣಂ ಚಾಪ್ಯಗಸ್ತ್ಯಂಚ ಅಗಸ್ತ್ಯ ಭ್ರಾತರಂತಥಾ।
ಅಗಸ್ತ್ಯವಚನಾಚ್ಚೈವ ಜಗ್ರಾಹೈಂದ್ರಂ ಶರಾಸನಂ ।
ಖಡ್ಗಂ ಚ ಪರಮಪ್ರೀತ ಸ್ತೂಣೀ
ಚಾಕ್ಷಯ ಸಾಯಕೌ ॥

ಹಾಗೆಯೇ ಸುತೀಕ್ಷ್ಣರನ್ನೂ ಅಗಸ್ತ್ಯರನ್ನೂ ಅವರ ತಮ್ಮಂದಿರಾದ ಸುದರ್ಶನರೆಂಬ ಋಷಿಗಳನ್ನೂ ದರ್ಶನ ಮಾಡಿದನು. ನಂತರ ಪುನಃ ಅಗಸ್ತ್ಯರ ಆಶ್ರಮಕ್ಕೆ ಬಂದು ಅವರ ಪ್ರಾರ್ಥನೆಯಂತೆ ಇಂದ್ರನಿಂದ ಅವರಿಗೆ ಬಂದಿದ್ದ ಬಿಲ್ಲನ್ನೂ ಕತ್ತಿಯನ್ನೂ ಅಕ್ಷಯ ಬಾಣಗಳುಳ್ಳ ಎರಡು ಬತ್ತಳಿಕೆಗಳನ್ನೂ ಅಗಸ್ತ್ಯರಿಂದ ಶ್ರೀರಾಮನು ಪಡೆದನು.

ವಸತಸ್ತಸ್ಯ ರಾಮಸ್ಯ ವನೇ ವನ ಚರೈಸ್ಸಹ ।
ಋಷಯೋಭ್ಯಾಗಮನ್ ಸರ್ವೆ ವಧಾಯಾ
ಸುರ ರಕ್ಷಸಾಂ ॥

ಶ್ರೀರಾಮನು ಆ ಋಷಿಗಳೊಡನೆ ಅಡವಿಯಲ್ಲಿಯೇ ವಾಸಮಾಡುತ್ತಿರಲು, ಅನೇಕ ಋಷಿಗಳು ರಾಕ್ಷಸರ ಬಾಧೆಯನ್ನು ತಡೆಯಲಾರದೆ ಬಂದು ಶ್ರೀರಾಮನನ್ನು ಮರೆಹೊಕ್ಕರು.

ಸತೇಷಾಂ ಪ್ರತಿಶುಶ್ರಾವ ರಾಕ್ಷಸಾನಾಂ ತಥಾವನೇ ।
ಪ್ರತಿಜ್ಞಾತಶ್ಚ ರಾಮೇಣ ವಧಸ್ಸಂಯತಿ ರಕ್ಷಸಾಂ ।
ಋಷೀಣಾಮಗ್ನಿಕಲ್ಪಾನಾಂ ದಂಡಕಾರಣ್ಯವಾಸಿನಾಂ॥

ಆ ರಾಕ್ಷಸರು ಋಷಿಗಳಿಗೆ ಕೊಡತಕ್ಕ ಹಿಂಸೆಗಳನ್ನು ಕೇಳಿ ಅವರ ಪ್ರಾರ್ಥನೆಯಂತೆ ಆ ರಾಕ್ಷಸರನ್ನು ಕೊಲ್ಲುವದಾಗಿ ಅಗ್ನಿಗೆ ಸಮಾನರಾಗಿಯೂ ದಂಡಕಾರಣ್ಯ ವಾಸಿಗಳಾಗಿಯೂ ಇದ್ದ ಋಷಿಗಳ ಸಮಕ್ಷಮ ಶ್ರೀರಾಮನು ಪ್ರತಿಜ್ಞೆ ಮಾಡಿದನು.

ತೇನ ತತ್ರೈವ ವಸತಾ ಜನಸ್ಥಾನ ನಿವಾಸಿನೀ ।
ವಿರೂಪಿತಾ ಶೂರ್ಪಣಖಾ ರಾಕ್ಷಸೀ ಕಾಮರೂಪಿಣೀ॥

ಹೀಗಿರುವಾಗ ಅಲ್ಲಿಗೆ ಸಮೀಪದಲ್ಲಿ ಜನಸ್ಥಾನವೆಂಬ ಪ್ರದೇಶದಲ್ಲಿ ವಾಸಮಾಡುತ್ತಿದ್ದ ಶೂರ್ಪಣಖೆ ಎಂಬ ಕಾಮರೂಪಿಣಿಯಾದ ರಾಕ್ಷಸಿಯೊಬ್ಬಳು ಈ ರಾಮಲಕ್ಷ್ಮಣರನ್ನು ಮೋಸಗೊಳಿಸಿ ಸೀತೆಯನ್ನು ಕೊಲ್ಲುವದಕ್ಕೆ ಬರಲು, ರಾಮನ ಇಷ್ಟದಂತೆ ಲಕ್ಷ್ಮಣನು ಅವಳ ಕಿವಿ ಮೂಗುಗಳನ್ನು ಕತ್ತರಿಸಿದನು.

ತತ ಶ್ಶೂರ್ಪಣಖಾ ವಾಕ್ಯಾದ್ಯುದ್ಯುಕ್ತಾ
ನ್ಸರ್ವ ರಾಕ್ಷಸಾನ್ ।

ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಂ ||

ಈ ಶೂರ್ಪಣಖೆಯು ನಿಮಿತ್ತದಿಂದ ಅಲ್ಲಿದ್ದ ಖರ ತ್ರಿಶಿರಸ ದೂಷಣಾದಿ ರಾಕ್ಷಸರೆಲ್ಲರೂ ಶ್ರೀರಾಮನ ಮೇಲೆ ಬಂದು ಎದುರಿಸಲು,

ನಿಜಘಾನ ರಣೆ ರಾಮ ಸ್ತೇಷಾಂ ಚೈವ ಪದಾನುಗಾ̆ |
ವನೆ ತಸ್ಮಿನ್ನಿವಸತಾ ಜನಸ್ಥಾನ ನಿವಾಸಿನಾಂ ||
ರಕ್ಷಸಾಂ ನಿಹತಾನ್ಯಾಸನ್ ಸಹಸ್ರಾಣಿ ಚತುರ್ದಶ ||

ಆಗ ಆ ಜನಸ್ಥಾನದಲ್ಲಿ ವಾಸವಾಗಿದ್ದ ಮೇಲ್ಕಂಡ ಖರ ದೂಷಣಾದಿ ಪದಾತಿಗಳೊಡನೆ ಇದ್ದ ಹದಿನಾಲ್ಕು ಸಾವಿರ ರಾಕ್ಷಸರೆಲ್ಲರನ್ನೂ ಶ್ರೀರಾಮನೊಬ್ಬನೇ ಕೊಂದು ಬಿಟ್ಟನು.

ತತೋ ಜ್ಞಾತಿ ವಧಂ ಶೃತ್ವಾ
ರಾವಣಃ ಕ್ರೋಧ ಮೂರ್ಛಿತಃ ||
ಸಹಾಯಂ ವರಯಾ ಮಾಸ
ಮಾರೀಚಂ ನಾಮ ರಾಕ್ಷಸಂ ||

ಲಂಕೆಯಲ್ಲಿದ್ದ ರಾಕ್ಷಸ ರಾಜನಾದ ರಾವಣನು ತನ್ನ ದಾಯಾದಿಗಳಾದ ಖರ ದೂಷಣಾದಿ ಆ ರಾಕ್ಷಸರ ವಧೆಯನ್ನು ಶೂರ್ಪಣಖೆಯುಮೂಲಕಕೇಳಿ, ಬಹಳರೋಷಗೊಂಡವನಾಗಿ ರಾಮ ಲಕ್ಷ್ಮಣರನ್ನು ಮೋಸದಿಂದ ನಿಗ್ರಹಿಸಬೇಕೆಂದು ಸಹಾಯಕ್ಕಾಗಿ ಮಾರೀಚನ ಬಳಿಗೆ ಬಂದನು.

ವಾರ್ಯಮಾಣ ಸ್ಸುಬಹುಶೋ ಮಾರೀಚೇನ ಸ
ರಾವಣಃ ||

ನವಿರೋಧೋ ಬಲವತಾ ರಾಮೋ ರಾವಣ ತೇನತೇ।
ಅನಾದೃತ್ಯತು ತದ್ವಾಕ್ಯಂ ರಾವಣಃ ಕಾಲಚೋದಿತಃ।
ಜಗಾಮ ಸಹ ಮಾರೀಚ ಸ್ತಸ್ಯಾಶ್ರಮ ಪದಂತದಾ ॥

ಮಾರೀಚನು, ರಾವಣನು ತನ್ನ ಬಳಿಗೆ ಬಂದ ಉದ್ದೇಶವನ್ನು ತಿಳಿದು ರಾವಣನನ್ನು ಕುರಿತು: 'ಎಲೈ ರಾವಣನೇ ರಾಮನು ಬಲಿಷ್ಠನು, ರಾಮನಲ್ಲಿ ವಿರೋಧ ಬೇಡ' ಎಂಬುದಾಗಿ ಬುದ್ಧಿವಾದ ಹೇಳಿದರೂ, ರಾವಣನು ಮಾರೀಚನ ಬುದ್ಧಿವಾದವನ್ನು ತಿರಸ್ಕರಿಸಿ, ತಾನು ಮೃತ್ಯುವಿನಿಂದ ಪ್ರೇರಿತನಾಗಿ ಮಾರೀಚನೊಡನೆ ರಾಮನ ಪರ್ಣಶಾಲೆಯ ಸಮೀಪಕ್ಕೆ ಬಂದನು.

ತೇನ ಮಾಯಾವಿನಾ ದೂರ ಮಪವಾಹ್ಯ ನೃಪಾತ್ಮಜೌ।
ಜಹಾರ ಭಾರ್ಯಾಂ ರಾಮಸ್ಯ ಗೃಧ್ರಂ ಹತ್ವಾ ಜಟಾಯುಷಂ ॥

ಮಾಯಾವಿಯಾದ ಮಾರೀಚನು ರಾವಣನ ಕೋರಿಕೆಯಂತೆ ಮಾಯಾ ಮೃಗವಾಗಿ, ರಾಮಲಕ್ಷ್ಮಣರನ್ನು ಸೀತೆಯಿಂದ ದೂರ ಹೋಗುವಹಾಗೆ ಅವರನ್ನು ಮೋಹಗೊಳಿಸಲು, ಸೀತೆಯು ಪರ್ಣಶಾಲೆಯಲ್ಲಿ ಒಬ್ಬಳೇ ಇರುವ ಹೊಂಚು ನೋಡಿಕೊಂಡು ಆ ಸಮಯದಲ್ಲಿ ಸಹಾಯಕ್ಕೆ ಬಂದ ಜಟಾಯುವೆಂಬ ಗೃಧ್ರವನ್ನು ಕೊಂದು ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದನು.

ಗೃಧ್ರಂಚ ನಿಹತಂ ದೃಷ್ಟ್ವಾಹೃತಾಂ ಶೃತ್ವಾಚ ಮೈಥಿಲೀಂ ॥
ರಾಘವ ಶ್ಶೋಕ ಸಂತಪ್ತೋ ವಿಲಲಾಪಾ ಕುಲೇಂದ್ರಿಯಃ ॥

ಶ್ರೀರಾಮನನ್ನು ಮಾರೀಚನು ಹೊಂಮೃಗವಾಗಿ ಬಹು ದೂರ ಕರೆದುಕೊಂಡು ಹೋದಮೇಲೆ ಶ್ರೀರಾಮನ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಹೋಗುತ್ತಿದ್ದುದರಿಂದ ಆ ಮೃಗ ವನ್ನು ಒಂದು ಬಾಣದಿಂದ ಕೊಂದನು. ಅದು ಮೃಗದ ಮಾಯೆಹೋಗಿ ಮಾರೀಚನಾಗಿ ತಾನು ಪ್ರಾಣ ಬಿಡುವಾಗ 'ಹಾ ಸೀತಾ, ಹಾ ಲಕ್ಷ್ಮಣ' ಎಂಬುದಾಗಿ ರಾಮನ ಧ್ವನಿ ಯಂತೆ ಕೂಗಿ ಪ್ರಾಣಬಿಟ್ಟನು. ಇದರಿಂದ ರಾಮನಿಗೆ ಕಷ್ಟ ಬಂದಿರಬಹುದೆಂದು ಸೀತೆಯು ಭೀತಳಾಗಿ ಆಕೆಯ ಪ್ರೇರೇ ಪಣೆಯಿಂದ ಲಕ್ಷ್ಮಣನು ಹಿಂದಿರುಗಿ ಬರುತ್ತಿದ್ದನು. ರಾಮನು ದಾರಿಯಲ್ಲಿ ಲಕ್ಷ್ಮಣನನ್ನು ನೋಡಿ, ಅವನೊಡನೆ ತನ್ನ ಪರ್ಣಶಾಲೆಗೆ ತಿರುಗಿ ಬಂದಾಗ ಸೀತೆಯು ಪರ್ಣಶಾಲೆ ಯಲ್ಲಿ ಇಲ್ಲದೆ ಶೂನ್ಯವಾಗಿದ್ದುದನ್ನು ನೋಡಿ ಬಹಳವಾಗಿ ಪ್ರಲಾಪಿಸಿದನು. ನಂತರ ದಾರಿಯಲ್ಲಿ ಸೀತೆಗಾಗಿ ಸಹಾ ಯಕ್ಕೆ ಹೋದ ಜಟಾಯುವೂ ಸಹ ರಾವಣನಿಂದ ಹೊಡೆ ಯಲ್ಪಟ್ಟು ಬಿದ್ದಿದ್ದುದನ್ನು ನೋಡಿ ದುಃಖದಿಂದ ಜಟಾಯು ವಿನಿಂದ ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋದ ಸಂಗತಿ ತಿಳಿದು:

ತತಸ್ತೇನೈವ ಶೋಕೇನ ಗೃಧ್ರಂ ದಗ್ಧ್ವಾ ಜಟಾಯುಷಂ ।
ಮಾರ್ಗಮಾಣೋ ವನೇ ಸೀತಾಂ ರಾಕ್ಷಸಂ ಸಂದದರ್ಶ ಹ ।
ಕಬಂಧಂ ನಾಮರೂಪೇಣ ವಿಕೃತಂ ಘೋರದರ್ಶನಂ॥

ಈ ದುಃಖದಿಂದಲೇ ಗೃಧ್ರನಾದ ಜಟಾಯುವಿಗೆ ದಹನ ಕ್ರಿಯೆ ನಡೆಸಿ ಸೀತೆಯನ್ನು ಹುಡುಕುತ್ತಾ ದಾರಿಯಲ್ಲಿ

ಭಯಂಕರವಾದ ರೂಪವುಳ್ಳ ವಿಕೃತವಾದ ಕಬಂಧನೆಂಬ ರಾಕ್ಷಸನನ್ನು ನೋಡಿದನು.

ತಂನಿಹತ್ಯ ಮಹಾಬಾಹುರ್ದದಾಹ ಸ್ವರ್ಗತಶ್ಚಸಃ ।
ಸಚಾಸ್ಯ ಕಥಯಾಮಾಸ ಶಬರೀಂ ಧರ್ಮಚಾರಿಣೀಂ।
ಶ್ರಮಣೀಂ ಧರ್ಮನಿಪುಣಾಮಭಿಗಚ್ಛೇತಿ ರಾಘವಂ ॥

ಆ ಕಬಂಧನನ್ನು ಮಹಾಬಾಹುವಾದ ರಾಮನು ಕೊಂದು ಕಬಂಧನ ಕೋರಿಕೆಯಂತೆ ಅವನನ್ನು ದಹಿಸಲು, ಅವನು ದಿವ್ಯವಾದ ದೇವತಾ ರೂಪದಿಂದ ಸ್ವರ್ಗಕ್ಕೆ ಹೊರಟನು. ಅವನು ರಾಮನನ್ನು ಕುರಿತು "ಸಮಿಾಪದಲ್ಲಿಯೇ ಧರ್ಮಿಷ್ಠಳಾಗಿಯೂ, ಸನ್ಯಾಸಿನಿಯಾಗಿಯೂ ಇರುವ ಶಬರಿಯು ನಿನಗಾಗಿ ಎದುರು ನೋಡುತ್ತಿದ್ದಾಳೆ. ಅಲ್ಲಿ ಆಕೆಯ ಆತಿಥ್ಯ ಹೊಂದಿ ಸುಗ್ರೀವನ ಸಖ್ಯದಿಂದ ಸೀತೆಯು ಇರುವ ಸ್ಥಳವು ಗೋಚರವಾಗಿ ನಿನಗೆ ಆಕೆಯು ಲಭ್ಯವಾಗುವಳು" ಎಂಬುದಾಗಿ ಕಬಂಧನು ಶ್ರೀರಾಮನಿಗೆ ತಿಳಿಸಿದನು.

ಸೋಭ್ಯಗಚ್ಛನ್ಮಹಾತೇಜಾ ಶ್ಶಬರೀಂ ಶತೃಸೂದನಃ ।
ಶಬರ್ಯಾ ಪೂಜಿತಸ್ಸಮ್ಯಗ್ರಾಮೋ ದಶರಥಾತ್ಮಜಃ॥

ನಂತರ ಮಹಾತೇಜಸ್ವಿಯಾದ ಮತ್ತು ಶತೃಸಂಹಾರಕನಾದ ಶ್ರೀರಾಮನು ಶಬರೀ ಆಶ್ರಮಕ್ಕೆ ಬಂದು ಆಕೆಯಿಂದ ಚೆನ್ನಾಗಿ ಪೂಜಿಸಲ್ಪಟ್ಟವನಾಗಿ, ಆಕೆಯ ಪೂಜೆಯಿಂದ ಸಂತುಷ್ಟನಾಗಿ ಆಕೆಗೆ ಮಹರ್ಷಿ ಪ್ರಾಪ್ತಲೋಕಗಳನ್ನು ಅನುಗ್ರಹಿಸಿದನು.

ಪಂಪಾತೀರೇ ಹನುಮತಾ ಸಂಗತೋ ವಾನರೇಣಹ।

ನಂತರ ಪಂಪಾ ತೀರದಲ್ಲಿ ಋಷ್ಯಮೂಕ ಪರ್ವತದ ಬಳಿ ಹನುಮಂತನೆಂಬ ವಾನರನನ್ನು ರಾಮನು ಸಂಧಿಸಿದನು.

ಹನುಮದ್ವಚನಾ ಚ್ಚೈವ ಸುಗ್ರೀವೇಣ ಸಮಾಗತಃ ।
ಸುಗ್ರೀವಾಯಚ ತತ್ಸರ್ವಂ ಶಂಸದ್ರಾಮೋ
ಮಹಾಬಲಃ ॥
ಆದಿತಸ್ತದ್ಯಥಾ ವೃತ್ತಂ ಸೀತಾಯಾಶ್ಚ ವಿಶೇಷತಃ ॥

ರಾಮನು ನಂತರ ಹನುಮಂತನ ಮೂಲಕವಾಗಿ ಸುಗ್ರೀವ ನೆಂಬ ಕಪಿರಾಜನಲ್ಲಿ ಸೇರಿ, ಅವನಿಗೆ ತನ್ನ ಪೂರ್ವ ವೃತ್ತಾಂತ ವನ್ನು ಮತ್ತು ಸೀತೆಯು ಅಪಹರಿಸಲ್ಪಟ್ಟ ವಿಚಾರವನ್ನು ವಿವರವಾಗಿ ತಿಳಿಸಿದನು.

ಸುಗ್ರೀವಶ್ಚಾಪಿ ತತ್ಸರ್ವಂ ಶ್ರುತ್ವಾರಾಮಸ್ಯ ವಾನರಃ।
ಚಕಾರ ಸಖ್ಯಂ ರಾಮೇಣ ಪ್ರೀತಶ್ಚೈವಾಗ್ನಿ ಸಾಕ್ಷಿಕಂ॥

ಅವೆಲ್ಲವನ್ನೂ ಸುಗ್ರೀವನು ಕೇಳಿ, ರಾಮನಿಂದ ಮುಂದೆ ತನಗೆ ಸಹಾಯವಾಗಬಹುದೆಂಬ ದೃಢದಿಂದ ರಾಮನೊಡನೆ ಅಗ್ನಿಸಾಕ್ಷಿಯಾಗಿ ಸ್ನೇಹವನ್ನುಂಟು ಮಾಡಿಕೊಂಡನು.

ತತೋ ವಾನರ ರಾಜೇನ ವೈರಾನು ಕಥನಂ ಪ್ರತಿ ।
ರಾಮಾಯಾವೇದಿತಂ ಸರ್ವಂ ಪ್ರಣಯಾ
ದುಃಖಿತೇನಚ ॥

ಆಮೇಲೆ ಸುಗ್ರೀವನು ತನಗೆ ಅಣ್ಣನಾದ ವಾಲಿಯು ತನ್ನನ್ನು ಮನೆಯಿಂದ ಹೊರಡಿಸಿ ತನಗೆ ಬಹಳ ಕಷ್ಟಕೊಟ್ಟ ವಿಚಾರಗಳನ್ನೂ, ತನಗೂ ವಾಲಿಗೂ ಉಂಟಾದ ದ್ವೇಷದ ಕಥೆಯನ್ನೂ ಸ್ನೇಹದ ಮೇಲಿನ ಅಭಿಮಾನದಿಂದ ರಾಮನ ಸಂಗಡ ವಿವರಿಸಿ ಹೇಳಿದನು

ಪ್ರತಿಜ್ಞಾತಂಚ ರಾಮೇಣ ತದಾವಾಲಿ ವಧಂಪ್ರತಿ ।
ವಾಲಿನಶ್ಚಬಲಂ ತತ್ರ ಕಥಯಾ ಮಾಸ ವಾನರಃ ।
ಸುಗ್ರೀವಶ್ಶಂಕಿತಶ್ಚಾಸೀ ನ್ನಿತ್ಯಂ ವೀರ್ಯೇಣ ರಾಘವೇ ।
ರಾಘವ ಪ್ರತ್ಯಯಾರ್ಥಂತು ದುಂದುಭೇ ಕಾಯಮುತ್ತಮಂ ।
ದರ್ಶಯಾಮಾಸ ಸುಗ್ರೀವೋ ಮಹಾಪರ್ವತ ಸನ್ನಿಭಂ ॥

ಇದನ್ನು ಕೇಳಿ ರಾಮನು ಆ ವಾಲಿಯನ್ನು ಕೊಲ್ಲುವದಾಗಿ ಪ್ರತಿಜ್ಞೆಮಾಡಿಕೊಟ್ಟನು. ಆದರೆ ಮಹಾಬಲವುಳ್ಳ ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿದ ರಾಮನ ಮಾತಿನಲ್ಲಿ ಸುಗ್ರೀವನಿಗೆ ನಂಬಿಕೆ ಹುಟ್ಟದೆ ರಾಮನ ಶಕ್ತಿಯನ್ನು ತಿಳಿದುಕೊಳ್ಳುವದಕ್ಕಾಗಿ ಹಿಂದೆ ವಾಲಿಯಿಂದ ಹತನಾದ ದುಂದುಭಿ ಎಂಬುವನ ಪರ್ವತಕ್ಕೆ ಸಮಾನವಾದ ಮೃತದೇಹವನ್ನು ಸುಗ್ರೀವನು ರಾಮನಿಗೆ ತೋರಿಸಿದನು.

ಉತ್ಸ್ಮಯಿತ್ವಾ ಮಹಾಬಾಹುಃ ಪ್ರೇಕ್ಷ್ಯ ಚಾಸ್ಥಿ ಮಹಾಬಲಃ ॥
ಪಾದಾಂಗುಷ್ಠೇನ ಚಿಕ್ಷೇಪ ಸಂಪೂರ್ಣಂ ದಶಯೋಜನಂ ॥

ಶ್ರೀರಾಮನು ಮುಗುಳ್ನಗೆ ನಕ್ಕು ತನ್ನ ಅಂಗುಷ್ಠದಿಂದಲೇ ಅದನ್ನು ಹತ್ತು ಯೋಜನಗಳವರೆಗೆ ಹಾರಿಸಿದನು.

ಬಿಭೇದಚ ಪುನಸ್ಸಾಲಾ ನ್ಸಪ್ತೈಕೇನ ಮಹೇಷುಣಾ।
ಗಿರಿಂ ರಸಾತಲಂಚೈವ ಜನಯನ್ಪ್ರತ್ಯಯಂ ತದಾ ॥

ಮತ್ತು ಒಂದೇ ಬಾಣದಿಂದ ಏಳು ಸಾಲು ಮರಗಳನ್ನು ಭೇದಿಸಿದನು. ಈ ಬಾಣವು ಬೆಟ್ಟವನ್ನು ಕೊರೆದು ರಸಾತಲವನ್ನು ಪ್ರವೇಶಿಸಿತು. ಇದರಿಂದ ರಾಮನ ಅಸಾಧಾರಣವಾದ ಬಾಣದ ಮಹಿಮೆಯು ಎಲ್ಲರಿಗೂ ಚೆನ್ನಾಗಿ ಮನದಟ್ಟಾಯಿತು.

ತತಃ ಪ್ರೀತ ಮನಾಸ್ತೇನ ವಿಶ್ವಸ್ತಸ್ಸ ಮಹಾಕಪಿಃ ||
ಕಿಷ್ಕಿಂಧಾಂ ರಾಮ ಸಹಿತೋ ಜಗಾಮಚಗುಹಾಂ
ತದಾ ||

ನಂತರ ಸುಗ್ರೀವನು ಶ್ರೀರಾಮನ ಸಾಮರ್ಥ್ಯವನ್ನು ಕಣ್ಣಾರ ನೋಡಿ ನಂಬಿಕೆಯುಳ್ಳವನಾಗಿ ರಾಮನೊಡನೆ ತನ್ನ ಅಣ್ಣ ವಾಲಿ ಇರುವ ಕಿಷ್ಕಿಂಥೆ ಎಂಬ ಗುಹೆಗೆ ಬಂದನು.

ತತೋಽಗರ್ಜದ್ಧರಿವರಸ್ಸುಗ್ರೀವೋ ಹೇಮಪಿಂಗಳಃ ।
ತೇನನಾದೇನ ಮಹತಾ ನಿರ್ಜಗಾಮ ಹರೀಶ್ವರಃ ।
ಅನುಮಾನ್ಯ ತದಾತಾರಾಂ ಸುಗ್ರೀವೇಣ ಸಮಾಗತಃ||

ಬಂಗಾರದಂತೆ ಹೊಳೆಯುವ ಮೈಯುಳ್ಳ ಸುಗ್ರೀವನು ಅಲ್ಲಿಗೆ ಬಂದು ದೊಡ್ಡ ಸಿಂಹನಾದವನ್ನು ಮಾಡಿದನು. ಈ ಧ್ವನಿಯನ್ನು ಕೇಳಿದೊಡನೆಯೇ ವಾನರರಿಗೆಲ್ಲಾ ಅಧಿಪತಿಯಾದ ವಾಲಿಯು ತನ್ನ ಹೆಂಡತಿಯಾದ ತಾರೆಯನ್ನು ಸಮಾಧಾನದಿಂದ ಒಪ್ಪಿಸಿ ಸುಗ್ರೀವನೊಡನೆ ಹೋರಾಡಲು ಗುಹೆಯಿಂದ ಈಚೆಗೆ ಬಂದು ಅವನೊಡನೆ ಸೇರಿದನು.

ನಿಜಘಾನಚ ತತ್ರೈನಂ ಶರೇಣೈಕೇನ ರಾಘವಃ ||

ಇವರಿಬ್ಬರೂ ಹೋರಾಡುತ್ತಿರುವಾಗಲೇ ರಾಮನು ಒಂದೇ ಬಾಣದಿಂದ ವಾಲಿಯನ್ನು ಕೊಂದನು.

**ತತಸ್ಸುಗ್ರೀವ ವಚನಾದ್ಧತ್ವಾ ವಾಲಿನ ಮಾಹವೇ।
ಸುಗ್ರೀವಮೇವ ತದ್ರಾಜ್ಯೇ ರಾಘವಃ
ಪ್ರತ್ಯಪಾದಯತ್ ॥**

ಸುಗ್ರೀವನಿಗೆ ತನ್ನ ಪ್ರತಿಜ್ಞೆಯಂತೆ ಅಲ್ಲಿನ ಕಿಷ್ಕಿಂಧಾ ಪಟ್ಟಣದ ರಾಜ್ಯಕ್ಕೆ ಸುಗ್ರೀವನನ್ನೇ ರಾಜನಾಗಿ ನೇಮಿಸಿ ಅವನಿಗೆ ಶ್ರೀರಾಮನು ಪಟ್ಟಾಭಿಷೇಕ ಮಾಡಿಸಿದನು.

**ಸಚಸರ್ವಾನ್ ಸಮಾನೀಯ ವಾನರಾನ್ವಾನರರ್ಷಭಃ ॥
ದಿಶಃ ಪ್ರಸ್ಥಾಪಯಾಮಾಸ ದಿದೃಕ್ಷು
ರ್ಜನಕಾತ್ಮಜಾಂ ॥**

ನಂತರ ರಾಮನು ತನಗೆ ಮಾಡಿದ ಉಪಕಾರವನ್ನು ಮರೆಯದೆ ಸುಗ್ರೀವನು ಒಡನೆಯೇ ತನ್ನ ಕೈಕೆಳಗಿನ ಎಲ್ಲಾ ಕಪಿಗಳನ್ನೂ ಬರಮಾಡಿಕೊಂಡು ಸೀತೆಯು ಇರುವ ಸ್ಥಳವನ್ನು ಕಂಡುಹಿಡಿಯುವದಕ್ಕಾಗಿ ಭೂಮಂಡಲದ ಎಲ್ಲಾ ದಿಕ್ಕುಗಳಿಗೂ ಆ ಕಪಿಗಳನ್ನು ಕಳುಹಿಸಿದನು.

**ತತೋ ಗೃಧ್ರಸ್ಯವಚನಾತ್ಸಂಪಾತೇ
ರ್ಹನುಮಾನ್ಬಲೀ ।
ಶತಯೋಜನ ವಿಸ್ತೀರ್ಣಂ ಪುಪ್ಲುವೇ
ಲವಣಾರ್ಣವಂ ॥**

ಹೀಗೆ ಹೊರಟ ಕಪಿಗಳಲ್ಲಿ ಬಲಶಾಲಿಯಾದ ಹನುಮಂತನು ದಾರಿಯಲ್ಲಿ ಸಂಪಾತಿ ಎಂಬ ಗೃಧ್ರರಾಜನ ಮಾತಿನಿಂದ ಸೀತೆಯು ಲಂಕೆಯಲ್ಲಿ ಇರುವಳೆಂಬ ಸಮಾಚಾರ ತಿಳಿದು, ಸಮುದ್ರದಮೇಲೆ ನೂರುಯೋಜನ ದಾರಿಯುಳ್ಳ ಲಂಕೆಗೆ ಹೊರಡಲು ಸಮುದ್ರವನ್ನು ದಾಟಿದನು.

ತತ್ರಲಂಕಾಂ ಸಮಾಸಾದ್ಯ ಪುರೀಂ ರಾವಣ ಪಾಲಿತಾಂ।
ದದರ್ಶ ಸೀತಾಂ ಧ್ಯಾಯಂತೀ ಮಶೋಕ
ವನಿಕಾಂಗತಾಂ ।
ನಿವೇದಯಿತ್ವಾಭಿಜ್ಞಾನಂ ಪ್ರವೃತ್ತಿಂಚ ನಿವೇದ್ಯಚ॥
ಸಮಾಶ್ವಾಸ್ಯಚ ವೈದೇಹೀಂ ಮರ್ದಯಾ
ಮಾಸತೋರಣಂ ।

ನಂತರ ಹನುಮಂತನು ರಾವಣನಿಂದ ಪಾಲಿಸಲ್ಪಡುತ್ತಿದ್ದ ಲಂಕೆಯನ್ನು ಸೇರಿ ಅಶೋಕವನದಲ್ಲಿ ಯಾವಾಗಲೂ ರಾಮನನ್ನೇ ಧ್ಯಾನಿಸುತ್ತಾ ಕುಳಿತಿದ್ದ ಸೀತೆಯನ್ನು ಕಂಡು, ಮೊದಲು ನಂಬಿಕೆಗಾಗಿ ರಾಮನಿಂದ ತನಗೆ ಕೊಡಲ್ಪಟ್ಟ ರಾಮನ ಹೆಸರಿನ ಉಂಗುರವನ್ನು ಕೊಟ್ಟು ರಾಮನ ವೃತ್ತಾಂತವನ್ನೂ ರಾಮಲಕ್ಷ್ಮಣರ ಯೋಗಕ್ಷೇಮವನ್ನೂ ಆಕೆಗೆ ವಿಶದವಾಗಿ ತಿಳಿಸಿ, ಆಕೆಯ ಒಪ್ಪಿಗೆಯಂತೆ ಆ ಅಶೋಕವನದ ಹೊರಬಾಗಿಲು ಗೋಪುರವನ್ನು ಹಾಳು ಮಾಡಿದನು.

ಪಂಚಸೇನಾಗ್ರಗಾನ್ಹತ್ವಾ ಸಪ್ತಮಂತ್ರಿ ಸುತಾನಪಿ।
ಶೂರಮುಕ್ಷಂಚ ನಿಷ್ಪಿಷ್ಯ ಗ್ರಹಣಂ ಸಮುಪಾಗಮತ್॥

ನಂತರ ಅಲ್ಲಿ ತನ್ನನ್ನು ಇದಿರಿಸುವದಕ್ಕೆ ಬಂದ ೫ ಮಂದಿ ರಾಕ್ಷಸ ಸೇನಾಧಿಪತಿಗಳನ್ನೂ, ೭ ಮಂದಿ ಮಂತ್ರಿಪುತ್ರರನ್ನೂ ಮತ್ತು ರಾವಣನ ಎರಡನೆಯ ಮಗನಾದ ಶೂರನಾದ ಅಕ್ಷಯ ಕುಮಾರನನ್ನೂ ಸಂಹರಿಸಿ ಕೊನೆಗೆ ರಾವಣನ ಇನ್ನೊಬ್ಬ ಮಗನಾದ ಇಂದ್ರಜಿತ್ತುವಿನ ಬ್ರಹ್ಮಾಸ್ತ್ರಕ್ಕೆ ಹನುಮಂತನು ಕಟ್ಟುಬಿದ್ದನು.

ಅಸ್ತ್ರೇಣೋನ್ಮುಕ್ತಮಾತ್ಮಾನಂ ಜ್ಞಾತ್ವಾ
ಪೈತಾಮಹಹಾದ್ವರಾತ್ ॥

ಮರ್ಷಯನ್ರಾಕ್ಷಸಾನ್ವೀರೋ ಯಂತ್ರಿಣಸ್ತಾನ್ಯ
ದೃಚ್ಛಯಾ ॥
ತತೋ ದಗ್ಧ್ವಾಪುರೀಂ ಲಂಕಾ ಮೃತೆ ಸೀತಾಂಚ
ಮೈಥಿಲೀಂ ।
ರಾಮಾಯ ಪ್ರಿಯಮಾಖ್ಯಾತುಂ ಪುನರಾಯಾನ್ಮಹಾ
ಕಪಿಃ ॥

ನಂತರ ಹನುಮಂತನು ಬ್ರಹ್ಮನ ವರದಂತೆ ಸ್ವಲ್ಪ ಕಾಲದಲ್ಲಿಯೇ ಬ್ರಹ್ಮಾಸ್ತ್ರದಿಂದ ಬಿಡುಗಡೆಹೊಂದಿ ತಾನು ತನ್ನನ್ನು ಕಟ್ಟಿಹಾಕಿ ಹಿಂಸೆಮಾಡುತ್ತಿದ್ದ ರಾಕ್ಷಸರನ್ನು ಧ್ವಂಸ ಮಾಡಲು ಶಕ್ತನಾಗಿದ್ದರೂ ಮುಂದಿನ ಕಾರ್ಯ ನಿರ್ವಹಣ ದೃಷ್ಟಿಯಿಂದ ಸುಮ್ಮನಿದ್ದು ರಾವಣನ ಆಸ್ಥಾನಕ್ಕೆ ಬಂದು ಅವನಿಗೆ ಬುದ್ಧಿವಾದ ಹೇಳಿದರೂ ರಾವಣನು ಅದನ್ನು ತಿರಸ್ಕರಿಸಿ, ಬಟ್ಟೆಗಳನ್ನು ಎಣ್ಣೆಯಲ್ಲಿ ನೆನಸಿ ಆಂಜನೇಯನ ಬಾಲಕ್ಕೆ ಬೆಂಕಿ ಹಚ್ಚಲು ರಾಕ್ಷಸರಿಗೆ ಆಜ್ಞಾಪಿಸಿದನು. ಹನುಮಂತನು ತನ್ನ ಬಾಲದ ಬೆಂಕಿಯಿಂದಲೇ ಅಶೋಕ ವನದಲ್ಲಿ ಸೀತೆಯು ಇದ್ದ ಪ್ರದೇಶವನ್ನು ಮಾತ್ರ ಬಿಟ್ಟು ಲಂಕಾಪಟ್ಟಣವನ್ನೆಲ್ಲ ಸುಟ್ಟು, ನಂತರ ಸೀತೆಯುಕ್ಷೇಮವಾಗಿ ಲಂಕೆಯಲ್ಲಿರುವ ಸಮಾಚಾರವನ್ನು ರಾಮನಿಗೆ ತಿಳಿಸಲು ಲಂಕೆಯಿಂದ ವಾಪಸು ತಿರುಗಿದನು.

ಸೋಽಭಿಗಮ್ಯ ಮಹಾತ್ಮಾನಂ ಕೃತ್ವಾರಾಮಂ
ಪ್ರದಕ್ಷಿಣಂ ।
ನ್ಯವೇದಯದಮೇಯಾತ್ಮಾ ದೃಷ್ಟಾ
ಸೀತೇತಿ ತತ್ತ್ವತಃ ॥

ರಾಮನ ಬಳಿಗೆ ಬಂದು ಆತನಿಗೆ ಪ್ರದಕ್ಷಿಣ ನಮಸ್ಕಾರ ಮಾಡಿ "ಪ್ರಭುವೇ ಸೀತೆ ಸಿಕ್ಕಿದಳು" ಎಂದು ಅಲ್ಲಿ ನಡೆದ

ವೃತ್ತಾಂತವನ್ನೆಲ್ಲಾ ಹನುಮಂತನು ರಾಮನಿಗೆ ವಿಶದವಾಗಿ ತಿಳಿಸಿದನು.

ತತಸ್ಸುಗ್ರೀವಸಹಿತೋ ಗತ್ವಾತೀರಂ ಮಹೋದಧೇಃ।
ಸಮುದ್ರಂ ಕ್ಷೋಭಯಾಮಾಸ ಶರೈರಾದಿತ್ಯ ಸನ್ನಿಭೈಃ ॥

ಒಡನೆಯೇ ಶ್ರೀರಾಮನು ಸುಗ್ರೀವನೊಡನೆ ಸಮುದ್ರ ತೀರಕ್ಕೆ ಬಂದು ದಾರಿ ಬಿಡುವುದಕ್ಕಾಗಿ ಸಮುದ್ರನನ್ನು ಪ್ರಾರ್ಥಿಸಿದರೂ ಗರ್ವದಿಂದ ಸುಮ್ಮನಿದ್ದುದನ್ನು ನೋಡಿ ಸೂರ್ಯನಿಗೆ ಸಮಾನವಾದ ತನ್ನ ಬಾಣಗಳಿಂದ ಶ್ರೀರಾಮನು ಸಮುದ್ರವನ್ನು ಕ್ಷೋಭಿಸಿದನು.

ದರ್ಶಯಾಮಾಸ ಚಾತ್ಮಾನಂ ಸಮುದ್ರಸ್ಸರಿತಾಂಪತಿಃ।
ಸಮುದ್ರ ವಚನಾಚ್ಚೈವ ನಳಂಸೇತು ಮಕಾರಯತ್ ॥

ನಂತರ ನದಿಗಳಿಗೆಲ್ಲಾ ಒಡೆಯನಾದ ಸಮುದ್ರ ರಾಜನು ವಿನಯದಿಂದ ಶ್ರೀರಾಮನಿಗೆ ಕಾಣಿಸಿಕೊಳ್ಳಲು ಶ್ರೀರಾಮನು ನಳನ ಮೂಲಕವಾಗಿ ಆತನ ಮಾತಿನಂತೆ ಸಮುದ್ರದ ಮೇಲೆ ಸೇತುವನ್ನು ಕಟ್ಟಿಸಿದನು.

ತೇನಗತ್ವಾ ಪುರೀಂಲಂಕಾಂ ಹತ್ವಾರಾವಣ ಮಾಹವೇ।
ರಾಮಸ್ಸೀತಾ ಮನುಪ್ರಾಪ್ಯ ಪರಾಂ ವ್ರೀಡಾಮುಪಾ ಗಮತ್ ॥

ನಂತರ ಶ್ರೀರಾಮನು ಈ ಸೇತುವೆಯ ಮುಖಾಂತರ ಸಕಲ ಕಪಿಸೇನೆಯೊಡನೆ ಸಮುದ್ರವನ್ನು ದಾಟಿ ಯುದ್ಧದಲ್ಲಿ ರಾವಣಾದಿ ರಾಕ್ಷಸರನ್ನೆಲ್ಲಾ ವಧಿಸಿ ಸೀತೆಯು ತನಗೆ ಲಭಿಸಿದರೂ ಬಹುಕಾಲ ರಾವಣನ ಬಲೆಯಲ್ಲಿ ಸೀತೆಯು ಇದ್ದದ್ದರಿಂದ ಈಕೆಯನ್ನು ತನ್ನಲ್ಲಿಟ್ಟುಕೊಳ್ಳಬಹುದೆ? ಎಂಬ ಅನು

ಮಾನವೂ ನಾಚಿಕೆಯೂ ಬಹಳವಾಗಿ ರಾಮನಿಗೆ ಉಂಟಾಯಿತು.

ತಾಮುವಾಚ ತತೋ ರಾಮಃ ಪರುಷಂ ಜನಸಂಸದಿ ।
ಅಮೃಷ್ಯಮಾಣಾ ಸಾ ಸೀತಾ ವಿವೇಶ ಜ್ವಲನಂ ಸತೀ ॥

ನಂತರ ಎಲ್ಲರ ಎದುರಿಗೆ ಶ್ರೀರಾಮನು ಸೀತೆಯನ್ನು ಕುರಿತು ಬಹಳ ಕಠಿಣವಾಗಿಯೂ ಕ್ರೂರವಾಗಿಯೂ ಮಾತನಾಡಿದನು. ಈ ಮಾತುಗಳನ್ನು ಕೇಳಲಾರದೆ ಒಡನೆಯೇ ಪತಿವ್ರತೆಯಾದ ಸೀತೆಯು ಅಗ್ನಿಪ್ರವೇಶ ಮಾಡಿದಳು.

ತತೋಽಗ್ನಿವಚನಾತ್ಸೀತಾಂ ಜ್ಞಾತ್ವಾ ವಿಗತಕಲ್ಮಷಾಂ ।
ಬಭೌ ರಾಮಸ್ಸಂಪ್ರಹೃಷ್ಟಃ ಪೂಜಿತ ಸ್ಸರ್ವದೈವತೈಃ ॥

ಸೀತೆಯ ಪಾತಿವ್ರತ್ಯ ಮಹಿಮೆಯಿಂದ ಅಗ್ನಿಯು ಕೂಡಲೆ ರಾಮನಿಗೆ ಪ್ರತ್ಯಕ್ಷವಾಗಿ: 'ಸೀತೆಯು ನಿಷ್ಕಲ್ಮಷಳು' ಎಂದು ನುಡಿದು ಆಕೆಯನ್ನು ಒಪ್ಪಿಸಿದನು. ಆಗ ಶ್ರೀರಾಮನು ಆಕೆಯನ್ನು ಹೊಂದಿ ಅಲ್ಲಿ ನೆರೆದಿದ್ದ ಸಮಸ್ತ ದೇವತೆಗಳಿಂದ ಪೂಜಿಸಲ್ಪಟ್ಟವನಾಗಿ ಸೀತಾಸಮೇತನಾಗಿ ಸಂತೋಷದಿಂದ ಅಲ್ಲಿ ಪ್ರಕಾಶಮಾನನಾಗಿದ್ದನು.

ಕರ್ಮಣಾ ತೇನ ಮಹತಾ ತ್ರೈಲೋಕ್ಯಂ ಸಚರಾಚರಂ ।
ಸದೇವರ್ಷಿಗಣಂ ತುಷ್ಟಂ ರಾಘವಸ್ಯ ಮಹಾತ್ಮನಃ ॥

ಮಹಾತ್ಮನಾದ ಶ್ರೀರಾಮನು ಲೋಕಕಂಟಕನಾದ ರಾವಣನನ್ನೂ ಅವನ ಅನುಯಾಯಿಗಳನ್ನೂ ಕೊಂದು ಲೋಕಕ್ಕೆ ಮಹದುಪಕಾರ ಮಾಡಿದ ಈ ಕೃತ್ಯದಿಂದ ಚರಾಚರ ಸಹಿತವಾಗಿ ಮೂರು ಲೋಕಗಳು ದೇವತೆಗಳು ಋಷಿ ಸಮೂಹಗಳು ಇವರೆಲ್ಲರಿಗೂ ಬಹಳ ತೃಪ್ತಿಯಾಯಿತು.

ಅಭಿಷಿಚ್ಯಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಂ ।
ಕೃತಕೃತ್ಯಸ್ತದಾರಾಮೋ ವಿಜ್ವರಃ ಪ್ರಮುಮೋದಹ॥

ಅನಂತರ ಶ್ರೀರಾಮನು ತಾನು ಮಾತು ಕೊಟ್ಟದ್ದಂತೆ ತನಗೆ ಸಹಾಯಮಾಡಿದ ಮತ್ತು ತನ್ನ ಭಕ್ತನಾದ ವಿಭೀಷಣ ನನ್ನು ಲಂಕಾಧಿಪತಿಯನ್ನಾಗಿ ಅಭಿಷೇಕಮಾಡಿಸಿ, ತನ್ನ ಪ್ರತಿಜ್ಞೆಯು ಈಡೇರಿದುದಕ್ಕಾಗಿ ತಾನು ಕೃತಕೃತ್ಯನಾದೆ ನೆಂದು ಸಂತೋಷಪಟ್ಟನು.

ದೇವತಾಭ್ಯೋ ವರಂಪ್ರಾಪ್ಯ ಸಮುತ್ಥಾಪ್ಯಚ ವಾನರಾ೯ ।
ಅಯೋಧ್ಯಾಂ ಪ್ರಸ್ಥಿತೋ ರಾಮಃ ಪುಷ್ಪಕೇಣ ಸುಹೃದ್ವೃತಃ ॥

ದೇವತೆಗಳೆಲ್ಲರೂ ಶ್ರೀರಾಮನಿಗೆ ಕೊಟ್ಟ ವರದಿಂದ ಯುದ್ಧದಲ್ಲಿ ಹತರಾಗಿದ್ದ ಎಲ್ಲಾ ವಾನರರೂ ಪುನಃ ಜೀವಿಸಿದರು. ನಂತರ ಶ್ರೀರಾಮನು ತನ್ನ ಮಿತ್ರರಾದ ಸುಗ್ರೀವನೇ ಮೊದಲಾದ ವಾನರರೂ ಮತ್ತು ವಿಭೀಷಣನೇ ಮೊದಲಾದ ಸ್ನೇಹಿತರೊಡನೆ ಪುಷ್ಪಕ ವಿಮಾನವನ್ನೇರಿ ಅಯೋಧ್ಯಾಭಿಮುಖನಾಗಿ ಹೊರಟನು.

ಭರದ್ವಾಜಾಶ್ರಮಂಗತ್ವಾ ರಾಮಸ್ಸತ್ಯ ಪರಾಕ್ರಮಃ ।
ಭರತಸ್ಯಾಂತಿಕಂ ರಾಮೋ ಹನೂಮಂತಂ ವ್ಯಸರ್ಜಯತ್ ॥

ಸತ್ಯಸಂಧನಾದ ರಾಮನು ಭರದ್ವಾಜಾಶ್ರಮಕ್ಕೆ ಬಂದು ತಾನು ಜಯಪ್ರದನಾಗಿ ಕ್ಷೇಮವಾಗಿ ಅಯೋಧ್ಯೆಗೆ ಹಿಂದಿ ರುಗಿ ಬರುತ್ತಿರುವ ಶುಭ ಸಮಾಚಾರವನ್ನು ಮುಂದಾಗಿ

ತನ್ನ ತಮ್ಮನಾದ ಭರತನಿಗೆ ತಿಳಿಸಲು ಶ್ರೀರಾಮನು ಅಲ್ಲಿಂದಲೇ ಹನುಮಂತನನ್ನು ಭರತನ ಬಳಿಗೆ ಕಳುಹಿಸಿದನು.

ಪುನರಾಖ್ಯಾಯಿಕಾಂ ಜಲ್ಪಸ್ಸುಗ್ರೀವ ಸಹಿತಶ್ಚ ಸಃ ।
ಪುಷ್ಪಕಂ ತತ್ಸಮಾರುಹ್ಯ ನಂದಿಗ್ರಾಮಂ
ಯಯೌ ತದಾ ॥

ನಂತರ ಭರದ್ವಾಜಾಶ್ರಮದಿಂದ ಹೊರಟು ವಿಮಾನದಲ್ಲಿ ಬರುತ್ತಿರುವಾಗ ಶ್ರೀರಾಮನು ಸುಗ್ರೀವನೇ ಮೊದಲಾದವರಿಗೆ ಭರತನ ವೃತ್ತಾಂತವನ್ನು ತಿಳಿಸುತ್ತಾ ನಂದಿಗ್ರಾಮಕ್ಕೆ ಬಂದನು.

ನಂದಿಗ್ರಾಮೇ ಜಟಾಂಹಿತ್ವಾ ಭ್ರಾತೃಭಿ ಸ್ಸಹಿತೋ
ನಘಃ ।
ರಾಮಸ್ಸೀತಾಮನುಪ್ರಾಪ್ಯ ರಾಜ್ಯಂ ಪುನರ
ವಾಪ್ತವಾನ್ ॥

ನಂತರ ಪಾಪರಹಿತನಾದ ಶ್ರೀರಾಮನು ತಮ್ಮಂದಿರೊಡನೆ ನಂದಿಗ್ರಾಮದಲ್ಲಿ ಜಡೆ ನಾರುಮಡಿ ಮೊದಲಾದ ವೇಷಗಳನ್ನು ಬದಲಾಯಿಸಿಕೊಂಡು ರಾಜಯೋಗ್ಯವಾದ ವೇಷಗಳನ್ನು ಧರಿಸಿ ಅಯೋಧ್ಯೆಗೆ ಬಂದು ಸೀತಾಸಮೇತನಾಗಿ ಸಿಂಹಾಸನವನ್ನೇರಿ ಅಭಿಷಿಕ್ತನಾಗಿ ಪುನಃ ರಾಜ್ಯಭಾರವನ್ನು ವಹಿಸಿದನು.

ಪ್ರಹೃಷ್ಟೋ ಮುದಿತೋ ಲೋಕ ಸ್ತುಷ್ಟಃ ಪುಷ್ಟ
ಸ್ಸುಧಾರ್ಮಿಕಃ ।
ನಿರಾಮಯೋ ಹ್ಯರೋಗಶ್ಚ ದುರ್ಭಿಕ್ಷ ಭಯ
ವರ್ಜಿತಃ ॥

ಲೋಕದ ಜನಗಳು ರಾಮರಾಜ್ಯದಲ್ಲಿ ಸಂತೋಷದಿಂದ ಉಬ್ಬಿದವರಾಗಿ ಆಯಾಯಾ ವರ್ಣಾಶ್ರಮಕ್ಕೆ ಲೋಪವಿಲ್ಲ

ದಂತೆ ಧರ್ಮನಿರತರಾಗಿ ಆಚರಿಸುತ್ತಿದ್ದುದರಿಂದ ಆಧಿವ್ಯಾಧಿಗಳಾಗಲೀ ಕ್ಷಾಮಡಾಮರಗಳಾಗಲೀ ಯಾವುದೂ ಇಲ್ಲದೆ ಕ್ಷೇಮವಾಗಿದ್ದರು.

ನಪುತ್ರಮರಣಂಕಿಂಚಿದ್ರಕ್ಷ್ಯಂತಿ ಪುರುಷಾಃಕ್ವಚಿತ್ ।
ನಾರ್ಯಶ್ಚಾವಿಧವಾ ನಿತ್ಯಂ ಭವಿಷ್ಯಂತಿ ಪತಿವ್ರತಾಃ ॥

ತಂದೆ ತಾಯಿಗಳಿಗೆ ಪುತ್ರಶೋಕವೂ ಪತಿವ್ರತೆಯರಾದ ಹೆಂಗಸರಿಗೆ ವೈಧವ್ಯ ದುಃಖವೂ ರಾಮರಾಜ್ಯದಲ್ಲಿ ಆಗುತ್ತಿರಲಿಲ್ಲ.

ನಚಾಗ್ನಿಜಂ ಭಯಂ ಕಿಂಚಿನ್ನಾಪ್ಸುಮಜ್ಜಂತಿ ಜಂತವಃ ।
ನವಾತಜಂ ಭಯಂ ಕಿಂಚಿನ್ನಾಪಿಜ್ವರಕೃತಂ ತಥಾ ॥

ಆ ರಾಮರಾಜ್ಯದಲ್ಲಿ ಬೆಂಕಿಯಿಂದಲಾಗಲೀ ನೀರಿನಿಂದಲಾಗಲೀ ಗಾಳಿಯಿಂದಲಾಗಲೀ ಜ್ವರದಿಂದಲಾಗಲೀ ಯಾರಿಗೂ ಎಲ್ಲಿಯೂ ಲೇಶಮಾತ್ರವೂ ಭಯವಿರಲಿಲ್ಲ.

ನಚಾಪಿ ಕ್ಷುದ್ಭಯಂ ತತ್ರ ನತಸ್ಕರ ಭಯಂ ತಥಾ ।
ನಗರಾಣಿ ಚ ರಾಷ್ಟ್ರಾಣಿ ಧನಧಾನ್ಯಯುತಾನಿಚ ॥

ಅಲ್ಲದೆ ರಾಮರಾಜ್ಯದಲ್ಲಿ ನಗರಗಳಲ್ಲಿಯೂ ರಾಷ್ಟ್ರಗಳಲ್ಲಿಯೂ ಎಲ್ಲರೂ ಸಮೃದ್ಧ ಧನ ಧಾನ್ಯಗಳಿಂದ ಕೂಡಿದವರಾಗಿದ್ದುದರಿಂದ ಯಾರಿಗೂ ಹಸಿವೆ ಮುಂತಾದ ಭಯವೇ ಇರುತ್ತಿರಲಿಲ್ಲ. ಕಳ್ಳಕಾಕರ ಭಯವೆಂಬುವದೂ ಇರುತ್ತಿರಲಿಲ್ಲ.

ನಿತ್ಯಂ ಸಮುದಿತಾಸ್ಸರ್ವೇ ಯಥಾ ಕೃತಯುಗೇ ತಥಾ ॥

ಕೃತಯುಗದಲ್ಲಿದ್ದಂತೆ ಸಮಸ್ತ ಪ್ರಜೆಗಳೂ ಬಹಳ ಸಂತೋಷದಿಂದ ಮೆರೆಯುತ್ತಿದ್ದರು.

ಅಶ್ವಮೇಧ ಶತೈರಿಷ್ಟ್ವಾ ತಥಾ ಬಹುಸುವರ್ಣಕೈಃ ॥
ಗವಾಂ ಕೋಟ್ಯಯುತಂದತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ ।
ಅಸಂಖ್ಯೆಯಂ ಧನಂದತ್ವಾ ಬ್ರಾಹ್ಮಣೇಭ್ಯೋ ಮಹಾ ಯಶಾಃ ॥

ಈ ರೀತಿಯಾಗಿ ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದ ಶ್ರೀರಾಮನು ಮುಂದೆ ನೂರಾರು ಅಶ್ವಮೇಧಗಳನ್ನೂ ಬಹು ಸುವರ್ಣವನ್ನೂ ದಾನವಾಗಿ ಕೊಡುವ ಅನೇಕ ಯಾಗ ಗಳನ್ನೂ ಮಾಡಿ ಕೋಟಿ ಕೋಟಿ ಗೋದಾನಗಳನ್ನೂ ಅಪರಿ ಮಿತವಾದ ದ್ರವ್ಯಗಳನ್ನೂ ಬ್ರಾಹ್ಮಣರಲ್ಲಿ ಬೇಕು ಬೇಕಾ ದವರಿಗೆ ಕೊಟ್ಟು ನಂತರ ಬ್ರಹ್ಮಲೋಕಕ್ಕೆ ಹಿಂದಿರುಗುವನು.

ರಾಜವಂಶಾಞ್ಛತಗುಣಾನ್ ಸ್ಥಾಪಯಿಷ್ಯತಿ ರಾಘವಃ ।
ಚಾತುರ್ವರ್ಣ್ಯಂಚ ಲೋಕೇಸ್ಮಿನ್ಸ್ವೇಸ್ವೇ ಧರ್ಮೇ ನಿಯೋಕ್ಷ್ಯತಿ ॥

ಶ್ರೇಷ್ಠವಾದ ಗುಣಗಳುಳ್ಳ ರಾಜವಂಶದವರನ್ನೂ ತನ್ನ ರಾಜ್ಯದಲ್ಲಿ ನಾಲ್ಕು ವರ್ಣದವರೂ ಅವರವರ ಧರ್ಮವನ್ನು ಬಿಡದೆ ಸುಖವಾಗಿ ಇರುವಹಾಗೆ ಅಲ್ಲಲ್ಲಿ ನೆಲೆಗೊಳಿಸುವನು.

ದಶವರ್ಷ ಸಹಸ್ರಾಣಿ ದಶವರ್ಷ ಶತಾನಿಚ ।
ರಾಮೋರಾಜ್ಯಮುಪಾಸಿತ್ವಾ ಬ್ರಹ್ಮಲೋಕಂ ಗಮಿಷ್ಯತಿ ॥

ಈ ರೀತಿಯಾಗಿ ಶ್ರೀರಾಮನು ಈ ಭೂಲೋಕದಲ್ಲಿ ಹನ್ನೊಂದುಸಾವಿರ ವರ್ಷಗಳು ರಾಜ್ಯಭಾರಮಾಡಿ ನಂತರ ಬ್ರಹ್ಮಲೋಕಕ್ಕೆ ಪ್ರಯಾಣಮಾಡುವನು.

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಂ ।

ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೆ॥

ಪವಿತ್ರವಾಗಿಯೂ ಪಾಪ ನಿವಾರಕವಾಗಿಯೂ ಪುಣ್ಯಕರವಾಗಿಯೂ ಮತ್ತು ವೇದಕ್ಕೆ ಸಮಾನವಾಗಿಯೂ ಇರುವ ಈ ರಾಮ ಚರಿತ್ರೆಯನ್ನು ಯಾವನು ಪಠಿಸುತ್ತಾನೆಯೋ ಅವನ ಪಾಪಗಳೆಲ್ಲವೂ ನಾಶವಾಗುವವು.

ಏತದಾಖ್ಯಾನಮಾಯುಷ್ಯಂ ಪಠನ್ರಾಮಾಯಣಂ ನರಃ ।
ಸಪುತ್ರಪೌತ್ರಸ್ಸಗಣಃ ಪ್ರೇತ್ಯಸ್ವರ್ಗೇ ಮಹೀಯತೇ ॥

ಆಯುಸ್ಸನ್ನು ಹೆಚ್ಚಿಸುವ ಈ ರಾಮಾಯಣವನ್ನು ಯಾರು ಪಠಿಸುವರೋ ಅವರು ಈ ಲೋಕದಲ್ಲಿ ಪುತ್ರಪೌತ್ರ ಬಂಧುಗಳೊಡನೆ ಸುಖವಾಗಿದ್ದು ನಂತರ ಸ್ವರ್ಗ ಸುಖವನ್ನು ಹೊಂದಿ ಅಲ್ಲಿ ಗೌರವಿಸಲ್ಪಡುವರು.

ಪಠನ್ದ್ವಿಜೋ ವಾಗೃಷಭತ್ವಮೀಯಾತ್ ।
ಸ್ಯಾತ್ಕ್ಷತ್ರಿಯೋ ಭೂಮಿ ಪತಿತ್ವಮೀಯಾತ್ ।
ವಣಿಗ್ಜನಃ ಪಣ್ಯಫಲತ್ವಮೀಯಾತ್ ।
ಜನಶ್ಚ ಶೂದ್ರೋಽಪಿ ಮಹತ್ವಮೀಯಾತ್ ॥

ಬಾಲರಾಮಾಯಣಂ (ಸಂಕ್ಷೇಪ ರಾಮಾಯಣಂ)
॥ ಸಮಾಪ್ತಂ ॥

ಇದನ್ನು ಭಕ್ತಿಯಿಂದ ಪಠಿಸಿದ ಬ್ರಾಹ್ಮಣರಿಗೆ ವಿದ್ಯಾ ಸರಸ್ವತಿಯು ಒಲಿಯುವಳು. ಕ್ಷತ್ರಿಯರು ಭೂಮಿಗೆ ಅಧಿಪತಿಯಾಗುವ ಶಕ್ತಿಯನ್ನು ಹೊಂದುವರು. ವೈಶ್ಯರು ವ್ಯಾಪಾರದಿಂದ ಧನಸಂಪನ್ನರಾಗುವರು. ಶೂದ್ರರು ವಿಶೇಷ ಗೌರವವನ್ನು ಹೊಂದಿ ಮಹನೀಯರಾಗುವರು.

ಇಲ್ಲಿಗೆ ಬಾಲರಾಮಾಯಣ (ಸಂಕ್ಷೇಪ ರಾಮಾಯಣ) ಸಂಪೂರ್ಣವಾಯಿತು.

ಪುಸ್ತಕ ದೊರೆಯುವ ಸ್ಥಳ:

ಆರ್. ರಾಮಚಂದ್ರರಾವ್,

೯೬/೩, ೩ನೆಯ ಕ್ರಾಸ್, ಗವೀಪುರಂ ಎಕ್ಸ್‌ಟೆನ್ಷನ್,

ಬೆಂಗಳೂರು-೪.